# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

**KENDHOOLI** *Kannada Weekly*


kendhooli.com/e-paper/


**ಈ ಜಾತಿ ದಾಂಧಲೆ ತೆಂಡುಲ್ಕರ್ ಮನೆ ಮುಂದೆ ನಡೆದಿದ್ದರೆ!**



ಡಿ.ಉಮಾಪತಿ
ಅವರ ಅಂಕಣದಲ್ಲಿ


Volume-01 | Issue-39 PAGE-16 | Rs.16/- AUGUST 12 TO AUGUST 18 , 2021 MAG(2)Npp/49/2020-21

## ಬೊಮ್ಮಾಯಿ ಸಂಪುಟದ ಮೊದಲ ವಿಕೆಟ್ ಪತನ



# ಇಂತಹ ದುರಹಂಕಾರದ ರಾಜಕಾರಣಿಗಳು ಬೇಕೆ..?

## "ತ್ಯಾಗ"ರಾಜರ ಖಾತೆ ಕ್ಯಾತೆ

ಎಂ.ಕೆ. ಭಾಸ್ಕರ ರಾವ್
ಅವರ ಅಂಕಣದಲ್ಲಿ

## ಸಿನಿಮಾ ಮಂದಿಯ ನಿರ್ಲಕ್ಷ್ಯಕ್ಕೆ ಇನ್ನೆಷ್ಟು ಬಲಿ?

## ಭಾಷೆ, ಸಂಸ್ಕೃತಿ-ಸೊಗಡಿಗೆ ಬೆಂಕಿ ಇಡುವ ರಾಷ್ಟ್ರೀಯ ಶಿಕ್ಷಣ ನೀತಿ

# ತುರುವನೂರಿನ "ಈಚಲು ಮರದ ಚಳವಳಿ"

ಅದೇಕೋ ಏನೋ ಆಗಸ್ಟ್ ತಿಂಗಳು ಬಂದರೆ ನಮ್ಮ ಊರಿನ ನೆನಪು ತುಂಬಾ ಕಾಡುತ್ತದೆ. ಅಲ್ಲಿನ ಘಟನಾವಳಿಗಳು ಹಿರಿಯರ ಆ ನಿರ್ಧಾರದ ಹೋರಾಟಗಳ ಬಗ್ಗೆ ಇದ್ದ ಕಿಚ್ಚು ನನ್ನನ್ನು ಕಾಡುತ್ತಿರುತ್ತವೆ. ನಾವು ಚಿಕ್ಕವರಾದಾಗ ನಮ್ಮ ಹಿರಿಯರಿಂದ ಚಳವಳಿಯ ಕುರಿತು ಒಬ್ಬೊಬ್ಬರು ಒನ್ನೊಂದು ಭಾಗವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ತೊಡಗಿಸಿಕೊಂಡ ವಿಭಿನ್ನ ರೀತಿಯ ಆ ಸ್ಮರಣೆಗಳು ಬಹುಶಃ ಕರ್ನಾಟಕದಲ್ಲಿ ಈಸೂರು ಚಳವಳಿ ಹೊರೆತು ಪಡೆಸಿದರೆ ತುರುವನೂರಿನಲ್ಲಿ ನಡೆದ 'ಈಚಲು ಮರ ಚಳವಳಿ'ಯೇ ಅತ್ಯಂತ ದೊಡ್ಡ ಚಳವಳಿ ಎಂದು ಕರೆಯಬಹುದು. ಆದರೆ ಯಾಕೋ ಏನೋ ಈ ಘಟನೆಗಳು ಇತಿಹಾಸದಲ್ಲಿ ದಾಖಲಾಗಲಿಲ್ಲ. ಕೆಲವು ಘಟನೆಗಳನ್ನು ಹೊರೆತು ಪಡಿಸಿದರೆ ಎಲ್ಲಿಯೂ ದಾಖಲೆ ಸಿಗುವುದಿಲ್ಲ.

ಎಸ್ ನಿಜಲಿಂಗಪ್ಪ ಅವರ ಕೃತಿಯಲ್ಲಿ ಒಂದಿಷ್ಟು ಘಟನೆಗಳನ್ನು ನೆನಪಿಸಿಕೊಂಡಿದ್ದಾರೆ. ಅದನ್ನು ಹೊರತುಪಡಿಸಿದರೆ ಎಲ್ಲಿಯೂ ದಾಖಲಾಗಲಿಲ್ಲ.

ನಾನು ಪಿಯುಸಿ ನಂತರದ ದಿನಗಳಲ್ಲಿ ಊರಿನ ಆ ಘಟನಾವಳಿಗಳ ಬಗ್ಗೆ ಬಹುತೇಕ ಹಿರಿಯರಲ್ಲಿ ಕೇಳಿ ತಿಳಿದುಕೊಂಡು ದಾಖಲೆ ಮಾಡುವ ಕೆಲಸವನ್ನು ಮಾಡುತ್ತಲೇ ಇದ್ದೇನೆ. ಆ ಹೊತ್ತಿನಲ್ಲಿ ಸಾಹಿತಿ ಜಿ.ಟಿ.ಸ್ವಾಮಿ ಅವರ ಮನೆಗೆ ಪ್ರತಿ ದಿನ ಸಂಜೆ ಹೊತ್ತಿನಲ್ಲಿ ಅವರ ಪುತ್ರ ಹೇಮಣ್ಣಗೌಡ ಜೊತೆಗೆ ಹೋಗುತ್ತಿದ್ದ ಉದ್ದೇಶವೇ ಸಾಹಿತ್ಯ ಚರ್ಚೆ ಮತ್ತು ಸ್ವಾತಂತ್ರ್ಯ ಚಳವಳಿಯ ಆ ಹಲವಾರು ಘಟನಾವಳಿಗಳನ್ನು ಅವರು ತಿಳಿಸುತ್ತಿದ್ದರು. ಆದರೆ ಈ ಘಟನೆಗಳು ಇತಿಹಾಸದಲ್ಲಿ ದಾಖಲಾಗದೆ ಇರಲು ಕಾರಣಗಳನ್ನು ಕೇಳಿದ್ದೇನೆ. ಆದರೆ ಅದಕ್ಕೆ ಅವರಿಂದ ಬಂದ ಉತ್ತರ ಯಾರು ಅದರ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ ಎನ್ನುವುದು.

ಎಲ್ಲಾ ಘಟನೆಗಳು ನಾನು ದಾಖಲಿಸಿಕೊಂಡಿದ್ದೇನೆ, ಇನ್ನೂ ದಾಖಲಿಸುತ್ತಲೇ ಇದ್ದೇನೆ. ಆದರೆ ನನಗೆ ಒಂದು ನೆನಪಾಗುವುದು 'ಮೈಸೂರು ಮಲ್ಲಿಗೆ ಚಿತ್ರ, ಈ ಚಿತ್ರದಲ್ಲಿ ಬರುವ ಬಹುತೇಕ ಸನ್ನಿವೇಶಗಳು ನಮ್ಮ ತುರುವನೂರಿನಲ್ಲಿ ನಡೆದ ಘಟನವಾಳಿಗಳೇ ಆಗಿವೆ. ಪ್ರೇಮ ಸನ್ನಿವೇಶಗಳು ಹೊರೆತು ಪಡಿಸಿದರೆ ಠಾಣೆಗಳ ಮೇಲೆ, ಸರ್ಕಾರಿ ಕಚೇರಿಗಳ ಮೇಲೆ ಧ್ವಜ ಹಾರಿಸುವ, ಕದ್ದು ವಾರ್ತಾಪತ್ರಿಕೆ ತಂದು ಓದುವುದು, ಬಿತ್ತಿ ಪತ್ರಗಳನ್ನು ಹಂಚುವುದು, ಪುಂಡುಗಂದಾಯ ಹಾಕುವುದು, ಶಾನಭೋಗರು ಊರಿನವರಿಂದ ಪುಂಡುಗಂದಾಯ ಹಾಕುತ್ತಿದ್ದ ಮತ್ತು ಬ್ರಿಟಿಷ್ ಅಧಿಕಾರಿಗಳ ಜೊತೆ ನಡೆಸುತ್ತಿದ್ದ ಸಂಭಾಷಣೆಗಳು ಕೂಡ ತುರುವನೂರಿನಲ್ಲಿ ನಡೆದ ಘಟನಾವಳಿಗಳೆ. ಹಾಗಂತ ಆ ಚಿತ್ರದಲ್ಲಿರುವ ಘಟನಾವಳಿಗಳೆಲ್ಲ ತುರುವನೂರಿನವಲ್ಲ. ಆದರೆ ಆ ಎಲ್ಲಾ ಘಟನಾವಳಿಗಳು ತುರುವನೂರಿನಲ್ಲಿ ನಡೆದಿವೆ. ಆ ಇತಿಹಾಸವನ್ನು ನಮ್ಮ ಹಿರಿಯರು ನನಗೆ ಹೇಳಿದ ಆ ಘಟನೆಗಳು ನೆನಪಿನಲ್ಲಿ ಹಾಗೆಯೇ ಉಳಿದಿವೆ.

ಇಲ್ಲಿ ಇನ್ನೊಂದು ವಿಷಯವನ್ನು ನೆನಪಿಸಲೇಬೇಕಾಗುತ್ತದೆ. ಅನಸೂಯರಾಮರೆಡ್ಡಿ ಅವರು ಬರೆದ 'ಈಚಲು ವನ' ಎನ್ನುವ ಕಾದಂಬರಿಯಲ್ಲಿ ನಮ್ಮ ಊರಿನ ಘಟನಾವಳಿಗಳೆ



ಹೇಳಿ ಕೇಳಿ ಅನಸೂಯರಾಮರೆಡ್ಡಿ ಅವರು ನಮ್ಮ ಊರಿನವರೆ. ಆ ಘಟನಾವಳಿಗಳನ್ನು ತಮ್ಮ ಕಣ್ಣೆದುರಿಗೆ ನೋಡಿದವರು. ಹಾಗಾಗಿಯೇ ಆ ಕಾದಂಬರಿಯಲ್ಲಿ ಒಂದು ಪ್ರೇಮವನ್ನು ಆಧಾರವಾಗಿಟ್ಟುಕೊಂಡು ತುರುವನೂರಿನ ಹೆಸರಿನ ಬದಲಾಗಿ ' 'ಚಿಕ್ಕೂರು' ಎಂದು ಬದಲಾಯಿಸಿ ಈಚಲು ಮರದ ಚಳವಳಿಯ ಕುರಿತು ಬರೆದಿದ್ದಾರೆ. ಈ ಕಥೆಯ ಎಲ್ಲಾ ಘಟನಾವಳಿಗಳು 'ಮೈಸೂರು ಮಲ್ಲಿಗೆ'ಯ ಚಿತ್ರದಲ್ಲಿ ಬಿಂಬಿತವಾಗಿವೆ. ಹಾಗಂತ ಇದು 'ಈಚಲು ವನ' ಕಾದಂಬರಿ ಆಧಾರವಾಗಿಟ್ಟುಕೊಂಡು ಚಿತ್ರ ಮಾಡಿದ್ದಲ್ಲ. ನಿರ್ದೇಶಕ ನಾಗಾಭರಣ ಅವರು ಕೆ.ಎಸ್.ನರಸಿಂಹ ಸ್ವಾಮಿ ಅವರ ಕವನಗಳನ್ನು ಆಧಾರವಾಗಿಟ್ಟುಕೊಂಡು ಸ್ವಾತಂತ್ರ್ಯ ಚಳವಳಿಯ ಘಟನಾವಳಿಗಳನ್ನು ಪ್ರಸ್ತಾಪಿಸಿದ್ದಾರೆ. ಇಂತಹ ಕಾದಂಬರಿಗಳು ಮೈಸೂರು ಮಲ್ಲಿಗೆ ಚಿತ್ರದ ಎಳೆಗೆ ಸೇರಿಕೊಂಡಿರಬಹುದು ಎನ್ನುವುದು ನನ್ನ ಅಭಿಪ್ರಾಯ.


ಇದು ನಾನು ಮೈಸೂರು ಮಲ್ಲಿಗೆ ಚಿತ್ರ ಬಿಡುಗಡೆಯಾದಾಗಿನಿಂದಲೂ ಬಹುತೇಕ ನಮ್ಮ ಊರಿನ ಹಲವಾರು ಮಂದಿಯ ಬಳಿ ಪ್ರಸ್ತಾಪಿಸಿದ್ದೇನೆ. ಕೆಲ ಹಿರಿಯರು ಈ ಚಿತ್ರವನ್ನು ನೋಡಿ ನಮ್ಮ ಊರಿನ ಘಟವಾವಳಿಗಳೆ ಹೆಚ್ಚಾಗಿವೆ ಎಂದು ಹೇಳಿದವರು ಇದ್ದಾರೆ.

ಇರಲಿ ನಾನು ಹೇಳ ಹೊರಟಿರುವುದು ನಮ್ಮ ಊರಿನ ಸ್ವಾತಂತ್ರ್ಯ ಚಳವಳಿ ಘಟನಾವಳಿಗಳ ಗುರುತು ಹೇಗೆ ಆರಂಭವಾಯಿತು. ಹೇಗೆ ಆ ಚಳವಳಿ ಪ್ರಸಿದ್ಧಿ ಹೊಂದಿತು ಎಂದು.

1936 ರಿಂದಲೂ ಕೂಡ ತುರುವನೂರಿನಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಅಣಿಯಾಗುತ್ತಾರೆ. ಗಾಂಧೀಜಿ ಅವರ ಮಾತುಗಳು ಮತ್ತು ಅವರ ಸಂದೇಶಗಳ ಮೂಲಕ ಚಳವಳಿಗೆ ದುಮುಕುತ್ತಾರೆ. ಈ ಹೊತ್ತಿನಲ್ಲಿಯೇ ಎಸ್.ನಿಜಲಿಂಗಪ್ಪ ಅವರು ಕೂಡ ನಮ್ಮ ಊರಿನ ಹಿರಿಯರ ಸಭೆ ಸೇರಿಸಿ ಈ ಚಳವಳಿಯ ಉದ್ದೇಶಗಳನ್ನು ತಿಳಿಸುತ್ತಿದ್ದರು. ಇದಕ್ಕೆ ಎದೆಗುಂದದ ಊರಿನ ಹಿರಿಯರು, ಸುಮಾರು ನೂರಾರು ಮಂದಿ ತಮ್ಮ ಕಿಚ್ಚನ್ನು ಹಚ್ಚುತ್ತಲೇ ಮುನ್ನಡೆದರು. ಅವಕಾಶ ಸಿಕ್ಕಾಗಲೆಲ್ಲ ಪೊಲೀಸರ ಮುಂದೆಯೇ 'ಭಾರತ್ ಮಾತಾಕಿ ಜೈ' ಎನ್ನುವ ಘೋಷಣೆಗಳನ್ನು ಕೂಗುತ್ತಲೆ ತಮ್ಮ ಚಳವಳಿಯ ಹಾದಿಯನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡಿದ್ದರು.

1936ರಲ್ಲಿ ಚಿಕ್ಕದಾಗಿ ಆರಂಭವಾದ ಆಂದೋಲನ 1939ರ ಹೊತ್ತಿಗೆ ಹೆಚ್ಚು ಗಮನಸೆಳೆಯುತ್ತಾ ಹೋಯಿತು. ದೇಶದ ಸ್ವಾತಂತ್ರ್ಯ ಚಳವಳಿಯ ಕುರಿತು ಚಟುವಟಿಕೆಗಳನ್ನು ತಿಳಿಯಲು ದಿನನಿತ್ಯ ವಾರ್ತಾಪತ್ರಿಕೆಗಳನ್ನು ತರಿಸುತ್ತಿದ್ದರು. ಆದರೆ ಅದನ್ನು ಬಹಿರಂಗ ಪಡಿಸುವ ಹಾಗಿರಲಿಲ್ಲ. ಹೀಗಾಗಿ ಪ್ರತಿ ನಿತ್ಯ ಸಾಯಂಕಾಲ ಕಲ್ಲೇಶ್ವರ ದೇವಸ್ಥಾನ ಅಥವಾ ಆಂಜನೇಯ ದೇವಸ್ಥಾನದ ಬಳಿ ಜನ ಸೇರುತ್ತಿದ್ದರು. ಮೂಲಂಗಿ ಮಂಜುನಾಥ್, ಸಾದಾ ಅನಂತರೆಡ್ಡಿ ಅಥವಾ ಎಮ್.ಹನುಮಂತಪ್ಪ ಪತ್ರಿಕೆಯಲ್ಲಿ ಬಂದ ಸುದ್ದಿಯನ್ನು ಓದುತ್ತಿದ್ದರೆ, ಜನರು ಅ ದೇಶದಲ್ಲಿ ನಡೆಯುತ್ತಿದ್ದ ಸುದ್ದಿಯನ್ನು ತಿಳಿದುಕೊಳ್ಳುತ್ತಿದ್ದರು. ಹೀಗೆ ಆಂದೋಲನದ ಚಟವಟಿಕೆಗಳು ನಡೆಯುತ್ತಿದ್ದವು. ಮಹಾತ್ಮ ಗಾಂಧೀಜಿ ಅವರು ಕರೆ ನೀಡಿದ್ದ ಅರಣ್ಯ ಸತ್ಯಾಗ್ರಹ ಕುರಿತು ಮಾಹಿತಿ ಪಡೆದುಕೊಂಡಿದ್ದ ತುರುವನೂರಿನ ನೂರಾರು ಯುವಕರು ಊರಿನಲ್ಲಿ ಈಚಲ ಮರ ಕಡಿಯುವ ಮೂಲಕ ಸತ್ಯಾಗ್ರಹದಲ್ಲಿ ಭಾಗಿಯಾಗಲು ನಿರ್ಧರಿಸಿದ್ದರು. ಇದು ಎಸ್.ನಿಜಲಿಂಗಪ್ಪ ಅವರ ನೇತೃತ್ವದಲ್ಲಿ ನಡೆದ ಚಳವಳಿ.

1939ರ ಸೆಪ್ಟಂಬರ್ 18 ರಂದು ಈಚಲ ಮರ ಕಡಿಯುವ ನಿರ್ಧಾರ ಮಾಡಿದ್ದು ಅಂದು. ಈ ವೇಳೆ ಪ್ರತಿ ದಿನ ಐದೈದು ಮಂದಿ ಹೋಗಿ ಈಚಲ ಮರ ಕಡಿಯುವ ತೀರ್ಮಾನಕ್ಕೆ ಬಂದು ಐದೈದು ಜನ ಹೋಗಿ ಈಚಲ ಮರ ಕಡೆದ ವೀರರು, ರಾಜಶೇಖರಯ್ಯ ಹಿರೇಮಠ್, ಎಂ.ರಾಮರೆಡ್ಡಿ, ತಿಮ್ಮನ ಗೌಡ್ರ ತಿಪ್ಪಣ್ಣ, ನೇಟಿಕಲ್ ಹನುಮಂತಪ್ಪ, ಎರವ ನಾಗಪ್ಪ. ಅಂದು ಆ ದೃಶ್ಯಗಳು




ಹೇಗಿದ್ದವು ಎನ್ನುವುದನ್ನು ಕೂಡ ಹಿರಿಯರು ಭಾವಾವೇಶದಿಂದಲೇ ನೆನಪಿಸಿಕೊಳ್ಳುತ್ತಾರೆ.

ಇವರು ಈಚಲ ಮರಗಳನ್ನು ಕಡಿಯಲು ಕೊಡಲಿಗಳನ್ನು ಹೆಗಲಿಗೇರಿಸಿಕೊಂಡು ಊರ ದೇವತೆಯಾದ ಮಾರಮ್ಮನ ದೇವಸ್ಥಾನದ ಬಳಿ ಬಂದರು. ಆ ದಿನ ಇಡೀ ಊರ ಜನತೆ ಮತ್ತು ಸುತ್ತಮುತ್ತಲು ಅನೇಕ ಗ್ರಾಮಗಳಿಂದ ಬಂದ ಜನತೆ ಹೆಣ್ಣು-ಗಂಡು ಮಕ್ಕಳು ಎಂಬ ಬೇಧವಿಲ್ಲದೆ ಎಲ್ಲರೂ ಸೇರಿದರು. ಜನ ಜಾತ್ರೆಯೇ ಜಾತ್ರೆ. ಸಾಕಷ್ಟು ಪೊಲೀಸ್ ಮತ್ತು ರಿಸರ್ವ್ ಪೊಲೀಸ್ ಬಂದೂಕು, ಲಾಠಿ ಸಮೇತ ಬಂದು ಉಸ್ತುವಾರಿಗಾಗಿ ನಿಂತಿತ್ತು. ಈ ಐದು ಮಂದಿಗೆ ಹೂವಿನಹಾರ ನೂಲಿನಹಾರಗಳನ್ನು ಹಾಕಿ ಹಣೆಗೆ ಕುಂಕುಮ ಹಚ್ಚಿ, ಮುತ್ತೈದೆಯರು ಆರತಿ ಎತ್ತಿ ಜೈ ಬೋಲೊ ಭಾರತ ಮಾತಾ ಕೀ, ಜೈ ಭೋಲೊ ಮಹಾತ್ಮಾ ಗಾಂಧೀಜಿ ಕೀ, ವಂದೇಮಾತರಂ. ಏನೇ ಬರಲಿ-ಒಗ್ಗಟ್ಟಿರಲಿ, ಶಾಂತಿ-ಶಿಸ್ತು ಮುಂತಾದ ಹಲವಾರು ಘೋಷಣೆಗಳು ಮುಗಿಲು ಮುಟ್ಟುವುದರ ಮೂಲಕ ಬೀಳ್ಕೊಡುಗೆಯ ಮೆರವಣಿಗೆ ಪ್ರಾರಂಭವಾಗುತ್ತದೆ. ಮುತ್ತೈದೆಯರು ಆರತಿ ಎತ್ತಿ ಹಣೆಗೆ ಕುಂಕುಮ ಇಟ್ಟು ಶುಭ ಹಾರೈಸಿದರು. ಇದಾದ ನಂತರ 2 ಮೈಲಿ ದೂರದಲ್ಲಿರುವ ದೇವರ ಮರದ ಹಳ್ಳದ ಬಳಿಗೆ ಈ ಉತ್ಸವ ಬಂದು ತಲುಪಿತು. ಈ ಹಳ್ಳದ ತುಂಬಾ ಸಾವಿರಾರು ಈಚಲ ಮರಗಳು. ಅನೇಕ ಮರಗಳಿಗೆ ಅಲ್ಲಲ್ಲಿ ಹೆಂಡ ಇಳಿಸುವ ಮಡಿಕೆಗಳನ್ನು ಕಟ್ಟಿದ್ದರು.

ಈ ಸ್ಥಳಕ್ಕೆ ಆ ಸಮಯದಲ್ಲಿ ಎಸ್ ನಿಜಲಿಂಗಪ್ಪ, ಬಳ್ಳಾರಿ ಸಿದ್ದಮ್ಮ , ನಾಗರತ್ನಮ್ಮ ಹಿರೇಮಠ, ದುಮ್ಮಿ ಮುರಿಗಪ್ಪ ಮೊದಲಾದವರು ಆಗಮಿಸಿ ಅರಣ್ಯ ಸತ್ಯಾಗ್ರಹ ಮತ್ತು ಅಸಹಕಾರ ಚಳವಳಿಯ ಉದ್ದೇಶಗಳ ಕುರಿತು ಭಾಷಣ ಮಾಡುತ್ತಾರೆ. ಇದಾದ ನಂತರ ಈಚಲ ಮರ ಕಡಿಯಲು ನಿರತರಾದಾಗ ಆ ಐದು ಜನರನ್ನು ಪೊಲೀಸರು ಬಂಧಿಸಿ ಕರೆದುಕೊಂಡು ಹೋಗುತ್ತಾರೆ. ಅದೇ ದಿನ ರಾತ್ರಿ ಎಸ್.ನಿಜಲಿಂಗಪ್ಪ ಅವರನ್ನು ಬಂಧಿಸುತ್ತಾರೆ. ಹೀಗೆ ಬಂಧಿತರಾದ ಎಸ್.ನಿಜಲಿಂಗಪ್ಪ ಸೇರಿ ಎಲ್ಲರೂ ಕೂಡ ಎರಡು ವರ್ಷ ಜೈಲು ವಾಸ ಅನುಭವಿಸುತ್ತಾರೆ. ಈ ಈಚಲ ಮರ ಚಳವಳಿಯನ್ನು ಅಷ್ಟಕ್ಕೆ ಬಿಡದೆ ಗ್ರಾಮದ ಜನ ನಿರ್ಧರಿಸಿದಂತೆ ಪ್ರತಿ ದಿನ ಐದೈದು ಜನ ಹೋಗಿ ಈಚಲ ಮರಗಳನ್ನು ಕತ್ತರಿಸಲು ಅಣಿಯಾಗುತ್ತಿದ್ದಂತೆ ಪೊಲೀಸರು ಅವರನ್ನು ಬಂಧಿಸುತ್ತಿದ್ದರು. ಹೀಗೆ ಒಟ್ಟು 30 ಮಂದಿಯನ್ನು ಪೊಲೀಸರು ಬಂಧಿಸುತ್ತಾರೆ. ಆದರೆ ಈ ಅರಣ್ಯ ಸತ್ಯಾಗ್ರಹ ಊರಲ್ಲಿ ನಿಲ್ಲುವುದಿಲ್ಲ. ಚಳವಳಿ ಮತ್ತಷ್ಟು ತೀವ್ರಗೊಂಡು ಇಡೀ ಊರಿನ ಜನ ಈ ಆಂದೋಲನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಭಾಗಿಯಾಗಿದ್ದಾರೆ.

● 4ನೇ ಪುಟಕ್ಕೆ...

(ಸಂಪಾದಕರು)


## ಪ್ರಿಯ ಓದುಗರೆ

'ಕೆಂಧೂಳಿ' ಪತ್ರಿಕೆಯನ್ನು ಒಂದು ಒಳ್ಳೆ ಉದ್ದೇಶದಿಂದ ಆರಂಭಿಸಲಾಗಿದೆ, ಗುಣಮಟ್ಟ,ಓದುಗರಿಗೆ ಅಗತ್ಯ ವಿಶ್ಲೇಷಣಾತ್ಮಕ ವರದಿಗಳು ಸೇರಿದಂತೆ ಯಾವುದರಲ್ಲೂ ರಾಜೀಯಾಗದೆ ತನ್ನ ಗುಣಾತ್ಮಕವನ್ನು ಕಾಯ್ದುಕೊಂಡು ನಿಮ್ಮ ಮುಂದೆ ಬರಲಿದೆ. ಹೀಗಾಗಿ ಪತ್ರಿಕೆಗೆ ಓದುಗರೆ ಅಗತ್ಯವಾಗಿರುವುದರಿಂದ ಆದಷ್ಟು ಕೊಂಡು ಓದಿ ಪತ್ರಿಕೆಯನ್ನು ಬೆಳಸಿ ಎನ್ನುವುದು ನಮ್ಮ ಕಳಕಳಿಯ ಮನವಿ. ಅಲ್ಲದೆ ಪತ್ರಿಕೆ ಬೆಳವಣಿಗೆಗೆ ಆರ್ಥಿಕ ಸಹಾಯವೂ ಅಷ್ಟೆ ಅಗತ್ಯವಾಗಿದೆ, ಈ ಕಾರಣಕ್ಕಾಗಿ ತಾವು ಚಂದಾದಾರ ರಾಗುವ ಮೂಲಕ ತಮ್ಮ ಪತ್ರಿಕೆ ಬೆನ್ನೆಲುಬಾಗಿ ನಿಂತುಕೊಳ್ಳುಬೇಕು ಎನ್ನುವುದು ತಮ್ಮ ಬೇಡಿಕೆ.

-ಪ್ರಧಾನ ಸಂಪಾದಕ

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109



ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

ಅನಾವರಣ

# ಮರುನಾಮಕರಣ ಎಂಬ ದ್ವೇಷ ರಾಜಕಾರಣದ ಒಂದು ಭಾಗ

ಇಟ್ಟ ಹೆಸರುಗಳನ್ನು ಮರುನಾಮಕರಣಗಳನ್ನು ಮಾಡುವ ಮೂಲಕ ಅಧಿಕಾರಕ್ಕೆ ಬಂದ ಸರ್ಕಾರಗಳು ಮಾಡುವ ದೊಡ್ಡ ಸಾಧನೆಯೇ? ಇಂತ ಸಾಧನೆಗಳ ಹಾದಿ ತೋರಿಸುತ್ತಾ ಎಲ್ಲಾ ಸರ್ಕಾರಗಳು ಮಾಡುತ್ತಲೇ ಬಂದಿವೆ ಈಗ ಮೋದಿ ಸರ್ಕಾರ ಒಂದಿಷ್ಟು ಹೆಚ್ಚು ಅದರ ಭಾಗವಾಗಿ ಇದೆ ಅಷ್ಟೆ .ಆದರೆ ಒಂದು ಬಾರಿ ಯೋಜನೆಯೊಂದಕ್ಕೆ ಆಟದ ಮೈದಾನಗಳಿಗೆ, ಪ್ರಶಸ್ತಿಗಳಿಗೆ ಇಟ್ಟ ಹೆಸರನ್ನು ಮತ್ತೊಮ್ಮೆ ಮರುನಾಮಕರಣ ಮಾಡುವುದು ಸೂಕ್ತವಲ್ಲ ಎಷ್ಟೇ ದ್ವೇಷ ಇರಬಹುದು ಅಂತ ಹೆಸರುಗಳನ್ನು ಬದಲಾಯಿಸುವ ಮಟ್ಟಕ್ಕೆ ಸರ್ಕಾರಗಳು ಇಳಿಯಬಾರದು ಆದರೆ ದುರಂತ ಅದು ಆಗುತ್ತಿದೆ.

ಸರ್ಕಾರಗಳು ತಮ್ಮ ಆಡಳಿತದ ವೈಫಲ್ಯವನ್ನು ಮರೆಮಾಚಿ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರಗಾರಿಕೆ ಪುನರ್ ನಾಮಕರಣಗಳ ಹಿಂದಿದೆ.

ಕೋವಿಡ್ ಎರಡನೇ ಅಲೆಯಿಂದ ಚೇತರಿಸಿಕೊಳ್ಳುವ ಮೊದಲೇ ಮೂರನೇ ಅಲೆಯ ಆತಂಕ ದೇಶವನ್ನು ಕಾಡುತ್ತಿದೆ. ಇಂಥ ಸಂಕಷ್ಟದ ಸಮಯದಲ್ಲಿ ಆರೋಗ್ಯ ಕ್ಷೇತ್ರವನ್ನು ಬಲಪಡಿಸುವ ಹಾಗೂ ಜನರ ನೈತಿಕ–ಆರ್ಥಿಕ ಶಕ್ತಿಯನ್ನು ಹೆಚ್ಚಿಸಲು ಅಗತ್ಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದ ಸರ್ಕಾರ, ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ ಹೆಸರನ್ನು 'ಮೇಜರ್ ಧ್ಯಾನಚಂದ್ ಖೇಲ್ ರತ್ನ' ಪ್ರಶಸ್ತಿ ಎಂದು ಬದಲಾಯಿಸಲು ನಿರ್ಧರಿಸಿರುವ ಕೇಂದ್ರ ಸರ್ಕಾರದ ನಡೆ, ರಾಜಕಾರಣದ ಆಟವೇ ಹೊರತು ಕ್ರೀಡಾಸ್ಫೂರ್ತಿಯನ್ನು ಎತ್ತಿಹಿಡಿಯುವ ಪ್ರಯತ್ನವಂತೂ ಅಲ್ಲ ಎನ್ನುವುದು ಜನಸಾಮಾನ್ಯರಿಗೂ ಗೊತ್ತಿರುವ ಸಂಗತಿಯೇ.

ಇಂಥ ಉನ್ನತ ಪ್ರಶಸ್ತಿಯೊಂದರ ಹೆಸರು ಬದಲಿಸಿದ್ದನ್ನೇ ಸಾಧನೆಯಾಗಿ ಬಿಂಬಿಸಿಕೊಳ್ಳುವ ಮೂಲಕ ಜನರ ಗಮನವನ್ನು ಬೇರೆಡೆ ಸೆಳೆಯಲು ಹೊರಟಂತಿದೆ. ಹೆಸರು ಬದಲಿಸಿದ್ದೇ ಸಾಧನೆ ಎನ್ನುವಂತೆ ಸರ್ಕಾರ ಪ್ರಚಾರ ಪಡೆಯುವುದು ಹಾಗೂ ಅದನ್ನು ವಿರೋಧಿಸುವುದರಲ್ಲೇ ಪ್ರತಿಪಕ್ಷಗಳು ತಮ್ಮೆಲ್ಲ ಸಾಮರ್ಥ್ಯ ಬರಿದು ಮಾಡಿಕೊಳ್ಳುವುದು ಜನರಿಗೆ ಉತ್ತರದಾಯಿತ್ವ ಹೊಂದಿರುವ ರಾಜಕಾರಣದ ಲಕ್ಷಣವಲ್ಲ. ನಾಮಕರಣವೂ ಒಂದು ಸಾಧನೆ, ಪುನರ್ ನಾಮಕರಣವೂ ಒಂದು ಸಾಧನೆ ಎನ್ನುವ ಕೆಟ್ಟ ಮನಃಸ್ಥಿತಿಯಿಂದ ರಾಜಕೀಯ ಪಕ್ಷಗಳು ಹೊರಬರಬೇಕು

ಸರ್ಕಾರಿ ಕಾರ್ಯಕ್ರಮ ಅಥವಾ ಆಟದ ಮೈದಾನಗಳಿಗೆ ಹಿಂದಿನ ಸರ್ಕಾರಗಳು ಮಾಡಿದ ನಾಮಕರಣವನ್ನು ಅಧಿಕಾರದಲ್ಲಿರುವ ಪಕ್ಷ ಬದಲಾಯಿಸುವ ಕ್ಷುಲ್ಲಕ ರಾಜಕಾರಣದಿಂದ ಜನರಿಗೆ ಅಥವಾ ದೇಶದ ಅಭಿವೃದ್ಧಿಗೆ ಉಪಯೋಗವೇನೂ ನಾಲ್ಕು ದಶಕಗಳ ನಂತರ ಭಾರತೀಯ ಹಾಕಿ ಆಟಗಾರರು ಒಲಿಂಪಿಕ್ಸ್‌ನಲ್ಲಿ ಪದಕ ಸಾಧನೆ ಮಾಡಿರುವ ಸಂದರ್ಭವನ್ನು ಬಳಸಿಕೊಂಡಿರುವ ಸರ್ಕಾರ, ಭಾರತೀಯ ಹಾಕಿಯ ದಂತಕಥೆ ಧ್ಯಾನಚಂದ್ ಹೆಸರನ್ನು ರಾಜಕೀಯ ಕಾರಣಗಳಿಗಾಗಿ ನೆನಪಿಸಿಕೊಂಡಿದೆ. ಧ್ಯಾನಚಂದ್ ಅವರ ಹೆಸರಿನಿಂದ ಕ್ರೀಡಾಕ್ಷೇತ್ರದ ಉನ್ನತ ಪ್ರಶಸ್ತಿಯನ್ನು ಗುರುತಿಸುವುದೇನೋ ಸರಿಯೇ ಆದರೆ, ಈಗಾಗಲೇ ಇರುವ ಪ್ರಶಸ್ತಿಯೊಂದರ ಹೆಸರನ್ನು ಬದಲಿಸುವ ಮೂಲಕ ಧ್ಯಾನಚಂದ್ ಅವರನ್ನು ಗೌರವಿಸುವುದು ಸರಿಯಲ್ಲ. ಹಾಕಿ ಮಾಂತ್ರಿಕನಿಗೆ ಗೌರವ ಸಲ್ಲಿಸುವ ಉದ್ದೇಶ ಪ್ರಾಮಾಣಿಕವಾಗಿದ್ದಲ್ಲಿ, ಭಾರತೀಯ ಹಾಕಿಗೆ ಕಾಯಕಲ್ಪ ನೀಡಲು ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಯುವ ಹಾಕಿ ಆಟಗಾರರ ಶೋಧ ಹಾಗೂ ಅವರ ಸಾಮರ್ಥ್ಯವರ್ಧನೆಗೆ ಯೋಜನೆಗಳನ್ನು ರೂಪಿಸಬಹುದಿತ್ತು. ಅಲ್ಲದೆ, ಕ್ರೀಡಾಕ್ಷೇತ್ರಕ್ಕೆ ಸಲ್ಲಿಸಿದ ಜೀವಮಾನ ಸಾಧನೆಗಾಗಿ ಧ್ಯಾನಚಂದ್ ಹೆಸರಿನ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಈಗಾಗಲೇ ನೀಡುತ್ತಿದೆ. ಈಗ ಧ್ಯಾನಚಂದ್‌ರ ಹೆಸರಿನಿಂದಲೇ ಮತ್ತೊಂದು ಪ್ರಶಸ್ತಿಯನ್ನು ನೀಡಲು ಹೊರಟಿರುವುದು ಹಲವು ಪ್ರಶ್ನೆಗಳಿಗೆ ಎಡೆಮಾಡಿಕೊಟ್ಟಿದೆ. ಒತ್ತಾಯಗಳನ್ನು ನಿರ್ಲಕ್ಷಿಸುವುದರಲ್ಲಿ ಸರ್ಕಾರದ ವಿವೇಕ ಮತ್ತು ಪ್ರಶಸ್ತಿಗಳ ಗೌರವ ಅಡಗಿದೆಕ್ರೀಡಾಪ್ರಶಸ್ತಿಗೆ ರಾಜಕಾರಣಿಯ ಹೆಸರು ಇರುವು ದನ್ನು ವಿರೋಧಿಸುವವರು ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವಾದ ಅಹಮದಾಬಾದ್‌ನ ಮೊಟೇರಾ ಸ್ಟೇಡಿಯಂಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಹೆಸರನ್ನು ನಾಮಕರಣ ಮಾಡಿದ್ದನ್ನು ನೆನಪಿಸಿಕೊಳ್ಳಬೇಕು. 'ಗುಜರಾತ್ ಸ್ಟೇಡಿಯಂ' ಎಂದು ಕರೆಸಿಕೊಳ್ಳುತ್ತಿದ್ದ ಕ್ರೀಡಾಂಗಣವನ್ನು 1982ರಲ್ಲಿ 'ಸರ್ದಾರ್ ಪಟೇಲ್ ಸ್ಟೇಡಿಯಂ' ಎಂದು ಹೆಸರಿಸಲಾಗಿತ್ತು. 2015–16ರಲ್ಲಿ ಮತ್ತೊಮ್ಮೆ ಕ್ರೀಡಾಂಗಣದ ಮರು ನಿರ್ಮಾಣಕ್ಕೆ ಚಾಲನೆ ದೊರೆತು, ಇತ್ತೀಚೆಗೆ ಪೂರ್ಣಗೊಂಡ ಅಂಗಳಕ್ಕೆ ನರೇಂದ್ರ ಮೋದಿ ಅವರ ಹೆಸರಿಡಲಾಗಿದೆ. ನರೇಂದ್ರ ಮೋದಿ ಅವರ ಬದಲಾಗಿ ಕ್ರಿಕೆಟ್ ಸಾಧಕರೊಬ್ಬರ ಹೆಸರನ್ನು ಕ್ರೀಡಾಂಗಣಕ್ಕೆ ನಾಮಕರಣ ಮಾಡುವ ಮೂಲಕ ಸರ್ಕಾರದ ಗೌರವ ಹೆಚ್ಚಿಸಿಕೊಳ್ಳುವ ಹಾಗೂ ಸಾರ್ವಜನಿಕವಾಗಿ ನೈತಿಕ ಮಾದರಿಯೊಂದಕ್ಕೆ ನಾಂದಿ ಹಾಡುವ ಅವಕಾಶವನ್ನು ಬಿಜೆಪಿ ಬಿಟ್ಟುಕೊಟ್ಟಿತ್ತು. ಪಕ್ಷದ ಮುಖಂಡರ ಹೆಸರುಗಳನ್ನು ಕ್ರೀಡಾಂಗಣಗಳಿಗೆ ಇರಿಸುವ ಕಾಂಗ್ರೆಸ್ ಪಕ್ಷದ ನಡವಳಿಕೆಯನ್ನು ವಿರೋಧಿಸಿಕೊಂಡು ಬಂದ ಬಿಜೆಪಿ, ಈಗ ಅಧಿಕಾರದಲ್ಲಿರುವಾಗ ಕಾಂಗ್ರೆಸ್ ದಾರಿಯಲ್ಲಿಯೇ ನಡೆದಿದೆ.

ಕೇಂದ್ರ ಸರ್ಕಾರದ ಪುನರ್ ನಾಮಕರಣದ ನಿರ್ಧಾರ ರಾಜ್ಯ ಸರ್ಕಾರಗಳಿಗೂ ಮಾದರಿಯಾಗಿ ಒದಗಿಬಂದಿದೆ. ಕರ್ನಾಟಕದಲ್ಲಿ ಬಡವರಿಗೆ ಕಡಿಮೆ ದರದಲ್ಲಿ ಆಹಾರ ನೀಡುತ್ತಿರುವ 'ಇಂದಿರಾ ಕ್ಯಾಂಟೀನ್'ಗಳನ್ನು ಅನ್ನಪೂರ್ಣೇಶ್ವರಿ ಹೆಸರಿನಲ್ಲಿ ಗುರುತಿಸ ಬೇಕೆನ್ನುವ ವಾದವೂ ರಾಜಕೀಯ ಉದ್ದೇಶಿತವೇ ಹೊರೆತು ಬೇರೇನೂ ಅಲ್ಲ. ಇಂಥ ಬದಲಾವಣೆಗಳು ರಾಜಕೀಯ ಮೇಲಾಟಗಳಿಗೆ ಕಾರಣವಾಗಿ ಅಸಹ್ಯ ಮೂಡಿಸುತ್ತಿವೆ.

ಹೊಸ ಕಾರ್ಯಕ್ರಮಗಳನ್ನು ರೂಪಿಸಿ, ಅವುಗಳಿಗೆ ನಾಮಕರಣ ಮಾಡುವಲ್ಲಿ ಸರ್ಕಾರ ಸೃಜನಶೀಲತೆ ತೋರಿದರೆ, ಅದನ್ನು ಯಾರೂ ಆಕ್ಷೇಪಿ ಸುವುದಿಲ್ಲ. ಅದರ ಬದಲಾಗಿ ಇರುವುದನ್ನು ಮುರಿದು ಕಟ್ಟುವುದರಲ್ಲಿ ಸೃಜನಶೀಲತೆಯೂ ಇಲ್ಲ, ಅದು ಸಾಧನೆಯೂ ಅಲ್ಲ. ಹೆಸರುಗಳಿಗೆ ಸಂಬಂಧಿಸಿದ ಪ್ರಹಸನಗಳನ್ನು ತಪ್ಪಿಸುವ ನಿಟ್ಟಿನಲ್ಲಿ, ಪ್ರಶಸ್ತಿ, ಕಾರ್ಯಕ್ರಮ, ಸಂಸ್ಥೆಗಳಿಗೆ ನಾಮಕರಣ ಮಾಡುವ ಕುರಿತು ಸ್ಪಷ್ಟವಾದ ಮಾರ್ಗಸೂಚಿಯೊಂದು ಅಗತ್ಯ. ಅಂಥ ಮಾರ್ಗಸೂಚಿ ರೂಪಿಸುವ ಉತ್ಸಾಹವನ್ನು ತೋರಿಸುವ ಮೂಲಕ ಇಂತ ಮರುನಾಮಕರಣಗಳ ಅಸಂಗತ್ಯಕ್ಕೆ ಬ್ರೇಕ್ ಹಾಕುವುವು ಒಳಿತು.

ಜಗತ್ತಿನ ಶ್ರೇಷ್ಠ ಪ್ರಧಾನಿ ಎಂದು ಕರೆಸಿಕೊಳ್ಳುವ ಮೋದಿ ನಿಜವಾಗಿಯೂ ಅವರಿಗೆ ಈ ದೇಶದಬಗ್ಗೆ ಗೌರ ಇದ್ದಿದ್ದರೆ ತಮ್ಮ ಹೆಸರುಗಳ ಬದಲಿಗೆ ಈ ದೇಶಕ್ಕೆ ಕೊಡುಗೆ ನೀಡಿರುವ ಸಾಧಕರ ಹೆಸರುಗಳನ್ನು ಇಡಬಹುದಿತ್ತು ಆದರೆ ಸರ್ದಾರ 'ವಲ್ಲಬಾಯ್ ಪಟೇಲ್ ಸ್ಟೇಡಿಯಂ' ಹೆಸರನ್ನೇ ತಗೆದು ತಮ್ಮ ಹೆಸರನ್ನು ಹಾಕಿಕೊಳ್ಳುವ ಮೂಲಕ ತಾವೂ ಸಾಮಾನ್ಯ ಆಡಳಿತಗಾರರಲ್ಲಿ ಒಬ್ಬರು ಎನ್ನುವುದನ್ನು ತೋರಿಸಿಕೊಟ್ಟಿದ್ದೀರಿ..ಮುಂದೆ ಬರುವ ಸರ್ಕಾರಗಳು ಮತ್ತೇ ನಿಮ್ಮ ಹೆಸರನ್ನು ತಗೆದು ಬೇರೆ ಹೆಸರನ್ನು ನಾಮಕರಣ ಮಾಡುವುದಿಲ್ಲ ಎನ್ನುವ ಯಾವ ಗ್ಯಾರಂಟಿ ಇದೆ ಹೇಳಿ.ಮುಂದೆಯೂ ನಿಮ್ಮಂತೆಯೇ ಮತ್ತೊಂದು ಸರ್ಕಾರ ಮಾಡುತ್ತದೆ. ಈ ಹೆಸರುಗಳ ಮರುನಾಮಕರಣ ಮಾಡುವುದು ಕಾಂಗ್ರೆಸ್ ಸಂಸ್ಕೃತಿಯ ಒಂದು ಭಾಗವಾಗಿತ್ತು ಆದರೆ ಅದನ್ನು ತಾವೂ ಮುಂದುವರೆಸುವ ಮೂಲಕ ದ್ವೇಷರಾಜಕಾರಣದ ಆಟದಲ್ಲಿ ನೀವೂ ಒಬ್ಬರಾಗಿದ್ದೀರಿ ಅದರಲ್ಲಿ ವಿಶೇಷತೆ ಇನ್ನೇನಿದೆ ಹೇಳಿ?

# ಕೋವಿಡ್ ಹೆಸರಿನಲ್ಲಿ ಪತ್ರಕರ್ತರ ಮೇಲೆ ನಡೆಯುತ್ತಿರುವ ಶೋಷಣೆ

ಹಿಟ್ & ರನ್

ಇದು ಪತ್ರಕರ್ತರ ಇತ್ತೀಚಿನ ದುರಂತಗಳು...ಕೊರೊನಾಗೆ ಕಳೆದ ಒಂದು ವರ್ಷದಲ್ಲಿ ನಿರಂತರವಾಗಿ ಸಾವನ್ನಪ್ಪಿದ್ದರೆ..ಇರುವವರಿಗೂ ಕೆಲ ಮಾಧ್ಯಮಗಳಲ್ಲಿ ನೀಡುತ್ತಿರುವ ತೊಂದರೆಗಳು ನಿಜಕ್ಕೂ ಶೋಚನೀಯವೇ.

ಹೌದು ಕೊರೊನಾ ನೆಪದಲ್ಲಿ ಕೆಲವು ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಪತ್ರಕರ್ತರಿಗೆ ತಿಂಗಳ ಬದಲಾಗಿ ಮೂರು ನಾಲ್ಕು ತಿಂಗಳಿಗೊಮ್ಮೆ ವೇತನ ನೀಡುತ್ತಿದ್ದಾರೆ ನೀಡಿದರು ಅದು ಪೂರ್ತಿ ವೇತನವನ್ನೂ ನೀಡುತ್ತಿಲ್ಲ. ಕೆಲವು ಮಾಧ್ಯಮಗಳು ಆರ್ಥಿಕ ಸಂಕಷ್ಟದಲ್ಲಿವೆ ಅಂತ ಸಂಸ್ಥೆಗಳು ನಿರಂತರವಾಗಿ ಪತ್ರಕರ್ತರನ್ನು ಶೋಷಿಸುತ್ತಲೇ ಬಂದಿದ್ದಾರೆ ಉಚಿತವಾಗಿ ದುಡಿದು ಕೊನೆಗೆ ವೇತನವಿಲ್ಲದೆ ಹೊರಬಂದ ನೂರಾರು ಉದಾಹರಣೆಗಳಿವೆ; ಕಳೆದ ನಾಲ್ಕು ಐದು ದಶಕಗಳಿಂದಲೂ ಆರ್ಥಿಕವಾಗಿ ಪ್ರಭಲವಾದ ಕೆಲ ಮುದ್ರಣ ಮಾಧ್ಯಮ ಸಂಸ್ಥೆಗಳು ಇತ್ತೀಚಗೆ ಕೊರೊನಾ ನೆಪದಲ್ಲಿ ಅರ್ಧದಷ್ಟು ಪತ್ರಕರ್ತರನ್ನು ಹೊರಹಾಕಿದ್ದೂ ಆಯ್ತು ,ಈಗ ವೇತನದಲ್ಲೂ ಖಡಿತಗೊಳಿಸಲಾಗುತ್ತಿದೆ ಇದೆಲ್ಲದಕ್ಕೂ ಕೊರೊನಾ ನೆಪ. ಈ ನೆಪದಲ್ಲೇ ನೂರಾರು ಪತ್ರಕರ್ತರು ಉಚಿತ ಸೇವೆಯನ್ನು ಮಾಡಿ ಹೊರಬಂದಿದ್ದಾರೆ. ಈ ದೇಶಕ್ಕೆ ಬುದ್ದಿವಾದ ಹೇಳುವ ಸತ್ಯವನ್ನೇ ನಾವು ಹೇಳುವುದು, ಎನ್ನುವ ಹಲವಾರು ಸಂಸ್ಥೆಗಳು ಇಂದು ಪತ್ರಕರ್ತರನ್ನು ವಂಚಿಸುತ್ತಿದ್ದಾರೆ.

ಇಂತ ಶೋಷಣೆಗೊಳಗಾದ ಹಲವಾರು ಪತ್ರಕರ್ತರು ದಿಕ್ಕು ತೋಚದೆ ಈ ವೃತ್ತಿಯನ್ನೇ ತೊರೆದವರಿದ್ದಾರೆ .ಕೆಲವರು ಈ ಚಟದಲ್ಲೇ ಇನ್ನೇನೋ ಮಾಡುತ್ತಾ ಅನಿವಾರ್ಯವಾಗಿ ವೃತ್ತಿಯನ್ನು ಮುಂದುವರೆಸಿದ್ದಾರೆ. ಇಂತ ಪತ್ರಕರ್ತರಿಗೆ ಆದ ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಇರುವ ಸಂಘಟನೆಗಳು ಯಾವುದೆ ಕಾರಣಕ್ಕೂ ಮುಂದೆ ಬರುವುದಿಲ್ಲ. ಯಾಕೆಂದರೆ ನಾಳೆ ನಮ್ಮ ಸಂಸ್ಥೆಗಳಲ್ಲಿ ನಮಗೆ ತೊಂದರೆಯಾಗಬಹುದು ಎನ್ನುವ ಕಾರಣಕ್ಕೆ ಒಬ್ಬೊರಿಗೊಬ್ಬರು ನೆರವಾಗುವ ಪರಿಸ್ಥಿತಿಯಲ್ಲೂ ಇಲ್ಲ ಇಂತ ದುರಂತ ಕತೆ ಪತ್ರಕರ್ತರದ್ದು.

ಹೊರಗಡೆ ಪ್ರತಿಭಟನೆ ಮಾಡಿದರೆ ಸಾರ್ವಜನಿಕರಿಗೆ ಆದ ತೊಂದರೆಗಳಿಗೆ ಸ್ಪಂದಿಸುವ ಪತ್ರಕರ್ತರಿಗೆ ನಿಜವಾಗಿಯೂ ನ್ಯಾಯವಂತೂ ಸಿಗುವುದಿಲ್ಲ ಸಿಗುವ ಸ್ಥಿತಿಯಲ್ಲೂ ಇಲ್ಲ. ಒಬ್ಬರ ಬದುಕಿಗೆ ದಾರಿದೀಪವಾಗುವ ಪತ್ರಕರ್ತರ ದಾರಿಗೆ ದೀಪವಾಗುವ ಯಾವ ಮನೋಸ್ಥಿತಿಯವರು ಇಲ್ಲ.ಯಾಕೆಂದರೆ ಇತ್ತೀಚೆಗೆ ಪತ್ರಕರ್ತರಿಗೆ ಇದ್ದ ಗೌರವವೂ ಕುಸಿಯುತ್ತಾ ಬಂದಿದೆ ಹೀಗಾಗಿ ಪತ್ರಕರ್ತರು ಎಂದರೆ ಕೆಲವರು ಹತ್ತಿರವೇ ಬಿಟ್ಟುಕೊಳ್ಳದಷ್ಟು ಹೆಸರನ್ನು ಕೆಲ ಸ್ವಯಃಘೋಷಿತ ಪತ್ರಕರ್ತರು ಕೆಡಸಿದ್ದಾರೆ. ಆದರೆ ಇತ್ತೀಚೆಗೆ ಹೆಜ್ಜೆ ಹೆಜ್ಜೆಗೂ ಆಗುತ್ತಿರುವ ಡಿಜಿಟಲ್ ಮಾಧ್ಯಮವೂ ಪತ್ರಿಕೋದ್ಯಮದ ಹಾದಿಯನ್ನು ತಪ್ಪಿಸುತ್ತಿವೆ,ಯಾರ ಅಂಕೆಗೂ ಸಿಗದೆ ನಾಗಲೋಟದಂತೆ ಓಡುತ್ತಿದೆ.ಅಲ್ಲಿ ಪತ್ರಿಕೋದ್ಯಮದ ಯಾವುದೆ ಗಂಧ ಗಾಳಿ ಗೊತ್ತಿರದ ಒಬ್ಬ ಸಾಮಾನ್ಯನೂ ಅದನ್ನು ಉದ್ಯೋಗ ಮಾಡಿಕೊಂಡು ಜನರಲ್ಲಿ ಹಣ ವಸೂಲಿ ಮಾಡುವ ದಂಧೆಗೆ ಇಳಿದು ಬಿಟ್ಟಿದ್ದಾರೆ. ಇತ್ತೀಚೆಗೆ ಕೆಲ ಟಿವಿಗಳಲ್ಲಿ ಕೆಲಸ ಮಾಡುತ್ತಿದ್ದ ಚಾಲಕರು,ಹೆಲ್ಪರ್‌ಗಳು ಕೂಡ ಡಿಜಿಟಲ್ ಮಾಧ್ಯಮ ಪ್ರವೇಶಿ ಹಣ ದಂಧೆಯ ದಾರಿಗೆ ಇಳಿದಿದ್ದಾರೆ ಎಂದರೆ ಈ ವೃತ್ತಿಯ ಗೌರವವನ್ನೇ ಕಳೆದುಬಿಟ್ಟಿದ್ದಾರೆ.

ನಾನು ಇಲ್ಲಿ ಚಾಲಕರು,ಹೆಲ್ಪರ್‌ಗಳು ಅಥವಾ ಮತ್ತಿತರರು ಈ ವೃತ್ತಿ ಪ್ರವೇಶ ಮಾಡುವುದನ್ನು ವಿರೋಧಿಸುತ್ತಿಲ್ಲ ಹಾಗೆ ವೃತ್ತಿಗೆ ಬರಬೇಕಾದರೆ ಅದಕ್ಕೆ ಆದಂತ ಒಂದಿಷ್ಟು ಬರಹ ಮತ್ತು ಉದ್ಯಮದ ತಿಳುವಳಿಕೆಯಾದರೂ ಇರಬೇಕಲ್ಲವೇ ಆದ್ಯಾವುದೂ ಇಲ್ಲದೆ ಯಾವುದೋ ಒಂದು ಹೆಸರಿನಲ್ಲಿ ಯುಟ್ಯೂಬ್ ಚಾನೆಲ್ ಮಾಡಿಕೊಂಡು ನಡೆಸುತ್ತಿರುವ ದಂಧೆಗೆ ವೃತ್ತಿಧರ್ಮವೇ ದಾರಿತಪ್ಪಿದಂತಾಗಿದೆ. ಇದು ಆಗಬಾರದು ಕೌಶಲ್ಯ ಇರುವವರು ಅದಕ್ಕೊಂದು ಸೃಜನಶೀಲತೆಯ ಹೊಳಪು ನೀಡಿ ಮಾಡಿದರೆ ಪತ್ರಿಕಾ ವೃತ್ತಿಗೆ ಗೌರವವೂ ಬರುತ್ತದೆ ಆದರೆ ಅದು ಆಗುತ್ತಿಲ್ಲ ಆಗುತ್ತಿರುವುದೇ ಬೇರೇ...!

**ದಲಿತ ದ್ವೇಷದ ರೋಶನಾಬಾದ್ ದಾಳಿಯನ್ನು ಯಾವುದೋ ಕುಗ್ರಾಮದಲ್ಲಿ ನಡೆದ ಏಕೈಕ ಘಟನೆಯೆಂದು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಯಾಕೆಂದರೆ ಈ ಭಯಾನಕ ವ್ಯಾಧಿಗೆ ತುತ್ತಾಗಿರುವ ಕೋಟಿ ಕೋಟಿ ರೋಗಗ್ರಸ್ತ ಮನಸುಗಳು ದೇಶದುದ್ದಗಲಕ್ಕೆ ಹರಡಿ ಹಬ್ಬಿವೆ. ರೋಶನಾಬಾದಿನ ದಾಳಿಯು ಈ ವ್ಯಾಧಿಯ ಚಿಹ್ನೆ ಮಾತ್ರ.**

# ಈ ಜಾತಿ ದಾಂಧಲೆ ತೆಂಡುಲ್ಕರ್ ಮನೆ ಮುಂದೆ ನಡೆದಿದ್ದರೆ!




ದೆಹಲಿ ದೃಷ್ಟಿ



ಡಿ.ಉಮಾಪತಿ
ಹಿರಿಯ ಪತ್ರಕರ್ತರು

ಮಹಿಳಾ ಹಾಕಿ ಒಲಿಂಪಿಕ್ಸ್ ತಾರೆ ವಂದನಾ ಕಟಾರಿಯಾ ಮನೆ ಮುಂದೆ ದಲಿತವಿರೋಧಿ ದಾಂಧಲೆ ನಡೆಸಿದ ಜಾತಿವಾದಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಈ ದೇಶದಲ್ಲಿ ದಲಿತ ದ್ವೇಷ ಮಾಡಿ ದಕ್ಕಿಸಿಕೊಳ್ಳುವುದು ಬಲಿಷ್ಠ ಜಾತಿಗಳಿಗೆ ಅದೆಷ್ಟು ಸಲೀಸು ಎಂಬ ಕಠೋರ ಸತ್ಯವನ್ನು ಈ ಪ್ರಕರಣ ಪ್ರತಿಫಲಿಸಿದೆ.

ಕಳಪೆ ಪ್ರದರ್ಶನ ನೀಡಿರುವ ಅದೆಷ್ಟು ಬಲಿಷ್ಠ ಜಾತಿಗಳ ಕ್ರೀಡಾ ತಾರೆಯರ ಮನೆಗಳ ಮುಂದೆ ಜಾತಿಯ ಹೆಸರು ಹಿಡಿದು ಹಳಿದ ಉದಾಹರಣೆ ಇದೆಯೇ? ಇಂತಹ ನಿರ್ದಿಷ್ಟ ಬಲಿಷ್ಠ ಜಾತಿಯವರು ತಂಡದಲ್ಲಿ ಬಹಳ ಮಂದಿ ಇದ್ದಾರೆ...ಹೀಗಾಗಿಯೇ ಭಾರತದ ತಂಡ ಸೋತಿತು ಎಂಬ ಪ್ರತಿಭಟನೆ ನಡೆದಿದೆಯೇ? ಆರೋಗ್ಯವಂತ ಸಮಾಜ ಬೇಕೆಂದು ಬಯಸುವವರು ಯಾರೂ ಇಂತಹ ಪ್ರತಿಭಟನೆ ನಡೆಯಬೇಕೆಂದು ಬಯಸುವುದಿಲ್ಲ.

ವಂದನಾ ಮನೆಯ ಮುಂದೆ ನಡೆದ ದಲಿತ ದ್ವೇಷದ ವಿಕೃತಿಯನ್ನು ಖಂಡಿಸಿರುವ ಮಹಾಮಹಿಮರು ಯಾರಾದರೂ ಇದ್ದಾರೆಯೇ? ಅವರ ಬಾಯಿಗಳು ಸಾರಾಸಗಟಾಗಿ ಹೊಲಿದುಕೊಂಡಿರುವುದು ಯಾಕೆ? ಮೌನ ಧರಿಸಿರುವುದು ಸಮ್ಮತಿಯ ಅಥವಾ ನಿರ್ಲಕ್ಷ್ಯದ ಲಕ್ಷಣ ಅಲ್ಲವೇ?

ಟೋಕಿಯೋ ಒಲಿಂಪಿಕ್ಸ್ ನ ಮಹಿಳಾ ಹಾಕಿ ಸೆಮಿಫೈನಲ್ಸ್ ಪಂದ್ಯದಲ್ಲಿ ಅರ್ಜೆಂಟೈನಾ ವಿರುದ್ಧ ಭಾರತದ ಸೋಲಿಗೆ ದಲಿತರನ್ನು ದೂರಿದ್ದು ನಾಚಿಕೆಗೇಡು. ತಂಡದ ಪ್ರಮುಖ ಆಟಗಾತಿ ವಂದನಾ ಕಟಾರಿಯ ದಲಿತ ಜನಾಂಗಕ್ಕೆ ಸೇರಿದವರು. ಹರಿದ್ವಾರದ ರೋಶನಾಬಾದ್ ಗ್ರಾಮದ ವಾಸಿ. ತಂಡದ ಸೋಲಿನ ಕೆಲವೇ ತಾಸುಗಳಲ್ಲಿ ಆಕೆಯ ಮನೆಯ ಮುಂದೆ ಆಕೆಯ ಜಾತಿ ಹಿಡಿದು ಬೈಗುಳಗಳ ಕಿರುಚಾಟ ಕೇಳಿತು.

ಬಲಿಷ್ಠ ಜಾತಿಯ ಮೂವರು ಯುವಕರು ವಂದನಾ ಕಟಾರಿಯ ಕುಟುಂಬವನ್ನು ಹಳಿದು ಅಣಕಿಸಿ ಪಟಾಕಿ ಸಿಡಿಸಿ ಕುಣಿದಾಡಿದ್ದಾರೆ. ತಂಡದಲ್ಲಿ ಬಹಳ ಮಂದಿ ದಲಿತ ಆಟಗಾರ್ತಿಯರಿದ್ದ ಕಾರಣದಿಂದಲೇ ಭಾರತ ತಂಡ ಸೋತಿತು. ಹಾಕಿಯಲ್ಲಿ ಮಾತ್ರವಲ್ಲ ಎಲ್ಲ ಕ್ರೀಡೆಗಳಿಂದಲೂ ದಲಿತರನ್ನು ದೂರ ಇರಿಸಬೇಕೆಂದು ಅವಹೇಳನ ಮಾಡಿದ್ದಾರೆ.


ಇದೇ ಒಲಿಂಪಿಕ್ಸ್ ನಲ್ಲಿ ತಂಡವನ್ನು ಕ್ವಾರ್ಟರ್ ಫೈನಲ್ ಗೆ ತಲುಪಿಸಿದ್ದೇ ವಂದನಾ ಅವರ ಅದ್ಭುತ ಆಟ. ದಕ್ಷಿಣ ಆಫ್ರಿಕಾ ವಿರುದ್ಧದ ಆ ಪಂದ್ಯದಲ್ಲಿ ವಂದನಾ ಸತತ ಮೂರು ಗೋಲು ಬಾರಿಸಿದ್ದರು. ಭಾರತ ನಾಲ್ಕು ಗೋಲುಗಳನ್ನು ಮತ್ತು ದಕ್ಷಿಣ ಆಫ್ರಿಕಾ ಮೂರು ಗೋಲುಗಳನ್ನು ಗಳಿಸಿತ್ತು. ಒಲಿಂಪಿಕ್ಸ್ ನಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದ ಪ್ರಥಮ ಭಾರತೀಯಳೆಂಬ ದಾಖಲೆಯನ್ನು ವಂದನಾ ನಿರ್ಮಿಸಿದ್ದರು.


ಅರ್ಜೆಂಟೈನಾ ವಿರುದ್ಧ ಸೋತ ಪಂದ್ಯ ತೀವ್ರ ಸೆಣಸಿನದಾಗಿತ್ತು. ಭಾರತದ ತಂಡ ಸೋತದ್ದು ಒಂದು ಗೋಲಿನ ಅಂತರದಿಂದ. ಕಂಚಿನ ಪದಕಕ್ಕಾಗಿ ನಡೆದ ಮುಂದಿನ ಪಂದ್ಯದಲ್ಲಿ ಭಾರತದ ಈ ತಂಡ ಬ್ರಿಟನ್ ವಿರುದ್ಧ ವಿರೋಚಿತವಾಗಿ ಸೋತಿತು. ಈ ಪಂದ್ಯದಲ್ಲೂ ಮೂರನೆಯ ಗೋಲು ವಂದನಾ ಅವರದಾಗಿತ್ತು. ಆಕೆ ಭಾರತ ತಂಡದ ಸಾರ್ವಕಾಲಿಕ ಶ್ರೇಷ್ಠ ಫಾರ್ವರ್ಡ್ ಆಟಗಾರ್ತಿಯರಲ್ಲೊಬ್ಬರು.



ದೆಹಲಿಯ ಸ್ಮಶಾನವೊಂದರಲ್ಲಿ ಒಂಬತ್ತು ವರ್ಷದ ಹಾಲುಗಲ್ಲದ ದಲಿತ ಹೆಣ್ಣುಮಗುವನ್ನು ರೇಪ್ ಮಾಡಿ ಕೊಂದು ಸುಟ್ಟು ಹಾಕಿದ ವಿಕೃತಿಯ ಬೆನ್ನಿಗೇ ವಂದನಾ ಕಟಾರಿಯ ಪ್ರಕರಣ ವರದಿಯಾಗಿದೆ. ಇಂತಹ ಸಾವಿರಾರು ಪ್ರಕರಣಗಳನ್ನು ಸದ್ದಿಲ್ಲದೆ ಹೂತು ಹಾಕಲಾಗುತ್ತಿದೆ.







ದಲಿತ ದ್ವೇಷದ ಅಪರಾಧಗಳು, ದಮನ ದೌರ್ಜನ್ಯ ತಾರತಮ್ಯಗಳು ನಿತ್ಯ ಬದುಕಿನ ರಿವಾಜುಗಳಾಗಿ ಹೋಗಿವೆ. ಗ್ರಾಮಗಳಲ್ಲಿ ಅವರನ್ನು ಊರ ಹೊರಗಿನ ಹೊಲಗೇರಿಗಳಲ್ಲಿ ಇಡಲಾಗಿದೆ. ಪೇಟೆ ಪಟ್ಟಣ ನಗರಗಳಲ್ಲಿ ಅವರನ್ನು ಮನೋನಿರ್ಮಿತ ಹೊಲಗೇರಿಗಳಿಗೆ ಅಟ್ಟಲಾಗಿದೆ. ಮುಖ್ಯಧಾರೆಯ ಸಮಾಜವೆಂಬುದು ಅವರ ಪಾಲಿನ ಅಗೋಚರ ಕಾರಾಗೃಹ. ಎತ್ತರೆತ್ತರಕ್ಕೆ ಎದ್ದು ನಿಂತಿರುವ ಬಗೆ ಬಗೆಯ ಅಸ್ಪೃಶ್ಯತೆಯ ತಡೆಗೋಡೆಗಳ ನಡುವೆ ಅವರು ವಿನಾಕಾರಣ ಕಳಂಕಿತ ಕೈದಿಗಳು.

ಈ ಅಮಾನುಷ ನಡವಳಿಕೆಯು ಭಾರತದ ಆತ್ಮ ಗಾಯಗೊಳಿಸಿದೆ. ಶತಮಾನಗಳ ಕೀವು ಮಡುಗಟ್ಟಿದೆ. ಈ ಗಾಯವ ತೊಳೆದು ಮದ್ದು ತುಂಬಿ ಪಟ್ಟಿಕಟ್ಟುವುದು ಪೆಟ್ಟು ನೀಡುತ್ತಿರುವವರ ಕರ್ತವ್ಯ. ಆದರೆ ನಿರಾಕರಣೆ ನಿರ್ಲಕ್ಷ್ಯಗಳಲ್ಲಿ ಮುಳುಗಿಬಿಟ್ಟಿದ್ದಾರೆ ಅವರು. ಮದ್ದು ಅರೆಯುವ ಬದಲಿಗೆ ನಂಜು ಕಾರತೊಡಗಿದ್ದಾರೆ. ಉಪ್ಪು ಉಜ್ಜತೊಡಗಿದ್ದಾರೆ. ಭಾರತದ ಆತ್ಮದ ಗಾಯವು ತಮ್ಮ ಆತ್ಮಕ್ಕೆ ಅಂಟಿರುವ ವ್ಯಾಧಿ ಎಂಬುದನ್ನು ಕಾಣದೆ ಹೋಗಿದ್ದಾರೆ. ಖುದ್ದು ದಲಿತ ಮತ್ತು ಸ್ತ್ರೀದ್ವೇಷದ ಕೈದಿಗಳಾಗಿದ್ದಾರೆ. ದಲಿತ ಜನಕೋಟಿಯ ವಿಮೋಚನೆಯಲ್ಲಿ ತಮ್ಮ ಬಿಡುಗಡೆಯೂ ಅಡಗಿದೆ ಎಂಬ ನಿಜವನ್ನು ನಿರಾಕರಿಸತೊಡಗಿದ್ದಾರೆ.

ವಿನೋದ್ ಕಾಂಬ್ಳಿಯಂತಹ ಕ್ರಿಕೆಟಿಗನ ಪ್ರತಿಭೆ ಚಮ್ಮಾರನೆಂದು ಮೂದಲಿಕೆಗಳಲ್ಲಿ ಕಮರಿ ಹೋಯಿತು. ಕಾಂಬ್ಳಿ ಕಡಿಮೆ ರನ್ ಗಳಿಸಿದಾಗ ಜಾತಿ ಹಿಡಿದು ಹಂಗಿಸಿದ ಮನಸುಗಳು, ಬಲಿಷ್ಠ ಜಾತಿಗಳ ಆಟಗಾರರು ರನ್ ಗಳಿಗೆ ಪರದಾಡಿ ಔಟ್ ಆದಾಗ ಅವರ ಜಾತಿಗಳನ್ನು ಹಿಡಿದು ಬೈದ ಉದಾಹರಣೆ ಹುಡುಕಿದರೂ ಕಾಣದು.

ಸುರೇಶ್ ರೈನಾ ಇತ್ತೀಚೆಗಷ್ಟೇ ಬ್ರಾಹ್ಮಣ್ಯದ ಗರಿಮೆ ಮೆರೆದರು. 'ಭಾರತ ರತ್ನ'ವೆನಿಸಿದ ಸಚಿನ್ ತೆಂಡುಲ್ಕರ್ ತಾವು ಜನಿವಾರ ಧರಿಸಿದ ಭಾವಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹೆಮ್ಮೆಯಿಂದ ಹಂಚಿಕೊಳ್ಳುತ್ತಾರೆ. ತೆಂಡುಲ್ಕರ್ ಅವರನ್ನು ದೈವವೆಂದು ಆರಾಧಿಸಲಾಗುತ್ತದೆ. ಹ್ಯಾಟ್ರಿಕ್ ಗೋಲು ದಾಖಲೆ ಸ್ಥಾಪಿಸಿದ ವಂದನಾ ಅವರ ದಲಿತ ಜಾತಿ ಮೂಲವನ್ನು ಹಿಡಿದು ಹಳಿಯಲಾಗುತ್ತದೆ. ಖಡ್ಗಗಳನ್ನು ಹಿರಿದು ಝಳಪಿಸಿ ತಾನು ರಜಪೂತನೆಂದು ಮೆರೆಯುತ್ತಾರೆ ರವೀಂದ್ರ ಜಡೇಜ. ಈ ಹಿಂದೆ ತಮ್ಮೊಂದಿಗೆ ಆಡಿದ ಯಜುವೇಂದ್ರ ಚಹಲ್ ಎಂಬ ದಲಿತ ಕ್ರಿಕೆಟಿಗನನ್ನು 'ಭಂಗಿ' (ಮಾನವ ಮಲ ಬಾಚಿ ಹೊತ್ತು ಸಾಗಿಸುವ ಕೆಲಸ ಮಾಡುವ ದಲಿತ ಜಾತಿ) ಎಂದು ಕರೆಯುತ್ತಾರೆ ಮತ್ತೊಬ್ಬ ಕ್ರಿಕೆಟ್ ತಾರೆ ಯುವರಾಜ್ ಸಿಂಗ್. ಟೀಕೆ ಎದುರಾದಾಗ ಈ ಜಾತಿಸೂಚಕದ ಸಾಧಕ ಬಾಧಕಗಳು ತನಗೆ ತಿಳಿದೇ ಇರಲಿಲ್ಲ ಎಂದು ವಾದಿಸುತ್ತಾರೆ.

ಸ್ವತಂತ್ರ ಭಾರತದ ಇತಿಹಾಸದಲ್ಲಿ ಭಾರತ ತಂಡ ಸೇರಿ ಕ್ರಿಕೆಟ್ ಆಡಿದ ದಲಿತರು ಬೆರಳೆಣಿಕೆಯವರು–ಏಕನಾಥ ಸೋಲ್ಕರ್, ಕರ್ಸನ್ ಘಾವ್ರಿ, ವಿನೋದ್ ಕಾಂಬ್ಳಿ, ಭುವನೇಶ್ವರ ಕುಮಾರ್, ದೊಡ್ಡನರಸಯ್ಯ, ಗಣೇಶ್, ವಿಜಯಕೃಷ್ಣ...

ತುಳಸಿ ಹೆಲೆನ್ ಎಂಬ ಬಾಕ್ಸರ್ ತನ್ನ ದಲಿತ ಹಿನ್ನೆಲೆಯ ಕುರಿತು ಮುಕ್ತವಾಗಿ ಮಾತಾಡಿ ಮೂಲೆಗುಂಪಾದಳು. ಲೇಡಿ ಮಹಮ್ಮದ್ ಅಲಿ ಎಂದು ಕರೆಯಿಸಿಕೊಂಡಿದ್ದ ಈಕೆ ಹೊಟ್ಟೆ ಹೊರೆಯಲು ಆಟೋ ಓಡಿಸಿದಳು. ಪೀಟ್ಜಾ ಡೆಲಿವರಿ ಮಾಡಿದಳು. ದಲಿತಳಾಗಿ ಹುಟ್ಟಿದ್ದಕ್ಕೆ ತಳದಿಂದ ಮೇಲೇಳುವ ಅವಕಾಶವೇ ನನಗಿಲ್ಲ ಎಂದು ಹಲುಬುವುದಷ್ಟೇ ಆಕೆಗೆ ಉಳಿದದ್ದು.

ದೆಹಲಿಯ ಬ್ಯಾಂಕ್ ಜವಾನನ ಮಗಳಾಗಿ ಹುಟ್ಟಿದ ದಲಿತೆ ಕುಸ್ತಿಪಟು ಜ್ಯೋತಿ. ಏಷ್ಯನ್ ಕುಸ್ತಿ ಛಾಂಪಿಯನ್ ಶಿಪ್ ನಲ್ಲಿ ಮೂರು ಬಾರಿ ಕಂಚು ಪದಕ ವಿಜೇತೆ. 'ಡೊಮೆಸ್ಟಿಕ್ ಟೂರ್ನಿಯೊಂದರ ಸೆಮಿಫೈನಲ್ ನಲ್ಲಿ ನಿಚ್ಚಳ ಗೆಲುವು ನನ್ನದಾಗಿದ್ದರೂ, ಸೋತಿದ್ದೇನೆಂದು ಸಾರಲಾಯಿತು. ಈ ಸೆಮಿಫೈನಲ್ ಮರುದಿನ ನಡೆಯುವುದೆಂದು ನಿರ್ಧರಿಸಲಾಗಿತ್ತು. ಆದರೆ ನನಗೆ ಹೆಚ್ಚು ವಿಶ್ರಾಂತಿ ಸಿಗಬಾರದೆಂದೂ, ಕಂಚಿನ ಪದಕ ನನಗೆ ದಕ್ಕಬಾರದೆಂದೂ ಸಂಚು ಮಾಡಿ ಅದೇ ದಿನ ಪಂದ್ಯ



ನಡೆಸಲಾಯಿತು. ನನ್ನ ದಲಿತ ಹುಟ್ಟೇ ಈ ಅನ್ಯಾಯದ ಮೂಲ ಎಂಬುದು ಆಕೆಯ ಅಳಲು.

ಸಾಂತಿ ಸೌಂದರ ರಾಜನ್ ಎಂಬ ದಲಿತ ಅಥ್ಲೆಟ್ ಆತ್ಮಹತ್ಯೆಯ ವಿಫಲ ಪ್ರಯತ್ನ ನಡೆಸಿದ್ದಳು. ಪಾದಗಳಲ್ಲಿ ಆರು ಬೆರಳುಗಳುಳ್ಳ ಸ್ವಪ್ನಾ ಬರ್ಮನ್ ಏಷ್ಯನ್ ಗೇಮ್ಸ್ ನಲ್ಲಿ ಚಿನ್ನದ ಪದಕ ಗಳಿಸಿದ್ದ ದಲಿತ ಹೆಣ್ಣುಮಗಳು ಏಷ್ಯನ್ ಕ್ರೀಡೆಗಳ ಅತಿ ಕಠಿಣ ಹೆಪ್ಟತ್ಲಾನ್ ನಲ್ಲಿ ಪಾದಗಳ ನೋವಿನ ನಡುವೆಯೂ ಛಲ ತೊಟ್ಟು ಚಿನ್ನದ ಪದಕ ಗಳಿಸಿದಳು. ಆರು ಬೆರಳುಗಳು ಹಿಡಿಯುವ ವಿಶೇಷ ಶೂಗಳ ಖರೀದಿಸಲು ಅಸಮರ್ಥಳು. ಭಾರತದ ಧ್ವಜವನ್ನು ಅಂತಾರಾಷ್ಟ್ರೀಯ ಕ್ರೀಡಾವೇದಿಕೆಗಳಲ್ಲಿ ಹಾರಿಸಿರುವ ಹಿಮಾ ದಾಸ್ ಎಂಬ ದಲಿತ ಓಟಗಾತಿಯ ಜಾತಿ ಯಾವುದೆಂದು ತಿಳಿಯಲು ದಾಖಲೆ ಸಂಖ್ಯೆಯ ಗೂಗಲ್ ಸರ್ಚ್ ಮಾಡಲಾಗಿದೆ. ನಿವೃತ್ತಿ ಹೊಂದಿದ ನಂತರವೂ ಪಿ.ಟಿ. ಉಷಾ ಎಂಬ ಮತ್ತೊಬ್ಬ ದಲಿತ ದಂತಕತೆಯ ಕುಲವನ್ನು ಹೀಗೆಯೇ ಹುಡುಕಿದ ದಾಖಲೆಗಳಿವೆ.

'1979–80ರಲ್ಲಿ ನಾನು ರಾಷ್ಟ್ರಮಟ್ಟದ ವಾಲಿಬಾಲ್ ಆಟಗಾತಿಯಾಗಿದ್ದೆ. ಹಿಂದುಳಿದ ಜಾತಿಯ ಹಣೆಪಟ್ಟಿ ಬೇಟೆಯಾಡಿತು. ಆಸೆಗಳೆಲ್ಲ ನುಚ್ಚುನೂರಾಗಿ ಅಕೆಡಮಿಕ್ಸ್ ಹಾದಿ ಹಿಡಿದೆ. ಆಧುನಿಕ ದ್ರೋಣಾಚಾರ್ಯರು ಅರ್ಜುನರಿಗೆ ತರಬೇತಿ ನೀಡುತ್ತಾರೆಯೇ ವಿನಾ ಏಕಲವ್ಯರಿಗೆ ಅಲ್ಲ. ಹಲವು ಅಥ್ಲೀಟ್ ಗಳ ಬದುಕು ನಾಶವಾದದ್ದನ್ನು ಕಣ್ಣಾರೆ ಕಂಡಿದ್ದೇನೆ. ಮಹಿಳಾ ದಲಿತ ಅಥ್ಲೀಟ್ ಗಳ ಸ್ಥಿತಿ ಮತ್ತಷ್ಟು ಶೋಚನೀಯ' ಎಂದಿರುವವರು ಪ್ರೊಫೆಸರ್ ವೈ.ಸ್ವರೂಪಾ ಆರ್.ಶಂಕರ್. ಹೈದರಾಬಾದ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕಿ.

# ಬೊಮ್ಮಾಯಿ ಸಂಪುಟದ ಮೊದಲ ವಿಕೆಟ್ ಪತನ

# ಇಂತಹ ದುರಹಂಕಾರದ ರಾಜಕಾರಣಿಗಳು ಬೇಕೆ..?



● ವರದಿಗಾರ

ಕಳೆದ ಒಂದು ವಾರದಿಂದ ಸಿಕ್ಕ ಖಾತೆಗೆ ತೃಪ್ತಿ ಪಡೆದ ಸಚಿವರು ಕೇಳಿದ್ದೇ ಖಾತೆ ಬೇಕು ಎಂದು ಹಠ ಹಿಡಿದು ಕೂತಿದ್ದ ಕೆಲ ಸಚಿವರು ಆಂತರಿಕ ಅಸಮಾಧಾನ ಇದ್ದಕ್ಕಿದ್ದಂತೆ ಬುಗಿಲೆದ್ದಿದೆ.

ಕಳೆದ ಬಿಎಸ್‌ವೈ ಸಂಪುಟದ ಸದಾ ಕಾಡುತ್ತಿದ್ದ ಯೋಗೇಶ್ವರ್,ಬಸವರಾಜ್ ಪಾಟೀಲ್ ಯತ್ನಾಳ್ ಮತ್ತು ಬೆಲ್ಲದ್ ಅವರು ದೆಹಲಿ ಭೇಟಿ ಮೇಲೆ ಬೇಟಿಮಾಡುವ ಮೂಲಕ ಸಿಎಂ ಸ್ಥಾನಕ್ಕೆ ಕುತ್ತು ತಂದಿದ್ದರು ಈಗ ಬಸವರಾಜ್ ಬೊಮ್ಮಾಯಿ ಸಂಪುಟದ ಸಚಿವ ಆನಂದ್ ಸಿಂಗ್ ಆರಂಭದಲ್ಲೇ ಶಾಕ್ ನೀಡಿದ್ದು ಮುಂದಿನ ಕತೆಯೇನು ಎನ್ನುವ ಪ್ರಶ್ನೆ ಮೂಡಿದೆ

ಇದು ಅತೀರೇಖದ ಪರಮಾವದಿ ಪದೇ ಪದೇ ಈ ರೀತಿಯ ವರ್ತನೆಗಳಿಂದ ಸರ್ಕಾರವನ್ನು ಅಸ್ಥಿರಗೊಳಿಸುವ ಹುನ್ನಾರಗಳನ್ನು ಮಾಡುವ ಮೂಲಕ ತಮ್ಮನ್ನು ತಾವೇ ಹರಾಜು ಹಾಕಿಕೊಳ್ಳುವ ದುರ್ವರ್ತನೆಯೇ ಹೊರೆತು ಬೇರೇನು ಅಲ್ಲ. ರಾಜೀನಾಮೆ ಅಸ್ತ್ರವನ್ನು ಇಟ್ಟು ಸರ್ಕಾರವನ್ನು ಒಬ್ಬ ಶಾಸಕ ಬೆದರಿಸುತ್ತಾನೆ ಎಂದರೆ ಅದು ಆತನ ಅಂತ್ಯದ ಪರಾಕಾಷ್ಟೆ ಅಷ್ಟೆ ಇಂತವರಿಗೆಲ್ಲ ಜನರೇ ಬುದ್ದಿಕಲಿಸಬೇಕು ದುರಂತ ಎಂದರೆ ಹಣದ ಮದದಿಂದ ಜನರಿಗೆ ಹಣ ಬಿಸಾಡಿ ಮತ ಪಡಿಯುತ್ತಿರುವ ಇಂತವರ ರಾಜಕೀಯ ಅಂತ್ಯವಾಗಬೇಕು ಇಲ್ಲದಿದ್ದರೆ ಪದೇ ಪದೇ ಇಂತ ದುರ್ವರ್ತನೆಗಳ ಮೂಲಕ ಸರ್ಕಾರಗಳನ್ನು ಅಸ್ಥಿರಗೊಳಿಸುವ ಹಂತಕ್ಕೆ ತಲುಪಿ ಆ ಕ್ಷೇತ್ರದ ಮತದಾರರನ್ನೇ ಹರಾಜು ಹಾಕುವಂತ ಪರಿಸ್ಥಿತಿಗೆ ಮುಂದಾಗುತ್ತಾರೆ ಎಂದರೆ ಇದಕ್ಕಿಂತ ದುರಂತ ಮತ್ತೊಂದಿಲ್ಲ.

ಹೇಳಿಕೇಳಿ ವಿಜಯನಗರ ಜಿಲ್ಲೆ ಶಾಸಕ ಈ ರಾಜ್ಯದ ಪ್ರವಾಸೋದ್ಯಮ ತುತ್ತ ತುದಿಯಲ್ಲಿರುವ ಹಂಪಿಯಂತ ಇತಿಹಾಸ ಪ್ರಸಿದ್ದ ಪ್ರವಾಸಿ ತಾಣ ಇಂತ ಖಾತೆ ಸರಿ ಇಲ್ಲ ಎಂದು ಹೇಳುತ್ತಾರೆ ಎಂದರೆ ಆತನಿಗೆ ಬೇಕಿರುವುದು ಕ್ರಿಯಾಶೀಲತೆ ಬದಲಾಗಿ ಯೋಜನೆಗಳ ಬಲವರ್ಧನೆಗಳಾದ ಲೋಕೋಪಯೋಗಿ ಮತ್ತು ಇಂಧನ ಖಾತೆಯೇ ಬೇಕು ಎನ್ನುವುದಾದರೆ ಇವರು ರಾಜಕೀಯಕ್ಕೆ ಬಂದು ಯಾವ ಜನಪರ ಕೆಲಸ ಮಾಡುತ್ತಾರೆ. ಪ್ರವಾಸೋದ್ಯಮಖಾತೆಗಿಂತ ಖಾತೆ ಬೇಕೆ ತಮ್ಮ ಕ್ರಿಯಾಶೀಲತೆ ತಮ್ಮ ಬುದ್ದವಂತಿಕೆಯನ್ನು ಇಲ್ಲಿ ತೋರಿಸಲಾಗದವರು ಆ ಖಾತೆಗಳಲ್ಲೇನು ತೋರಿಸುತ್ತಾರೆ.

ಹಿಂದೆ ಜನಾರ್ದನರೆಡ್ಡಿ ಅವರು ಈ ಖಾತೆಯನ್ನು ನಿರ್ವಹಿಸಿದ್ದರು ಆಗ ಪ್ರವಾಸೋದ್ಯಮ ಖಾತೆಗೆ ಒಂದು ಮೆರಗು ತಂದಿದ್ದರು ಹಲವಾರು ಯೋಜನೆಗಳ ಮೂಲಕ ಹೊಸಟಚ್ ನೀಡಿದ್ದರು ಆದರೆ ಅದೆ ಜಿಲ್ಲೆಯವರು ಅದೇ ಗಣಿದಣಿಗಳಾದ ತಾವು ಇಂತ ಖಾತೆ ಬೇಡ ಎಂದರೆ ನಿಮಗೆ ರಾಜಕೀಯ ಕ್ಷೇತ್ರವೆ ಸೂಕ್ತವಲ್ಲ ಎನ್ನುವುದನ್ನು ಹೇಳಲೇ ಬೇಕಾಗುತ್ತದೆ,





ಮುಖ್ಯಮಂತ್ರಿಗಳು ಇಂತ ಶಾಸಕರ ದಬ್ಬಾಳಿಕೆಗೆ ಬೆದರಿಕಗೆ ಸೊಪ್ಪು ಹಾಕದೆ ಖಾತೆಯನ್ನು ಬದಲಾವಣೆ ಮಾಡಬಾರದು ಒಂದು ವೇಳೆ ಆ ರೀತಿ ಬದಲಾವಣೆ ಆಗುವ ಮೂಲಕ ಅವರನ್ನು ಓಲೈಸಲು ಮುಂದಾದರೆ ಅದು ನಿಮಗೆ ಕಪ್ಪು ಚುಕ್ಕೆ ನಿನ್ನ ವ್ಯಕ್ತಿತ್ವಕ್ಕೆ ಕಪ್ಪು ಚುಕ್ಕೆ.

ಆರಂಭದಲ್ಲೇ ಈ ವಿಘ್ನಉಂಟಾಗಿದ್ದು ಇದನ್ನು ಸರಿಪಡಿಸಲು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಪ್ರಯತ್ನದ ಮೇಲೆ ಪ್ರಯತ್ನ ನಡೆಸುತ್ತಿದ್ದರೆ..ಆದರೆ ಮತ್ತಷ್ಟು ಅತೃಪ್ತರ ಬಣ ಸೇರಿಕೊಂಡಿರುವುದರಿಂದ ಈ ಬಂಡಾಯದ ಬಿಸಿಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ ..ಆರಂಭದಿಂದಲೇ ಅತೃಪ್ತ ಮತ್ತಷ್ಟು ಪ್ರಭಲವಾಗಿ ಪ್ರಖರಗೊಳ್ಳುವ ಎಲ್ಲಾ ಸಾಧ್ಯತೆಗಳಿದ್ದು ಯಾವುದೇ ಸಂದರ್ಭದಲ್ಲೂ ಎಂತದ್ದೆ ರಾಜಕೀಯ ದ್ರುವೀಕರಣವಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಅತೃಪ್ತರ ಬಹಿರಂಗವಾಗಿ ಕಾಣಿಸಿಕೊಳ್ಳದೆ ಇದ್ದರೂ ಕೂಡ ದೂರವಾಣಿ ಕರೆಗಳ ಮೂಲಕವೇ ಮುಂದಿನ ನಡೆಗಳನ್ನು ತೀರ್ಮಾನಿಸಿಕೊಂಡಿದ್ದಾರೆ ಹಾಗಾಗಿಯೇ ಇದಕ್ಕೇ ಶ್ರೀಕಾರ ಎನ್ನುವಂತೆ ಕಳೆದ ಭಾನುವಾರ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ್ದ ಆನಂದ್ ಸಿಂಗ್ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ .ಆದರೆ ಅದನ್ನು ಮುಖ್ಯಮಂತ್ರಿಳು ಸ್ವೀಕರಿಸಿಲ್ಲ .ಯಾಕೆಂದರೆ ಕೇವಲ ಇದು ಬೆದರಿಕೆಯ ತಂತ್ರವೋ ಅಥವಾ ಕೊನೆಯ ತೀರ್ಮಾನವೋ ಎನ್ನುವುದನ್ನು ಕಾದು ನೋಡುವ ತಂತ್ರಕ್ಕೆ ಮುಂದಾಗಿದ್ದಾರೆ.



ಎರಡು ದಿನಗಳವರೆಗೂ ಗೌಪ್ಯತೆಯನ್ನು ಕಾಪಾಡಿಕೊಂಡ ಬಂದಿದ್ದ ಮುಖ್ಯಮಂತ್ರಿಗಳು ಅದೇಗೋ ರಾಜೀನಾಮೆ ವಿಷಯ ಬಹಿರಂಗಗೊಂಡಿದೆ ಈ ಮೂಲಕ ರಾಜ್ಯ ರಾಜಕಾರಣದಲ್ಲಿ ಅಲ್ಲೋಲ ಕಲ್ಲೋ ಸೃಷ್ಟಿಯಾಗಿದೆ.

ತಾವು ಕೇಳಿದ್ದ ಖಾತೆ ನೀಡಲಿಲ್ಲ ಎಂಬ ಕಾರಣಕ್ಕೆ ಅಸಮಾಧಾನ ಹೊರಹಾಕಿದ್ದ ಸಚಿವ ಆನಂದ್ ಸಿಂಗ್ ರಾಜೀನಾಮೆ ಪತ್ರವನ್ನು ಸಿಎಂಗೆ ತಲುಪಿಸಿ ಬಂದಿದ್ದಾರೆ.ಕೇವಲ ಸಚಿವ ಸ್ಥಾನಕ್ಕೆ ರಾಜೀನಾಮೆ ಮಾತ್ರವಲ್ಲ ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡಲಿದ್ದಾರೆ ಎಂದು ಆವರ ಆಪ್ತ ಮೂಲಗಳು ತಿಳಿಸಿವೆ.

## ಕಚೇರಿ ಖಾಲಿ

ಇದಕ್ಕೆ ಪುಷ್ಠಿ ನೀಡುವಂತೆ ಆನಂದ್ ಸಿಂಗ್ ಇದುವರೆಗೂ ವಿಧಾನಸಭೆಗೆ ಕಾಲಿಟ್ಟಿಲ್ಲ. ಅಲ್ಲದೇ ವಿಜಯನಗರ ಶಾಸಕರ ಕಚೇರಿಯನ್ನು ಸಹ ಆನಂದ್ ಸಿಂಗ್ ಖಾಲಿ ಮಾಡಿದ್ದು, ಇಲ್ಲಿ ಶಾಸಕರು ಲಭ್ಯವಿಲ್ಲ ಎಂದು ಬೋರ್ಡ್ ಸಹ ಹಾಕಿದ್ದಾರೆ. ಇದು ರಾಜ್ಯ ರಾಜಕಾರಣದಲ್ಲಿ ಭಾರೀ ಸಂಚಲನ ಮೂಡಿಸಿದೆ.

## ಸಿಎಂಗೆ ರಾಜೀನಾಮೆ ಪತ್ರ?

ಮೊನ್ನೇ ಕುಟುಂಬ ಸಮೇತರಾಗಿ ಬಂದು ಭಾನುವಾರ ಬೆಳಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನ ಭೇಟಿ ಮಾಡಿದ್ದರು. ಸದ್ಯಕ್ಕೆ ಆಗೋಲ್ಲ. ಈ ಖಾತೆಯನ್ನೇ ನಿಭಾಯಿಸಿ. ಮುಂದೆ ನೋಡೋಣ. ಈಗ ನಿಮ್ಮ ಖಾತೆ ಬದಲಿಸಿದ್ರೆ ಇನ್ನುಳಿದವರೂ ಸಹ ತಮ್ಮ ಖಾತೆ ಬದಲಾವಣೆ ಮಾಡುವಂತೆ ಬರುತ್ತಾರೆ. ಹಾಗಾಗಿ ಈಗ ಖಾತೆ ಬದಲಾವಣೆ ಸಾಧ್ಯವಿಲ್ಲ ಎಂದು ಕಡ್ಡಿಮುರಿದಂತೆ ಹೇಳಿದ್ದಾರೆ. ಸಿಎಂ ಮಾತಿನಿಂದ ಬೇಸರಗೊಂಡ ಆನಂದ್ ಸಿಂಗ್ ಕವರ್‌ನಲ್ಲಿ ರಾಜೀನಾಮೆ ಪತ್ರ ನೀಡಿ ಬಂದಿದ್ದಾರೆ ಎನ್ನಲಾಗಿದೆ.

## ಈ ಹಿಂದೆಯೇ ರಾಜೀನಾಮೆ ಸುಳಿವು

ಖಾತೆ ಹಂಚಿಕೆ ಮಾಡಿದ ದಿನವೇ ಪ್ರವಾಸೋದ್ಯಮ ಆನಂದ್ ಸಿಂಗ್ ರಾಜೀನಾಮೆ ಸುಳಿವು ನೀಡಿದ್ದರು. ಬಳ್ಳಾರಿಯಲ್ಲಿ ಖಾತೆ ಹಂಚಿಕೆ ಬಗ್ಗೆ ಮಾತನಾಡುವ ವೇಳೆ ಅವರು, ಪ್ರವಾಸೋದ್ಯಮ ನನಗೆ ಬೇಡ. ಬೇರೆ ಖಾತೆ ಕೊಡಿ. ಇಲ್ಲ ಅಂದ್ರೆ ಶಾಸಕನಾಗಿಯೇ ಉಳಿಯುತ್ತೇನೆ ಎಂದು ಪರೋಕ್ಷವಾಗಿ ಸಚಿವ ಸ್ಥಾನವೂ ಬೇಡ ಎಂದಿದ್ದರು.

ಈ ಎಲ್ಲಾ ಬೆಳವಣಿಗೆ ಹಿನ್ನೆಲೆಯಲ್ಲಿ ಸೋಮವಾರ ಮತ್ತು ಮಂಗಳವಾರ ಅವರು ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸುತ್ತಿದ್ದಾರೆ ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡುವ ಸುಳಿವು ನೀಡಿರುವ ಅವರು ಶೀಘ್ರದಲ್ಲೇ ಬೆಂಗಳೂರಿಗೆ ಬಂದು ರಾಜೀನಾಮೆ ನೀಡುತ್ತಾರೆ ಎನ್ನಲಾಗುತ್ತಿದೆ.

ಆದರೆ ಈ ನಡುವೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮಂಗಳವಾರ ರಾತ್ರಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಸಿದ್ದು ಮುಂದೆ ಯಾವ ನಿರ್ಧಾರ ತಗೆದುಕೊಳ್ಳುತ್ತಾರೆ ಎನ್ನಲಾಗಿದೆ.

ಈ ಎಲ್ಲಾ ಬೆಳವಣಿಗೆಗಳು ಕೇವಲ ಒಂದೇ ದಿನ ನಡೆದದ್ದಲ್ಲಾ .ಕಳೆದ ಎರಡು ದಿನಗಳ ಹಿಂದೆ ಹುಬ್ಬಳ್ಳಿಯಲ್ಲಿ ಮಾಜಿ ಸಚಿವ ಜಗದೀಶ್ ಶೆಟ್ಟರ್ ಅವರ ನಿವಾಸಕ್ಕೆ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಭೇಟಿ ನೀಡಿದ್ದರು ಅವರ ಜೊತೆ ಕಾಂಗ್ರೆಸ್ ಮುಖಂಡರು ಕೂಡ ಭೇಟಿ ನೀಡಿ ಮಾತುಕತೆ ನಡೆಸಿದ್ದರು ಈ ಎಲ್ಲಾ ಬೆಳವಣಿಗೆಗಳು ರಾಜ್ಯ ರಾಜಕಾರಣದಲ್ಲಿ ಯಾವುದೇ ಕ್ಷಣದಲ್ಲಿಯೂ ಅಲ್ಲೋಲ ಕಲ್ಲೋಲ ಸೃಷ್ಟಿಮಾಡಿ ಯಾವುದೇ ರಾಜಕೀಯ ದೃವೀಕರಣವಾಗಲೂ ಬಹುದು .

## ಅತೃಪ್ತರ ದೆಹಲಿ ಭೇಟಿ

ಈ ಬೆಳವಣಿಗೆ ಒಂದು ಕಡೆಯಾದರೆ ಇನ್ನೂ ಸಚಿವ ಸ್ಥಾನ ಸಿಗದೆ ಅಸಮಧಾನಗೊಂಡಿರುವ ದೆಹಲಿಗೆ ತೆರಳಿರುವ ಅತೃಪ್ತ ಶಾಸಕರು ಮುಂದಿನ ನಿರ್ಧಾರಕ್ಕೆ ಸಿದ್ದತೆ ನಡೆಸಿದ್ದಾರೆ .

ಸದ್ಯ ನವದೆಹಲಿಯಲ್ಲಿ ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ, ಸಿ.ಪಿ.ಯೋಗೇಶ್ವರ್ ಸೇರಿದಂತೆ ಮತ್ತಿತರರು ಬಿಜೆಪಿ ರಾಷ್ಟ್ರೀಯ ನಾಯಕರನ್ನು ಭೇಟಿಯಾಗಿ ತಮಗಾಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಮನವಿ ಮಾಡಿದ್ದಾರೆ

ಒಂದು ವೇಳೆ ರಾಷ್ಟ್ರೀಯ ನಾಯಕರಿಂದ ಯಾವುದೇ ರೀತಿಯ ಸೂಕ್ತ ಪ್ರತಿಕ್ರಿಯೆ ಬಾರದಿದ್ದರೆ ಬೆಂಗಳೂರಿಗೆ ಹಿಂತಿರುಗಿದ ಬಳಿಕ ಪ್ರತ್ಯೇಕ ಸಭೆ ನಡೆಸುವ ತೀರ್ಮಾನಕ್ಕೆ ಬಂದಿದ್ದಾರೆ . ತಮಗೆ ಮಂತ್ರಿ ಸ್ಥಾನ ನೀಡುವಂತೆ ರಾಷ್ಟ್ರೀಯ ನಾಯಕರ ಮೇಲೆ ನಿರಂತರವಾಗಿ ಒತ್ತಡ ಹೇರುತ್ತಿರುವ ರಮೇಶ್ ಜಾರಕಿಹೊಳಿ, ಯೋಗೇಶ್ವರ್,ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ್ ಬೆಲ್ಲದ್, ಶಿವನಗೌಡ ನಾಯಕ್, ರಾಜುಗೌಡ ನಾಯಕ್, ಮಹೇಶ್ ಕುಮಟಳ್ಳಿ, ಶ್ರೀಮಂತ್ ಪಾಟೀಲ್, ಧುರ್ಯೋದನ ಐಹೊಳೆ, ರಾಜಕುಮಾರ್ ಪಾಟೀಲ್ ತೇಲ್ಕೂರ್, ದತ್ತಾತ್ರೇಯ ಪಾಟೀಲ್ ರೇವೂರ ಸೇರಿದಂತೆ ಮತ್ತಿತರರು ಪ್ರತ್ಯೇಕ ಸಭೆ ನಡೆಸಲು ನಿರ್ಧರಿಸಿದ್ದಾರೆ

ಸಚಿವ ಸ್ಥಾನವನ್ನು ಸಾಮಾಜಿಕ ನ್ಯಾಯ, ಪ್ರಾದೇಶಿಕ ಸಮಾನತೆ, ಪಕ್ಷ ನಿಷ್ಠೆ, ಪಕ್ಷಕ್ಕೆ ಸಲ್ಲಿಸಿರುವ ಸೇವೆ ಯಾವುದನ್ನು ಪರಿಗಣಿಸದೆ ಕೆಲವೇ ಸೀಮಿತರಿಗೆ ಮಂತ್ರಿ ಸ್ಥಾನ ನೀಡಲಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕೆಂಬುದು ಶಾಸಕರ ಒತ್ತಾಯವಾಗಿದೆ. ಈಗಾಗಲೇ ಒಂದು ಬಾರಿ ಮಾಜಿ ಸಚಿವರ ನಿವಾಸದಲ್ಲಿ ಸಭೆ ಸೇರಿದ್ದ ಅತೃಪ್ತ ಶಾಸಕರು ತಮ್ಮ ಮುಂದಿನ ನಡೆಗಳ ಬಗ್ಗೆ ಚರ್ಚೆ ನಡೆಸಿದ್ದರು. ಇವರ ಜೊತೆಗೆ ಸೂಕ್ತ ಖಾತೆ ಸಿಗದೆ ಅಸಮಾಧಾನಗೊಂಡಿರುವ ಸಚಿವರಾದ ಆನಂದ್ ಸಿಂಗ್, ಎಂಟಿಬಿ ನಾಗರಾಜ್ ಸೇರಿದಂತೆ ಮತ್ತಿತರರು ಭಾಗವಹಿಸುವ ಸಾಧ್ಯತೆ ಇದೆ.

ಒಂದೆರಡು ದಿನಗಳ ನಂತರ ಬೆಂಗಳೂರಿಗೆ ಹಿಂತಿರುಗಿದ ನಂತರ ಅತೃಪ್ತರು ಸಭೆ ನಡೆಸುವ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ. ರಮೇಶ್ ಜಾರಕಿಹೊಳಿ ಕಡೇಪಕ್ಷ ತಮ್ಮ ಸಹೋದರ ಬಾಲಚಂದ್ರ ಜಾರಕಿಹೊಳಿಯನ್ನಾದರೂ ಸಂಪುಟಕ್ಕೆ ತೆಗೆದುಕೊಳ್ಳಬೇಕೆಂದು ಪಟ್ಟು ಹಿಡಿದಿದ್ದಾರೆ.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ನಾಯಕತ್ವ ಬದಲಾವಣೆಯಲ್ಲಿ ವರಿಷ್ಠರಿಗೆ ದೂರು ನೀಡಿದ್ದ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ಸಿ.ಪಿ.ಯೋಗೇಶ್ವರ್, ಅರವಿಂದ ಬೆಲ್ಲದ್ ಅವರುಗಳ ಪರಿಸ್ಥಿತಿ ಭಿನ್ನವಾಗಿಲ್ಲ. ಅಸಮಾಧಾನಿತರನ್ನು ಕರೆದು ಮಾತನಾಡುವೆ.

ಸಣ್ಣಪುಟ್ಟ ಗೊಂದಲಗಳಿದ್ದರೆ ಸರಿಪಡಿಸುತ್ತೇವೆ ಎಂದು ಸಿಎಂ ಬೊಮ್ಮಾಯಿ ಅವರು ಹೇಳುತ್ತಿರುವರಾದರೂ ಪರಿಸ್ಥಿತಿ ಮಾತ್ರ ದಿನದಿಂದ ದಿನಕ್ಕೆ ಹೊಸ ತಿರುವು ಪಡೆದುಕೊಳ್ಳುತ್ತಿರುವುದು ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ ಎಂದು ಸ್ಪಷ್ಟವಾದಂತಿದೆ.


ದಾವಣಗೆರೆ

# ಒಗ್ಗಟ್ಟು ಪ್ರದರ್ಶಿಸಿದರೂ ಸಿಗಲಿಲ್ಲ ಸಚಿವಸ್ಥಾನ

● ರಾಜು ಎಂ.ಎಚ್

ಪ್ರಾದೇಶಿಕ ಅಸಮತೋಲನವಿಲ್ಲದ ಬಸವರಾಜ್ ಬೊಮ್ಮಾಯಿ ಸಚಿವ ಸಂಪುಟದಲ್ಲಿ ಹಲವಾರು ಜಿಲ್ಲೆಗಳಿಗೆ ಸಚಿವ ಸ್ಥಾನ ನೀಡಿಲ್ಲ ಎನ್ನುವುದು ನಿಜವಾದರೂ ವಿಶೇಷವಾಗಿ ಮಧ್ಯಕರ್ನಾಟಕದ ದಾವಣಗೆರೆ ಜಿಲ್ಲೆಗೆ ಈ ಬಾರಿ ಒಬ್ಬರಾದರೂ ಸಚಿವರಾಗುತ್ತಾರೆ ಎನ್ನುವ ಭರವಸೆ ಇತ್ತು ಆದರೆ ಅದು ಕೈ ತಪ್ಪಿಹೋಗಿದೆ.

ಇನ್ನೇನು ರೇಣುಕಾ ಚಾರ್ಯ ಅಥವಾ ರವೀಂದ್ರನಾಥ್ ಅವರಿಗೆ ಸಚಿವ ಸ್ಥಾನ ಸಿಗುವುದು ಪಕ್ಕಾ ಎನ್ನಲಾಗಿತ್ತು ಆದರೆ ಈ ಇಬ್ಬರಿಗೂ ಬೇರೆ ಕಾರಣಕ್ಕೆ ಸಚಿವ ಸ್ಥಾನ ತಪ್ಪಿ ಹೋಗಿದೆ. ಹೌದು ರೇಣುಕಾ ಚಾರ್ಯ ಅವರು ಇನ್ನೇನು ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಕೆಳಗಿಳಿಯುತ್ತಾರೆ ಎನ್ನುತ್ತಿದ್ದಂತೆ ಪ್ರಹ್ಲಾದ್ ಜೋಶಿ ಅವರೇ ಸಿಎಂ ಆಗುತ್ತಾರೆ ಎನ್ನುವ ಕಾರಣ ಅವರ ಜೊತೆ ಗುರುತಿಸಿಕೊಂಡಿದ್ದರು ಅಲ್ಲದೇ ಇದೇ ವೇಳೆ ಸಿಡಿ ಭಯದಲ್ಲಿ ಸಿಡಿ ಪ್ರಸಾರ ಮಾಡದಂತೆ ಕೋರಿ ಹೈಕೋರ್ಟ್‌ನಿಂದ ತಡೆ ಕೋರಿದ್ದರು ಈ ಎರಡು ಕಾರಣಗಳು ಅವರಿಗೆ ಸಚಿವ ಸ್ಥಾನ ತಪ್ಪಲು ಪ್ರಮುಖ ಕಾರಣವಾಗಿದೆ. ಒಂದು ಹೈಕಮಾಂಡ್ ಇಮೇಜ್ ಕಳೆದುಕೊಂಡವರಿಗೆ ಸಚಿವ ಸ್ಥಾನ ಬೇಡ ಎಂಬ ನಿರ್ಧಾರ ಮಾಡಿದ್ದರು ಹಾಗಿದ್ದರೂ ಯಡಿಯೂರಪ್ಪ ಅವರಿಂದ ಸಚಿವ ಸ್ಥಾನ ಸಿಗುವ ಸಾಧ್ಯತೆಗಳಿದ್ದವು ಆದರೆ ಕೊನೆ ಘಳಿಗೆಯಲ್ಲಿ ಪ್ರಹ್ಲಾದ್ ಜೋಶಿ ಜೊತೆ ಗುರುತಿಸಿಕೊಳ್ಳುತ್ತಿದ್ದಂತೆ ಅವರ







ಕೆಂಗಣ್ಣಿಗೂ ಗುರಿಯಾದ ಕಾರಣ ಬಿಎಸ್‌ವೈ ಕೂಡ ಕೃಪೆ ತೋರಲಿಲ್ಲ ಹೀಗಾಗಿ ಅವರಿಗೆ ಸಚಿವ ಸ್ಥಾನ ಕೈತಪ್ಪಿತು.

ಇನ್ನೂ ರವಿಂದ್ರನಾಥ್ ಅವರಿಗೆ ವಯಸ್ಸಿನ ಕಾರಣ ಸಚಿವ ಸ್ಥಾನ ಸಿಗಲಿಲ್ಲ ಎನ್ನಲಾಗಿದೆ. 75 ಆದ ಕಾರಣ ಬಿಜೆಪಿಯಲ್ಲಿ ವಯಸ್ಸು ಅಡ್ಡ ಬಂದಿದೆ ಎನ್ನಲಾಗಿದೆ ಇದರಿಂದ ಅವರಿಗೆ ಸಚಿವ ಸ್ಥಾನ ಕೈತಪ್ಪಿದೆ.



### 'ಒಗ್ಗಟ್ಟಿನ ಶಕ್ತಿ'ಗೂ ಸಿಗಲಿಲ್ಲ ಬೆಲೆ!

ಈ ಬಾರಿಯ ಸಿಎಂ ಬಸವರಾಜ ಬೊಮ್ಮಾಯಿ ಸಚಿವ ಸಂಪುಟದಲ್ಲಿ ದಾವಣಗೆರೆ ಜಿಲ್ಲೆಗೆ ಸ್ಥಾನ ಸಿಕ್ಕೇ ಸಿಗುತ್ತೆ ಎಂಬ ಅತಿಯಾದ ಆತ್ಮವಿಶ್ವಾಸ ಇತ್ತು. ಐವರು ಶಾಸಕರು ಒಟ್ಟಾಗಿ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಯಡಿಯೂರಪ್ಪರ ಬಳಿ 'ಒಗ್ಗಟ್ಟಿನ ಶಕ್ತಿ' ಪ್ರದರ್ಶಿಸಿದ್ದರು. ಜಿಲ್ಲೆಯ ಒಬ್ಬರಿಗಾದರೂ ಮಂತ್ರಿ ಸ್ಥಾನ ನೀಡಬೇಕೆಂಬ ಬೇಡಿಕೆ ಇಟ್ಟಿದ್ದರು. ಆದರೆ ಇದು ಫಲ ಕೊಟ್ಟಿಲ್ಲ. ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಜಗಳೂರು ಶಾಸಕ ಎಸ್.ವಿ. ರಾಮಚಂದ್ರಪ್ಪ, ಮಾಯಕೊಂಡದ ಪ್ರೊ.ಲಿಂಗಣ್ಣ ಪಕ್ಕಾ ಬಿ.ಎಸ್. ಯಡಿಯೂರಪ್ಪ ಆಪ್ತರು.

ಇನ್ನು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ. ರವೀಂದ್ರನಾಥ್ ಆರ್‌ಎಸ್‌ಎಸ್ ಗರಡಿಯಲ್ಲಿ ಪಳಗಿದವರು.

### ರವೀಂದ್ರನಾಥ್‌ಗೆ ಯಾಕೆ ಸಿಗಲಿಲ್ಲ?

ಬಿಜೆಪಿಯಲ್ಲಿ 75 ವರ್ಷ ಮೇಲ್ಪಟ್ಟವರಿಗೆ ಅಧಿಕಾರ ಇಲ್ಲ ಎಂಬ ಕಾರಣಕ್ಕೆ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ ರವೀಂದ್ರನಾಥ್‌ರಿಗೆ ಸಚಿವ ಸ್ಥಾನ ಸಿಗಲಿಲ್ಲ. ಇನ್ನು ಆರೋಗ್ಯದ ವಿಚಾರವನ್ನೂ ಪರಿಗಣಿಸಲಾಗಿದೆ. ಆರ್‌ಎಸ್‌ಎಸ್ ಒತ್ತಡ ಇತ್ತಾದರೂ ಈ ಕಾರಣಕ್ಕೆ ನೀಡಲಾಗಿಲ್ಲ.

### ಪಕ್ಷಾಂತರ ಮಾಡಿದ್ದಕ್ಕೆ ಶಿಕ್ಷೆನಾ?





ಇನ್ನು ಮಾಡಾಳ್ ವಿರೂಪಾಕ್ಷಪ್ಪ, ರೇಣುಕಾಚಾರ್ಯ, ಪ್ರೊ. ಲಿಂಗಣ್ಣ, ಎಸ್.ವಿ. ರಾಮಚಂದ್ರಪ್ಪರವರು ಯಡಿಯೂರಪ್ಪ ಕೆಜೆಪಿ ಕಟ್ಟಿದಾಗ ಬಿಜೆಪಿ ತೊರೆದು ಹೋಗಿದ್ದರು. ಬಿಜೆಪಿಯ ಅಭ್ಯರ್ಥಿಗಳ ವಿರುದ್ಧವೇ ಕಣಕ್ಕಿಳಿದು ತೊಡೆ ತಟ್ಟಿದ್ದರು. ರವೀಂದ್ರನಾಥ್ ಮಾತ್ರ ಬಿಜೆಪಿ ಬಿಡಲಿಲ್ಲ. ಈ ನಾಲ್ವರು ಯಡಿಯೂರಪ್ಪ ಬಿಜೆಪಿಗೆ ಬಂದಾಗ ಮತ್ತೆ ಸೇರ್ಪಡೆಯಾದರು. ಆ ನಂತರ ಬಿಜೆಪಿ ಟಿಕೆಟ್ ಪಡೆದು ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಬಂದಿದ್ದರು. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡ ಬಿಜೆಪಿ ಹೈಕಮಾಂಡ್ 'ಪಕ್ಷ ವಿರೋಧಿ ಚಟುವಟಿಕೆ' ನಡೆಸಿದವರಿಗೆ ಸಚಿವ ಸ್ಥಾನ ನೀಡಿದರೆ ಹೇಗೆ ಎಂಬ ಚರ್ಚೆ ನಡೆಸಲಾಗಿದೆ. ಮತ್ತೊಂದು ವಿಶೇಷ ಅಂದರೆ ಆರ್‌ಎಸ್‌ಎಸ್ ಸಹ ಪಕ್ಷ ನಿಷ್ಠೆ, ಸಂಘಟನೆಗೆ ತೊಡಗಿದವರಿಗೆ ನೀಡಬೇಕೆಂಬ ಪಟ್ಟು ಹಿಡಿದ ಕಾರಣ ಹೈಕಮಾಂಡ್ ಈ ನಿರ್ಧಾರಕ್ಕೆ ಬಂದಿದೆ. ಈ ಕಾರಣವೂ ದಾವಣಗೆರೆ ಜಿಲ್ಲೆಗೆ ಸಚಿವ ಸ್ಥಾನ ಕೈತಪ್ಪಲು ಮುಖ್ಯ ವಿಷಯವಾಗಿದೆ. ರೇಣುಕಾ ಚಾರ್ಯ ಅವರಿಗೆ ಸಿ.ಪಿ. ಯೋಗೇಶ್ವರ್ ದೆಹಲಿಯಲ್ಲಿ ನಡೆಸಿದ 'ಸಿಡಿ' ರಾಜಕೀಯದಿಂದ ಕೈತಪ್ಪುವಂತಾಯ್ತು. ಇನ್ನು ಸಿಡಿ ಅಥವಾ ಮಾನ ಹಾನಿಕರ ಸುದ್ದಿಗಳನ್ನು ಪ್ರಸಾರ ಮಾಡಬಾರದು ಎಂಬ ತಡೆಯಾಜ್ಞೆ ತಂದ ಬಳಿಕ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ. ನಿಷ್ಕಳಂಕ, ಭ್ರಷ್ಟಾಚಾರ ಆರೋಪ, ವೈಯಕ್ತಿಕ ವೀಕ್‌ನೆಸ್ ಹೊಂದಿದವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿದರೆ ಭವಿಷ್ಯದಲ್ಲಿ ಕಷ್ಟ ಎಂಬ ಅಭಿಪ್ರಾಯಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಯಾರಿಗೂ ಸಚಿವ ಸ್ಥಾನ ಒಲಿಯಲಿಲ್ಲ ಎಂಬ ಮಾತು ಸಹ ಕೇಳಿಬರುತ್ತಿದೆ.

# ತುರುವನೂರಿನ "ಈಚಲು ಮರದ ಚಳವಳಿ"

● 2ನೇ ಪುಟದಿಂದ...

ಹೆಂಡದಂಗಡಿಗಳನ್ನು ಸುಡುವುದು, ಶಾಲಾ-ಕಾಲೇಜು ವ್ಯಾಸಂಗಕ್ಕೆ ಬಹಿಷ್ಕಾರ ಹಾಕುವುದು, ಪೊಲೀಸ್ ಸಮ ವಸ್ತ್ರಗಳನ್ನು ಕಸಿದು ಸುಡುವುದು, ಹೊಸದೇಶದ ವಸ್ತ್ರಗಳಿಗೆ ಬಹಿಷ್ಕಾರ, ಸ್ವದೇಶಿ ವಸ್ತುಗಳ ಆಂದೋಲನ, ಅಲ್ಲಲ್ಲಿ ಟೆಲಿಗ್ರಾಫ್ ತಂತಿ ಕತ್ತರಿಸುವುದು. ಪೊಲೀಸ್ ಸ್ಟೇಷನ್‌ನಲ್ಲಿರುವ ಬಂದೂಕುಗಳ ಅಪಹರಣ, ಪ್ರಚೋದಿತವಾದ ಭಾಷಣ ಮಾಡುವುದು, ಹೀಗೆ ಘಟನೆಗಳಿಗೆ ಸಂಬಂಧಿಸಿದಂತೆ. ಜಿ.ತಿಪ್ಪೇಸ್ವಾಮಿಗೌಡ, ಎಮ್.ಶಿವಯ್ಯ, ಆರ್.ವಿರುಪ್ಪಣ್ಣ, ಎನ್. ಸಿದ್ದಣ್ಣ ಜಿ.ಎಸ್. ತಿಪ್ಪೇರುದ್ರಪ್ಪ, ಕುಂತಿ ಸಂಜೀವರೆಡ್ಡಿ, ಸಾದಾ ನಾರಾಯಣ ರೆಡ್ಡಿ , ಎಸ್,ಅನಂತ ರೆಡ್ಡಿ, ಬುಡನ್ ಸಾಬ್, ಟೈಲರ್ ಲಕ್ಷ್ಮಣ ರೆಡ್ಡಿ, ವೀರಣ್ಣ ರೆಡ್ಡಿ, ಎಂ. ಹನುಮಂತಪ್ಪ,ಕಡಬನಕಟ್ಟೆ ನರಸಿಂಹ ರೆಡ್ಡಿ ಮುಂತಾದವರನ್ನೆಲ್ಲಾ ಸಿಕ್ಕ ಸಿಕ್ಕಲ್ಲಿ ಅರೆಸ್ಟ್ ಮಾಡಿ ಬೆಂಗಳೂರು ಸೆಂಟ್ರಲ್ ಜೈಲ್, ಬಳ್ಳಾರಿ ಜೈಲ್, ಕೂಡ್ಲಿಗಿ ಜೈಲು ಸೇರಿದಂತೆ ವಿವಿಧೆಡೆ ಜೈಲುಗುಳಿಗೆ ಕಳುಹಿಸಲಾಗಿತ್ತು.



ಇಂತ ಹೊತ್ತಿನಲ್ಲೇ ಅಂದರೆ, 1940ರಲ್ಲಿ ತುರುವನೂರು ಗ್ರಾಮಕ್ಕೆ ಅಂದಿನ ಮೈಸೂರು ಮಂತ್ರಿಗಳಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ಬಂದಾಗ ಅವರಿಗೆ ಧಿಕ್ಕಾರ ಹಹಾಕಲಾಗಿತ್ತು. ಇದರಿಂದ ಆಕ್ರೋಶಗೊಂಡಿದ್ದ ಅವರು ಊರಿನಲ್ಲಿ ಪುಂಡುಗಂದಾಯ ಹಾಕಿದ್ದರು. ಬಹುಶಃ ಅಂದಿನ ಮೈಸೂರು ಪ್ರಾಂತ್ಯದ ಇತಿಹಾಸದಲ್ಲಿ ಬೇರೆ ಯಾವುದೇ ಗ್ರಾಮದಲ್ಲೂ ಪುಂಡುಗಂದಾಯ ಹಾಕಿರಲಿಲ್ಲ. ಹಾಗೆ ಹಾಕಿದು ತುರುವನೂರಿಗೆ ಮಾತ್ರ

ಈ ವಿಷಯ ಗಾಂಧೀಜಿಯವರಿಗೆ ತಿಳಿದು, ಅವರು ಕೂಡಲೇ ಅವರ ಆಪ್ತ ಸಹಾಯಕ ಮಹದೇವ ದೇಸಾಯಿ, ಜೆ.ಸಿ. ಕುಮಾರಪ್ಪ ಮತ್ತು ಮೊಮ್ಮಗ ಕೃಷ್ಣದಾಸ ಗಾಂಧಿ ಅವರನ್ನು ತುರುವನೂರಿಗೆ ಕಳಿಸಿಕೊಟ್ಟರು. ಊರಿಗೆ ಬಂದಿದ್ದ ಅವರು ಇಲ್ಲಿಯ ವಾತಾವರಣವನ್ನು ಸೂಕ್ಷ್ಮವಾಗಿ ಅವಲೋಕಿಸಿ ಹಿಂಸೆ ಮಾರ್ಗಕ್ಕೆ ಇಳಿಯದೆ ಅಹಿಂಸಾತ್ಮಕವಾದ ಹೋರಾಟವನ್ನೇ ಮುಂದುವರಿಸಬೇಕು. ಶಾಂತಿ-ಶಿಸ್ತಿಗೆ ಹೆಚ್ಚು ಬೆಲೆ ಕೊಡಬೇಕು. ನಮ್ಮ ಗುರಿ ತಲುಪಲು ಅತೀ ಸಮೀಪದಲ್ಲಿದ್ದೇವೆ. ಮಹಾತ್ಮ ಗಾಂಧೀಜಿಯವರೇ ನಿಮ್ಮೂರಿನ ಜನತೆಯ ದರ್ಶನಕ್ಕೆ ಬರುವವರಿದ್ದಾರೆ ಎಂದು ಅವರ ಸಂದೇಶವನ್ನು ತಿಳಿಸಿದರು.

ಹೀಗೆ ಪುಂಡುಗಂದಾಯ ಎತ್ತಲು ಮನೆಗಳಿಗೆ ಬರುತ್ತಿದ್ದ ಅಧಿಕಾರಿಗಳಿಗೆ ಮನೆಯ ಮೇಲೆ ಕರಿಕಂಬಳಿ ಹಾಕಿ ಪ್ರತಿಭಟಿಸಿದ್ದರು. ಕೆಲವರು ಮನೆ ಮೇಲೆ ಚಪ್ಪಲಿ ಹಾರ ತೂಗು ಹಾಕುತ್ತಿದ್ದರು. ಒಳಗಡೆ ಪ್ರವೇಶವಾದರೆ ಚಪ್ಪಲಿ ಅವರಿಗೆ ತಗಲಲಿ ಎನ್ನುವ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದರು. ಇದರಿಂದ ಅವಮಾನಗೊಂಡ ಅಧಿಕಾರಿಗಳು ಪೊಲೀಸರ ಮೂಲಕ ಮನೆಯೊಳಗೆ ಪ್ರವೇಶ ಮಾಡುತ್ತಿದ್ದರು. ಹಲವಾರು ಗುಪ್ತ ಪ್ರದೇಶಗಳಲ್ಲಿ ಸಭೆ-ಸಮಾರಂಭ ಮಾಡುವ ಮೂಲಕ ಚಳವಳಿಯನ್ನು ತೀವ್ರಗೊಳಿಸಲು ಅಣಿಯಾಗುತ್ತಿದ್ದರು. ಇಂತಹ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿದ್ದವು.

ಪೊಲೀಸ್ ಠಾಣೆ ಮೇಲೆ ಧ್ವಜಾರೋಹಣ:

ಇದೇ ಸಂದರ್ಭದಲ್ಲಿ ಊರಿನ ಜನರೆಲ್ಲ ಸೇರಿ ಹೆಣ್ಣು-ಗಂಡು ಎಂಬ ಬೇಧ-ಭಾವವಿಲ್ಲದೆ ನೂರಾರು ಮಂದಿ ಗುಂಪು ಕಟ್ಟಿಕೊಂಡು ರಾಷ್ಟ್ರೀಯ ಘೋಷಣೆಗಳನ್ನು ಕೂಗುತ್ತಾ ಸಾಗಿ ತುರುವನೂರಿನ ಪ್ರಾಥಮಿಕ, ಮಾಧ್ಯಮಿಕ ಶಾಲೆ, ಆಸ್ಪತ್ರೆ ಹಾಗೂ ಪೊಲೀಸ್ ಠಾಣೆ ಮೇಲೆ ಧ್ವಜಾರೋಹಣ ಮಾಡಿ ಘೋಷಣೆ ಕೂಗಿದ್ದರು. ಹೀಗೆ ಶಾಲೆ, ಆಸ್ಪತ್ರೆಗಳ ಮೇಲೆ ಧ್ವಜಾರೋಹಣ ಮಾಡಿದ್ದನ್ನು ಪೊಲೀಸರು ಆ ಧ್ವಜಗಳನ್ನು ಕೀಳಲು ಮುಂದಾದಾಗ 'ನೀವು ಈ ಧ್ವಜವನ್ನು ಕೀಳಬಾರದು, ದೇಶಕ್ಕೆ ಸ್ವಾತಂತ್ರ್ಯ ಬರುವವರೆಗೂ ಹಾಗೆಯೇ ಇರಬೇಕು. ಒಂದು ವೇಳೆ ನೀವೇನಾದರೂ ಆ ಧ್ವಜಗಳನ್ನು ಕಿತ್ತರೆ ನಿಮ್ಮ ಪೊಲೀಸ್ ಠಾಣೆ ಮೇಲೆ ದಾಳಿ ಮಾಡಬೇಕಾಗುತ್ತದೆ ಎಂದು ಎಚ್ಚರಿಸಲಾಗಿತ್ತು. ಅಲ್ಲದೆ ದಬ್ಬಾಳಿಕೆ ಮಾಡಲು ಬಂದಿದ್ದ ಪೊಲೀಸರ ಲಾಠಿ ಹಾಗೂ ಟೋಪಿಗಳನ್ನು ಕಿತ್ತು ಬಿಸಾಡಲಾಗಿತ್ತು. ನಂತರ ಪೊಲೀಸ್ ಠಾಣೆಗೆ ಚಳವಳಿಗಾರರು ಹೋಗಿ ಅಲ್ಲಿಯೂ ಠಾಣೆ ಮೇಲೆ ತ್ರಿವರ್ಣ ಧ್ವಜ ಹಾರಿಸಿ' ಭಾರತ್ ಮಾತಾಕಿ ಜೈ' ಎನ್ನುವ ಘೋಷಣೆಗಳನ್ನು ಕೂಗಿದ್ದರು.

ಮರುದಿನ ಚಿತ್ರದುರ್ಗದಿಂದ ಮೂರು ವ್ಯಾನ್‌ನಲ್ಲಿ ರಿಸರ್ವ್ ಪೊಲೀಸರು ಬಂದು ಊರಿನವರನ್ನ ಬೆದರಿಸಲು ಮುಂದಾಗಿದ್ದರು. ಆದರೆ ಇಡೀ ಊರೇ ಪೊಲೀಸ್ ಠಾಣೆ ಸಮೀಪದ ಮನೆಗಳ ಮೇಲೆ ನಿಂತು ಪೊಲೀಸರ ದೌರ್ಜನ್ಯಕ್ಕೆ ಪ್ರತಿಯಾಗಿ ಯುದ್ದಕ್ಕೆ ಸನ್ನದ್ದರಾದವರಂತೆ ನಿಂತಿದ್ದರು. ಠಾಣೆ ಮುಖ್ಯ ರಸ್ತೆಯ ಮೇಲೆ ನಿಂತಿದ್ದ ದಫೇದಾರ್ ಒಬ್ಬರು ಊರಿನ ಗೌಡರು, ಪ್ರಮುಖರು ಪೊಲೀಸ್ ಠಾಣೆಯ ಮುಂದೆ ಬರುವಂತೆ ಎಚ್ಚರಿಸಿದ್ದರು. ಈ ವೇಳೆ ಗೌಡರ ಹನುಮಕ್ಕ "ಹೋಗಲೇ ಬಾಡ್ಕಾವ್, ಇಲ್ಲಿ ಯಾರು ಹೆದರುವುದಿಲ್ಲ. ನಿಮ್ಮ ಬೆದರಿಕೆಗೆ ಬಗ್ಗುವುದಿಲ್ಲ. ಇಂಗ್ಲಿಷರಿಗೆ ಸಲಾಂ ಹೊಡ್ಕೊಂಡು ಬಿದ್ದಿರುವ ನಿಮಗೆ ಇಷ್ಟು ಸೊಕ್ಕು ಇರಬೇಕಾದರೆ ನಮಗೆ ಎಷ್ಟು ದರ್ಪ ಇರಬೇಕು. ಹೋಗ್ರೋ ಗುಲಾಮ್ ನನ್ನಮಕ್ಳ ಯಾರೇ ಬಂದರು ಈ ಊರಿನ ಜನ ಹೆದರುವುದಿಲ್ಲ" ಎಂದು ಗಟ್ಟಿಯಾಗಿ ಕೂಗಿ ಹೇಳಿದ ಆ ಮಾತಿಗೆ ಇಡೀ ಜನ 'ವಂದೇ ಮಾತರಂ' ಘೋಷಣೆ ಕೂಗಿ ಒಗ್ಗಟ್ಟನ್ನು ಪ್ರದರ್ಶಿಸಿದ್ದರು. ಆದರೆ ಈ ವೇಳೆ ಸಬ್ ಇನ್ಸ್‌ಪೆಕ್ಟರ್ ಕೂಡಲೇ ಎಲ್ಲರು ತಮ್ಮ ತಮ್ಮ ಮನೆಗೆ ಹೊರಟು ಹೋಗಿ, ಇಲ್ಲದಿದ್ದರೆ ಗೋಲಿಬಾರ್ ಮಾಡಬೇಕಾಗುತ್ತದೆ ಎಂದು ಕೂಡ ಎಚ್ಚರಿಸಿದ್ದರು. ಈ ಎಚ್ಚರಿಕೆ ಮಧ್ಯೆಯೂ 75 ವರ್ಷದ ಮುದುಕ ಸಣ್ಣ ಹನುಮಂತರೆಡ್ಡಿ ಅವರು ಪೊಲೀಸರ ಮುಂದೆ ಬಂದು ನಿಂತು ಗುಂಡು ಹಾರಿಸುತ್ತೀಯಾ ಹಾರಿಸು ಎಂದು ಎದೆಯೊಡ್ಡಿದ್ದರು. ಅಲ್ಲದೆ ' ನೀನು ಹುಟ್ಟಿರುವುದು ಇಂಗ್ಲಿಷರಿಗೋ ಭಾರತಾಂಬೆಯ ಪುತ್ರರರಿಗೋ ? ನಿನಗೆ ನಾಚಿಕೆ ಆಗುವುದಿಲ್ಲವೆ, ಆ ಬಿಳಿಮುಖಗಳ ಮಾತು ಕೇಳಿ ಈ ರೀತಿ ಮಾಡಲು ಎಂದು ಜೋರಾಗಿ ಮಾತನಾಡಿದಾಗ ಮೌನವಾದ ಪೊಲೀಸರು ಎಲ್ಲರಿಗೂ ಸಮಾಧಾನ ಮಾಡಿದ್ದರು.

ಇಂತಹ ಹತ್ತಾರು ಘಟನೆಗಳು ನಮ್ಮ ತುರುವನೂರಿನಲ್ಲಿ ಘಟಿಸಿವೆ. ಇಂತಹ ಸಂದರ್ಭದಲ್ಲಿ ಈಗಿನ ಅಖಿಲ ಭಾರತ ವೀರಶೈವ ಮಹಾಸಭೆ ಅಧ್ಯಕ್ಷರೂ ಹಾಗೂ ವಿಧಾನ ಪರಿಷತ್ ಮಾಜಿ ಸಭಾಪತಿಗಳೂ ಆದ ಎನ್ ತಿಪ್ಪಣ್ಣ ಅವರು ಕೂಡ ಇದರಲ್ಲಿ ಭಾಗಿಯಾದವರು. ಊರಲ್ಲಿ ಪೊಲೀಸ್ ಠಾಣೆಗಳ ಮೇಲೆ ಪೊಲೀಸರ ಮೇಲೆ ಕಲ್ಲು ತೂರಾಟವಾದಾಗ ಅವರು ಕೂಡ ಭಾಗವಹಿಸಿದ್ದವರು. ಅಂದು ನಡೆದ ಎಲ್ಲಾ ಘಟನೆಗಳಿಗೂ ಅವರು ಸಾಕ್ಷಿಯಾಗಿದ್ದಾರೆ. ಇದು ತುರುವನೂರಿನಲ್ಲಿ ನಡೆದ "ಈಚಲು ಮರ"ದ ಚಳವಳಿ ಮತ್ತು ಸ್ವಾತಂತ್ರ್ಯ ಹೋರಾಟದ ವೃತ್ತಾಂತ.

**ಕೊಡುವುದಕ್ಕೆ ಹೆಸರಾಗಬೇಕಿದ್ದವರು ದೋಚುವುದಕ್ಕೆ ಸಿದ್ಧರಾದರೆ ಏನೆಂದು ಕರೆಯೋಣ. ಕಾಂಗ್ರೆಸ್/ ಜೆಡಿಎಸ್ ತೊರೆದು ಬಂದ ಸಂದರ್ಭದಲ್ಲಿ ತಮ್ಮದು "ತ್ಯಾಗ" ಎನ್ನುತ್ತಿದ್ದ ಶಾಸಕರು ಇದೀಗ ಇಂಥದೇ ಖಾತೆ ಬೇಕು ಎಂದು ಒತ್ತಡ ಹಾಕುತ್ತಿದ್ದಾರೆ. ಅಸಲಿ ಬಿಜೆಪಿಯವರು ತಾವೆಂದು ಕರೆದುಕೊಳ್ಳುತ್ತಿರುವ ಶಾಸಕರು ಕೂಡಾ ಮುಖ್ಯಮಂತ್ರಿ ಬೊಮ್ಮಾಯಿ ಕಷ್ಟವನ್ನು ಹೆಚ್ಚಿಸುತ್ತಿದ್ದಾರೆ.**

# "ತ್ಯಾಗ"ರಾಜರ ಖಾತೆ ಕ್ಯಾತೆ




ರಾಜಸೂತ್ರ

ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು



ಕಾಲಕಾಲಕ್ಕೆ ಪದಗಳ ಅರ್ಥ ಉಲ್ಟಾಪಲ್ಟಾ ಆಗಲು ಸಾಧ್ಯವೇ ಎಂಬ ಪ್ರಶ್ನೆಗೆ ಹೌದು ಆಗೇ ಆಗುತ್ತದೆ ಎಂಬ ಉತ್ತರ ನಮ್ಮ ರಾಜ್ಯದ ಘನತೆವೆತ್ತ ರಾಜಕಾರಣಿಗಳಿಂದ ಬರುತ್ತದೆ. ಪಕ್ಷ ಯಾವುದಾದರೇನು ನಮಗೆ ಬರಬೇಕಾದುದು ನಮಗೆ ಸಿಗಬೇಕಾದುದು ನಮಗೆ ಸಿಗಬೇಕು; ಅದನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಬಹುದು ಎನ್ನುತ್ತಾರೆ ಜನಸೇವೆ ಹೆಸರಿನಲ್ಲಿ ರಾಜಕೀಯಕ್ಕೆ ಬಂದ ನಮ್ಮ ಧುರೀಣರು. ಉದಾಹರಣೆಗೆ "ತ್ಯಾಗ" ಶಬ್ದವನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ. ಸೇವೆ ಎನ್ನುವುದು ಬಿಸಿನೆಸ್ ಆದಾಗ ತ್ಯಾಗ ಎನ್ನುವುದು ಕೂಡಾ ಆ ವ್ಯಾಪಾರದ ಭಾಗವಾಗುತ್ತದೆ ಎನ್ನುವುದು ಹೊಸ ತತ್ತ್ವ. ತ್ಯಾಗ ಎಂದರೆ ಮುಖ್ಯವಾಗಿ ಕೊಡುವುದು; ಬೇಡುವುದಲ್ಲ, ಗೋಗರೆಯುವುದೂ ಅಲ್ಲ.ಇದು ನಿಘಂಟಿನಲ್ಲಿ ಸಿಗುವ ಉತ್ತರ. ಇನ್ನೂ ಮುಂದಕ್ಕೆ ಹೋದರೆ ಎಲ್ಲವನ್ನೂ ಬಿಡುವುದು ಎಲ್ಲದರಿಂದಲೂ ದೂರವಾಗುವುದು ಎಂಬ ಅರ್ಥವೂ ಉಂಟು. ಆದರೆ ವರ್ತಮಾನದ ಕರ್ನಾಟಕದಲ್ಲಿ ಈ ಶಬ್ದ ತನ್ನ ಎಲ್ಲ ಅರ್ಥವನ್ನೂ ಕಳೆದುಕೊಂಡಿದೆ. ಬದಲಿಗೆ ಪೀಕುವುದು ಎಂಬ ಅರ್ಥ ಮೆತ್ತಿಕೊಂಡಿದೆ. ಇನ್ನೂ ಸರಳ ನೇರ ಭಾಷೆಯಲ್ಲಿ ಹೇಳ ಬೇಕೆಂದರೆ ಬ್ಲ್ಯಾಕ್ ಮೇಲ್ ಮಾಡುವುದು.



ರಾಜ್ಯ ವಿಧಾನ ಸಭೆಗೆ 2018ರಲ್ಲಿ ಚುನಾವಣೆ ನಡೆದಾಗ ಕಾಂಗ್ರೆಸ್ ಅಧಿಕಾರಕ್ಕೆ ಮತ್ತೆ ಬರುತ್ತದೆಂದು ಆ ಪಕ್ಷದ ನಾಯಕರು ಕನಸು ಕಂಡಿದ್ದರು. ತಮ್ಮ ಪಕ್ಷ ಪೂರ್ಣ ಬಹುಮತದಲ್ಲಿ ಪೀಠಾಧಿಕಾರ ಹಿಡಿಯುತ್ತದೆಂದು ಬಿಜೆಪಿಗರು ಮಂಡಿಗೆ ತಿಂದಿದ್ದರು. ಈ ಎರಡೂ ರಾಜಕೀಯ ಪಕ್ಷಗಳಿಗೆ ಬಹುಮತ ಬಾರದೇ ಇದ್ದಲ್ಲಿ ತಮ್ಮ ಪಕ್ಷದ ಅದೃಷ್ಟ ತನ್ನಿಂತಾನೇ ಖುಲಾಯಿಸುತ್ತದೆಂದು ಗ್ರಹಗತಿ ಆಧರಿಸಿ ಜೆಡಿಎಸ್ ವರಿಷ್ಠರು ಲೆಕ್ಕ ಹಾಕಿದ್ದರು. ಫಲಿತಾಂಶ ಹೊರಕ್ಕೆ ಬಿದ್ದಾಗ ಅಧಿಕಾರಸ್ಥ ಕಾಂಗ್ರೆಸ್ ಎರಡನೆ ಸ್ಥಾನಕ್ಕೆ ಹೋಗಿದ್ದರೆ ಹೆಚ್ಚು ಸ್ಥಾನ ಗಳಿಸಿದರೂ ಬಹುಮತ ಬಾರದ ಬಿಜೆಪಿ ಪಾಳಯದಲ್ಲಿ ಮಂಕು ಕವಿಯಿತು. ತಾನೆಣಿಸಿದಂತೆಯೇ ಜನರ ತೀರ್ಮಾನವೂ ಬಂದ ಖುಷಿಯಲ್ಲಿ ಮೂರನೇ ಸ್ಥಾನದಲ್ಲಿ ಇದ್ದರೂ ಜೆಡಿಎಸ್ ಅಧಿಕಾರದ ಚುಕ್ಕಾಣಿ ಹಿಡಿಯಿತು. ಸಿಂಹಾಸನಕ್ಕೆ ಚಾಮರ ಬೀಸುವ ಕೆಲಸವನ್ನು ಕಾಂಗ್ರೆಸ್ಸು ವಹಿಸಿಕೊಂಡಿತು. ಬೇರೆ ಮಾರ್ಗ ತೋಚದ ಬಿಜೆಪಿ, ವಿರೋಧ ಪಕ್ಷದ ಸಾಲಿನಲ್ಲಿ ಚಡಪಡಿಸುತ್ತ ಕೂತಿತು. ಅಲ್ಲಿಂದ ಸರ್ಕಾರ ಬೀಳಿಸುವುದು ಹೇಗೆಂಬುದೇ ಬಿಜೆಪಿ ಚಿಂತೆಯಾದರೆ, ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲೆಂದು ತಂತ್ರ ರೂಪಿಸಿ ತಾನೇ ಅಧಿಕಾರಕ್ಕೆ ತಂದು ಕೂರಿಸಿದ ಸಮ್ಮಿಶ್ರ ಸರ್ಕಾರವನ್ನು ಅಭದ್ರಗೊಳಿಸುವುದು ಹೇಗೆಂಬ ಯೋಚನೆ ಕಾಂಗ್ರೆಸ್ ಮುಖಂಡರದಾಯಿತು. ಸಮ್ಮಿಶ್ರ ಸರ್ಕಾರ ನಿರೀಕ್ಷಿತ ರೀತಿಯಲ್ಲಿಯೇ ಉರುಳಿ ಹೋಯಿತು.



ಅದಕ್ಕೆ ಪೂರ್ವದಲ್ಲಿ ಒಂದು ಡಜನ್‌ಗೂ ಅಧಿಕ ಕಾಂಗ್ರೆಸ್/ ಜೆಡಿಎಸ್ ಶಾಸಕರು ತಾವು ಆಯ್ಕೆಯಾಗಿ ಬಂದ ಪಕ್ಷಗಳಿಗೆ ರಾಜೀನಾಮೆಯನ್ನು ಬಿಸಾಕಿದರು. ಪಕ್ಷ ತೊರೆದ ತರುವಾಯದಲ್ಲಿ ಶಾಸಕ ಸ್ಥಾನ ಉಳಿಸಿಕೊಳ್ಳುವ ಆಸೆ ಸ್ಪೀಕರ್, ಕೋರ್ಟುಕಚೇರಿ ಎಂದು ಕಮರಿ ಹೋಯಿತು. ಹಾಗಂತ ಆ ಸಮಯದಲ್ಲೂ ಅವರು ಆಡುತ್ತಿದ್ದುದು "ತ್ಯಾಗ"ದ ಮಾತನ್ನೇ. ಅವರೆಲ್ಲ ಹೊರಕ್ಕೆ ಬಂದುದು ಬಿಜೆಪಿಗೆ ಅನುಕೂಲವೇ ಆಯಿತು. ಈ ಅವಧಿಯಲ್ಲಿ ನಡೆದ ಕೊಡು ಕೊಳ್ಳುವ ವ್ಯವಹಾರದಲ್ಲಿ ಕೈ ಹಿಂದೆಮುಂದೆ ಆದುದು ಏನು ಎಲ್ಲಿ ಎಷ್ಟು ಎತ್ತ ಎನ್ನುವುದಕ್ಕೆ ಲೆಕ್ಕವಿಟ್ಟವರಿಲ್ಲ ಎನ್ನುವುದು ಜನತೆಯ ಅಂಬೋಣ. ರಾಜೀನಾಮೆ ನೀಡಿದ ಶಾಸಕರು ತಮ್ಮ ತೀರ್ಮಾನಕ್ಕೆ ಆಗ ಕೊಟ್ಟ ಮತ್ತೊಂದು ದೊಡ್ಡ ಕಾರಣ ತಮ್ಮ ಪಕ್ಷಗಳಲ್ಲಿರುವ ಉಸಿರುಗಟ್ಟಿಸುವ ವಾತಾವರಣ.




ಉಸಿರಾಡಲು ಸ್ವತಂತ್ರವಿರುವ ಪಕ್ಷಕ್ಕೆ ಅವರೆಲ್ಲ ಬಂದರಲ್ಲ. ಆ ಪೈಕಿ ಒಬ್ಬಿಬ್ಬರನ್ನು ಹೊರತಾಗಿಸಿ ಉಳಿದವರೆಲ್ಲರೂ ಉಪ ಚುನಾವಣೆಯಲ್ಲಿ ಕಮಲ ಹಿಡಿದು ಗೆದ್ದು ವಿಧಾನ ಸಭೆಯೊಳಗೆ ಬಂದರು. ಅಲ್ಲಿಗೆ ಬರಲಾಗದ ಮತ್ತೆ ಕೆಲವರು ವಿಧಾನ ಪರಿಷತ್‌ನಲ್ಲಿ ಆಸೀನರಾದರು. ಆ ಪೈಕಿ ಹಲವರು ಯಡಿಯೂರಪ್ಪ ಸಂಪುಟದೊಳಗೆ ಸೇರಿ ತಾವು ಮಾಡಿದ "ತ್ಯಾಗ"ಕ್ಕೆ ಪ್ರತಿಫಲ ಪಡೆಯುವ ಯತ್ನ ಮಾಡಿದರು. ಆ ತಂಡದಲ್ಲಿಯೂ ಒಬ್ಬಿಬ್ಬರು ತಾವು ಮಾಡಿದ "ತ್ಯಾಗ"ಕ್ಕೆ ತಕ್ಕ ಪ್ರತಿಫಲ ಸಿಗಲಿಲ್ಲ ಎಂದು ಗೊಣಗಿದರು. ಮಸ್ಕಿಯಲ್ಲಿ ತಮ್ಮ ಕಾರಣವಾಗಿಯೇ ನಡೆದ ಉಪ ಚುನಾವಣೆಯನ್ನು ಗೆಲ್ಲಲಾಗದ ಪ್ರತಾಪ ಗೌಡರಿಗೆ ಇನ್ನೂ ಶಾಸನ ಸಭೆಯೊಳಗೆ ಪ್ರವೇಶ ಸಿಕ್ಕಿಲ್ಲ. ವಾಸ್ತವದಲ್ಲಿ ಮಂತ್ರಿಯಾಗುವ ಸಂಭವ ಇಲ್ಲವಾದರೂ ಆ ಕನವರಿಕೆಯಿಂದ ಅವರು ಮುಕ್ತರಾಗಿಲ್ಲ. ಎಂಎಲ್‌ಸಿಯಾಗಿ ಕೂರುವಷ್ಟರಮಟ್ಟಿಗಿನ ಭಾಗ್ಯ ಪಡೆದ ಅಡಗೂರು ವಿಶ್ವನಾಥ್ ಸಂಪುಟದೊಳಗೆ ಜಾಗ ಕಂಡುಕೊಳ್ಳಲು ಹರಸಾಹಸ ಮಾಡಿದರೇನೋ ನಿಜ ಆದರೆ ಕೋರ್ಟ್ ಎತ್ತಿ ತೋರಿದ ತಾಂತ್ರಿಕ ತೊಂದರೆ ಕಾರಣ ಸಾಧ್ಯವಾಗಲಿಲ್ಲ. ಈ ಶಾಸಕ ಸ್ಥಾನದಲ್ಲಿ ಅದು ಈಡೇರುವುದು ಸಾಧ್ಯವೂ ಇಲ್ಲ. ಈ ಇಬ್ಬರನ್ನು ಹೊರತಾಗಿಸಿದರೆ ಇತರ ಎಲ್ಲ "ತ್ಯಾಗ"ರಾಜರು ಸುರಕ್ಷಿತವಾಗಿ ದಡ ಸೇರಿದರು ಎಂಬಷ್ಟರಲ್ಲಿ ಪಕ್ಷದ ಆಂತರಿಕ ಜಗಳದ ಸುನಾಮಿ ಅಲೆ ಮುಖ್ಯಮಂತ್ರಿ ಪುತ್ರ ಬಿ.ವೈ. ವಿಜಯೇಂದ್ರ ಹೆಸರಿನಲ್ಲಿ ಅಪ್ಪಳಿಸಿ ಯಡಿಯೂರಪ್ಪ ಸರ್ಕಾರವನ್ನು ಕೊಚ್ಚಿ ಕೊಂಡೊಯ್ಯಿತು. ಹೊಯ್ದಾಟ, ತುಮುಲ, ಅಲ್ಲೋಲಕಲ್ಲೋಲ.

ಹಳ್ಳಿಗಾಡಿನಲ್ಲಿ ಕಣ್ಣಾಮುಚ್ಚಾಲೆ ಮಕ್ಕಳ ಪಾಲಿನ ಪರಮಾಯಿಶಿ ಆಟ. "ಅವರ್ನ ಬಿಟ್ ಇವರ್ನ ಬಿಟ್ ಅವರ್ಯಾರು" ಎಂದು ಒಂದು ಗುಂಪಿನ ಮಕ್ಕಳು ಹಾಡುತ್ತ ಕುಣಿದಾಡಿದರೆ ಮತ್ತೆ ಕೆಲವು ಮಕ್ಕಳಿಗೆ "ಕಣ್ಣಾಮುಚ್ಚೆ ಕಾಡೆಗೂಡೇ ಉದ್ದಿನ ಮೂಟೆ ಉರುಳೇ ಹೋಯ್ತು, ನಮ್ಮ ಹಕ್ಕಿ ಬಿಟ್ಟೇ ಬಿಟ್ಟೇ..." ಎಂದು ಕೇಕೆ ಹಾಕುವುದರಲ್ಲಿ ಪರಮ ಆನಂದ. ಯಡಿಯೂರಪ್ಪ ಸರ್ಕಾರವನ್ನು ಮನೆಗೆ ಕಳಿಸುವುದರಲ್ಲಿ ಕಾಂಗ್ರೆಸ್ ಅಥವಾ ಜೆಡಿಎಸ್‌ಗಿಂತ ಹೆಚ್ಚು ಆಸಕ್ತರಾಗಿದ್ದುದು ಬಿಜೆಪಿ ಶಾಸಕರೇ. ಅವರಲ್ಲಿ ಒಬ್ಬರಾದ ಸಿ.ಪಿ. ಯೋಗೇಶ್ವರ್ ಸಚಿವರೂ ಆಗಿದ್ದರು. ಸಚಿವರಾದವರಿಗೆ ಮುಖ್ಯಮಂತ್ರಿಯಲ್ಲಿ ವಿಶ್ವಾಸವಿರಬೇಕು; ಮುಖ್ಯಮಂತ್ರಿಗೆ ಸಚಿವರ ನಿಷ್ಠೆಯ ಪಕ್ಕಾ ಅರಿವು ಇರಬೇಕು. ಯಡಿಯೂರಪ್ಪ ಯೋಗೀಶ್ವರ್ ವಿಚಾರದಲ್ಲಿ ಎರಡೂ ಇರಲಿಲ್ಲ. ಯೋಗೀಶ್ವರ್ ರಾಜೀನಾಮೆ ಕೊಡಲಿಲ್ಲ; ಸಂಪುಟದೊಳಗಿದ್ದುಕೊಂಡೇ ದಿನವೂ ಕಿರಿಕಿರಿ ಮಾಡುತ್ತಿದ್ದ ಅವರನ್ನು ಯಡಿಯೂರಪ್ಪ ವಜಾ ಮಾಡಲಿಲ್ಲ. ಹೆಚ್ಚೂ ಕಡಿಮೆ ಒಂದು ವರ್ಷದಿಂದ ಭಿನ್ನಮತೀಯ ಚಟುವಟಿಕೆ ನಡೆಯುತ್ತಿದ್ದರೂ ತನಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬಂತಿದ್ದುದು ಬಿಜೆಪಿ ಹೈಕಮಾಂಡ್. ಮೌನದಲ್ಲಿದ್ದಂತೆ ಹೊರನೋಟಕ್ಕೆ ಕಾಣಿಸಿಕೊಳ್ಳುತ್ತ, ಮಗುವನ್ನು ಒಂದು ಕೈಯಲ್ಲಿ ಚಿವುಟುತ್ತ ಮತ್ತೊಂದು ಕೈಯಲ್ಲಿ ತೊಟ್ಟಿಲು ತೂಗುವ ಕೆಲಸವನ್ನು ಒಳಗೊಳಗೇ ಮಾಡುತ್ತಿದ್ದ ಬಿಜೆಪಿ ವರಿಷ್ಠರು ಕಡೆಗೂ ಯಡಿಯೂರಪ್ಪ ಬದಲಾವಣೆಗೆ ಮುಹೂರ್ತ ಕಂಡುಕೊಂಡಿದ್ದು ದೊಡ್ಡ ಸಾಹಸವೇ ಸೈ.

ಅಷ್ಟರೊಳಗೆ ಇಲ್ಲಿ ಹೊಸ ಸಿಎಂ ಯಾರೆಂಬ ಬಗ್ಗೆ ಎಷ್ಟೆಲ್ಲ ಹೆಸರುಗಳು ಓಡಾಡಿದವೋ. ಆ ಪಟ್ಟಿಗೆ ನಿತ್ಯವೂ ಒಂದೊಂದು ಹೊಸ ಹೆಸರು ಸೇರುತ್ತಿತ್ತು. ಈಗ ಆ ಪಟ್ಟಿಯ ನೆನಪೂ ಇಲ್ಲ. ಮತ್ತೆ ಕೆಲವರು ತಾವೂ ಸಿಎಂ ಸ್ಥಾನಾಕಾಂಕ್ಷಿ ಎಂದು ಮಾಧ್ಯಮದ ಮುಂದೆ ಸ್ವಘೋಷಣೆ ಮಾಡಿಕೊಂಡು ಒಂದಿಷ್ಟು ಪ್ರಚಾರ ಗಿಟ್ಟಿಸಿಕೊಂಡರು. ಅವರಿರಬಹುದೇ ಇವರಾಗಬಹುದೇ ಎಂಬ ಗೊಂದಲಕ್ಕೆ ಉತ್ತರ ಸಿಕ್ಕಿದ್ದು ಧುತ್ತೆಂದು ಬಸವರಾಜ ಬೊಮ್ಮಾಯಿ ಹೆಸರು ಮುನ್ನೆಲೆಗೆ ಬಂದಾಗ. ಬಿಜೆಪಿ ಹೈಕಮಾಂಡ್ ಆಡುತ್ತಿದ್ದ ಕಣ್ಣಾಮುಚ್ಚಾಲೆ ಆಟಕ್ಕೆ ಅಂತೂ ಇಂತೂ ಎಂಬಂತೆ ತೆರೆ ಎಳೆಯಲಾಯಿತು. ಆದರೆ ಸಮಸ್ಯೆ ನಿವಾರಣೆ ಆಯಿತೆ...? ಯಡಿಯೂರಪ್ಪ ಕಾರಣವಾಗಿ ಮೂಡಿರುವ ಕಗ್ಗಂಟು ಬೊಮ್ಮಾಯಿ ಸಿಎಂ ಆದ ಮಾತ್ರಕ್ಕೆ ಸಡಿಲವಾಗಿಲ್ಲ. ಆಗುವ ಸೂಚನೆಯೂ ಇಲ್ಲ. ಮೂಲ ಬಿಜೆಪಿಯ ಕೆಲವು ಶಾಸಕರು ಕುದಿಯುತ್ತಿದ್ದಾರೆ. "ತ್ಯಾಗ" ರಾಜರು ಯಡಿಯೂರಪ್ಪ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದೇ ತಾವು ಬಯಸಿರುವುದನ್ನು ಕೈವಶ ಮಾಡಿಕೊಳ್ಳುವುದಕ್ಕಾಗಿ ಎಂಬ ಸತ್ಯವನ್ನು ಹೇಳುತ್ತಿದ್ದಾರೆ.



ತಮಗೆ ಈ ಖಾತೆ ಬೇಡ, ಆ ಖಾತೆಯೇ ಬೇಕು ಎಂದು ಖಾತೆ ಕ್ಯಾತೆ ಮಾಡುತ್ತ ರಚ್ಚೆ ಹಿಡಿದಿದ್ದಾರೆ. ಅವರಲ್ಲಿ ಕೆಲವರನ್ನಾದರೂ ಸಂಪುಟದಿಂದ ಕೈ ಬಿಡುವ, ದೂರವೇ ಇಡುವ ಮನಸ್ಸು ಬೊಮ್ಮಾಯಿಯವರಿಗೆ ಇದ್ದರೂ ಧೈರ್ಯವಿಲ್ಲ. ತಾವು ಯಡಿಯೂರಪ್ಪ ಋಣದಲ್ಲಿ ಸಿಎಂ ಆಗಿದ್ದೆನ್ನುವ ನೆನಪು ಅವರ ಕೈಗಳನ್ನು ಕಟ್ಟಿ ಹಾಕಿದೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗುವುದಕ್ಕಾಗಿ "ತ್ಯಾಗ" ಮಾಡಿದವರಲ್ಲಿ ಒಬ್ಬರಾಗಿರುವ ಮುನಿರತ್ನ, ಅವರ ಸಹ ಶಾಸಕ/ಮಿತ್ರ "ತ್ಯಾಗ" ರಾಜರಿಗೆ ಹೋಲಿಸಿ ನೋಡಿದರೆ ತುಸು ಭಿನ್ನವಾಗಿ ಕಾಣಿಸುತ್ತಿದ್ದಾರೆ. ಎಷ್ಟು ಕಾಲದವರೆಗೆ ನಾವು ಮಾಡಿದ್ದು ತ್ಯಾಗ ಎಂದು ಹೇಳಿಕೊಳ್ಳುತ್ತ ಹೋಗುತ್ತೀರಿ ಎಂಬುದು ಗೆಳೆಯರಿಗೆ ಅವರ ಪ್ರಶ್ನೆ. ಇತರ "ತ್ಯಾಗ"ರಾಜರು ಮುನಿರತ್ನ ಮಾತಿಗೆ ಹೇಗೆ ಪ್ರತಿಕ್ರಿಯಿಸುತ್ತಾರೋ ಗೊತ್ತಿಲ್ಲ. ಅಥವಾ ಇದೊಂದು ಬಗೆಯ ಅಡ್ಡ ಹಾದಿ ಹಿಡಿಸುವ ತಂತ್ರವೋ ಹೇಗೋ ಎನ್ನುವುದೂ ಗೊತ್ತಾಗುತ್ತಿಲ್ಲ. ಆನಂದ್ ಸಿಂಗ್, ಎಂಟಿಬಿ ನಾಗರಾಜ, ಮಂತ್ರಿಗಿರಿ ಕೈತಪ್ಪಿಹೋದ ಯೋಗೇಶ್ವರ್ ಬುಸುಗುಡುತ್ತಿದ್ದಾರೆ. ಅಲುಗಾಡುತ್ತಿರುವ ಅವರೆಲ್ಲರ ಹಲ್ಲುಗಳನ್ನು ಬೊಮ್ಮಾಯಿ ಕಿತ್ತು ಹಾಕಿಯಾರೆ...? ಅದಕ್ಕೆ ಯಡಿಯೂರಪ್ಪ ಅವಕಾಶ ಕೊಟ್ಟಾರೆಯೇ ಗೊತ್ತಿಲ್ಲ. ಅಸಲಿ ಬಿಜೆಪಿಯವರು ತಾವೆಂದು ಹೇಳಿಕೊಳ್ಳುವ ಅನೇಕರ ಪೈಕಿ ಮೈಸೂರು ಶಾಸಕ ಎಸ್.ಎ. ರಾಮದಾಸ್ ಕೇಸರಿ ಬಂಡಾಯದ ಬಾವುಟ ಹಾರಿಸಿದ್ದಾರೆ. ಮುಖ್ಯಮಂತ್ರಿ ಆದ ಬಳಿಕ ಬೊಮ್ಮಾಯಿ ಮೈಸೂರಿಗೆ ಭೇಟಿ ನೀಡಿ ಶಾಸಕ/ಸಂಸದರೊಂದಿಗೆ ಸಭೆ ನಡೆಸಿದಾಗ ಉದ್ದೇಶ ಪೂರ್ವಕವಾಗಿ ಗೈರುಹಾಜರಾಗುವ ಮೂಲಕ ರಾಮದಾಸ್, ಸಂಚಲನ ಮೂಡಿಸಿದ್ದಾರೆ. ತಮ್ಮ ಕೈಗೆ ಬಂದ ತುತ್ತು ಬಾಯಿ ಮುಟ್ಟದಂತೆ ಯಾರೋ ಒಬ್ಬರು ಮಾಡಿರುವ ಕಿತಾಪತಿಯನ್ನು ಅವರು ಸಮಯ ಸಂದರ್ಭ ಬಂದಾಗ ಬಹಿರಂಗೊಳಿಸುತ್ತಾರಂತೆ. ಅತ್ತ ಹಾಸನ ಶಾಸಕ ಪ್ರೀತಂ ಗೌಡರನ್ನು ಮೂಲೆಗುಂಪು ಮಾಡುವ ಜೆಡಿಎಸ್ ಮುಖಂಡರ ದಾಳಕ್ಕೆ ಮುಖ್ಯಮಂತ್ರಿ ಬಿದ್ದರೆ ಎಂಬ ಪ್ರಶ್ನೆ ಸರಿದಾಡಲಾರಂಭ ಮಾಡಿದೆ. ಇತ್ತ ಹಿರಿಯೂರು ಶಾಸಕಿ ಪೂರ್ಣಿಮಾ ಕೂಡಾ ಬುಸಗುಡಲಾರಂಭಿಸಿದ್ದಾರೆ. ತಮಗೆ ಸಚಿವ ಸ್ಥಾನ ಸಿಕ್ಕದೇ ಹೋದುದಕ್ಕಿಂತ ಹೆಚ್ಚಾಗಿ ಅವರ ಬೇಸರಕ್ಕೆ ಕಾರಣ ಶಶಕಲಾ ಜೊಲ್ಲೆಗೆ ಮತ್ತೆ ಮಂತ್ರಿ ಪಟ್ಟ ಸಿಕ್ಕಿರುವುದು. ಕೋಳಿ ಮೊಟ್ಟೆ ಹಗರಣದಲ್ಲಿ ಸಿಕ್ಕು ಹಾಕಿಕೊಂಡಿರುವ ಶಶಿಕಲಾ, ಸಚಿವರಾಗುವುದು ಸಾಧ್ಯವೇ ಇಲ್ಲ ಎಂದು ಭಾವಿಸಲಾಗಿತ್ತು. ಎಲ್ಲರ ನಿರೀಕ್ಷೆಯನ್ನು ತಲೆಕೆಳಗು ಮಾಡಿರುವ ಜೊಲ್ಲೆ, ಪವಾಡವನ್ನು ಮಾಡಿದ್ದಾರೆ!



## ಭಾಷೆ, ಸಂಸ್ಕೃತಿ-ಸೊಗಡಿಗೆ ಬೆಂಕಿ ಇ

# ರಾಷ್ಟ್ರೀಯ ಶಿಕ್ಷಣ ನೀ

● ವ.ತಿ.ಮು

ರಾಷ್ಟ್ರೀಯ ಶಿಕ್ಷಣ ನೀತಿ 2020 ಜಾರಿಗೆ ತಂದು ಕಳೆದ ಜುಲೈ 29ಕ್ಕೆ ಒಂದು ವರ್ಷವಾಗಿದೆ .ಹಲವಾರು ವಿರೋಧಗಳ ನಡುವೆಯೇ ಯಾವುದೇ ಚರ್ಚೆಗಳಿಲ್ಲದೆ ಲೋಕಸಭೆಯಲ್ಲಿ ಅಂಗೀಕಾರಗೊಂಡ ಈ ಮಸೂದೆಗೆ ಹಲವಾರು ರಾಜ್ಯಗಳು ವಿರೋಧಿಸಿವೆ. ಈ ನುಡವೆ ರಾಜ್ಯ ಸರ್ಕಾರ ಈ ಶಿಕ್ಷಣ ನೀತಿಯನ್ನು ಈ ಶೈಕ್ಷಣಿಕ ವರ್ಷದಿಂದಲೇ ಆರಂಭಿಸಲಿದೆ ಈ ಮೂಲಕ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಸರ್ಕಾರ ಪಾತ್ರವಾಗಿದೆ. ಆದರೆ ಇದರ ಆಗು-ಹೋಗುಗಳೇನು? ಇದರಿಂದ ಆಗುವ ಅನುಕೂಲ ಅನಾನುಕೂಲಗಳೆನು ಎನ್ನುವ ಚರ್ಚೆಗಳು ನಡೆಯಬೇಕಿತ್ತು ಆದರೆ ಯಾವುದೆ ಆಗದೆ ಪ್ರತಿಷ್ಟೆಯಾಗಿ ಈ ನೀತಿಯನ್ನ ಜಾರಿಗೆ ತರುವ ಮೂಲಕ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಣೆ ಹಾಕಲು ಮುಂದಾಗಿರುವುದು ಸತ್ಯ.

ಹೌದು ಈ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಹೊಸ ಸವಾಲುಗಳ ಮೂಲಕ ಏಕಶಿಕ್ಷಣ ರೂಪವಾಗಿ ಬರುತ್ತಿದೆ ಎನ್ನುವುದು ನಿಜ ಆದರೆ ಈ ಮಧ್ಯೆ ಹಲವು ಗೊಂದಲಗಳಿವೆ ಪ್ರಾದೇಶಿಕ ಭಾಷೆಗಳ ಕಲಿಕೆಯ ಬಗ್ಗೆ ಒಂದಿಷ್ಟು ಅನುಮಾನಗಳು ಇವೆ ಅವೆಲ್ಲವನ್ನು ಪರಿಹರಿಸುವ ಮತ್ತು ಅದಕ್ಕೆ ಸ್ಪಷ್ಟೀಕರಣಕೊಡುವ ಅವಶ್ಯಕತೆಯೂ ಇತ್ತು ಆದರೆ ಅದು ಕೂಡ ಆಗದೇ ಏಕಾಏಕಿ ಈ ನೀತಿಯನ್ನು ಜಾರಿಗೆ ತರುವ ಮೂಲಕ ಸರ್ಕಾರಿ ಕಾಲೇಜುಗಳನ್ನು ನಿರ್ಲಕ್ಷ್ಯ ಮಾಡಿದಂತಾಗುತ್ತದೆ.

ಇಲ್ಲಿ ಇನ್ನೊಂದು ಪ್ರಮುಖ ವಿಚಾರವೆಂದರೆ ಪದವಿಯ ಅವಧಿಯನ್ನು ನಾಲ್ಕು ವರ್ಷಕ್ಕೆ ಏರಿಸಿರುವುದರಿಂದ ಗ್ರಾಮೀಣ ಪ್ರದೇಶ, ಹಿಂದುಳಿದ, ಕೆಳಸ್ತರದ ವಿದ್ಯಾರ್ಥಿಗಳಿಗೆ ಕಷ್ಟವಾಗಲಿದೆ.



ಮೂರು ವರ್ಷಗಳ ಪದವಿಯ ಸಂದರ್ಭದಲ್ಲಿಯೇ, ಅರ್ಧಕ್ಕೆ ಶಿಕ್ಷಣ ತೊರೆದು ದುಡಿಯಲು ಹೋಗುವಂತಹ ಅನಿವಾರ್ಯತೆಯಲ್ಲಿ ಈ ವಿದ್ಯಾರ್ಥಿಗಳು ಇರುತ್ತಾರೆ. ಮುಂದೆ ಈ ಎನ್‌ಇಪಿಯ ಬಹುಶಿಸ್ತಿನ ಶಿಕ್ಷಣ ಪಡೆಯಲು ವರ್ಷಕ್ಕೆ 7 ಲಕ್ಷ ಖರ್ಚು ಮಾಡಬೇಕು. ಅಂದರೆ, ನಾಲ್ಕು ವರ್ಷಗಳ ಪದವಿ ಪೂರೈಸಲು 28 ಲಕ್ಷ ಬೇಕಾಗುತ್ತದೆ. ಬಡ ವಿದ್ಯಾರ್ಥಿಗಳಿಗೆ ಇದನ್ನು ಭರಿಸಲು ಸಾಧ್ಯವಾಗುತ್ತದೆಯೇ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಅಲ್ಲದೆ ಪ್ರಾದೇಶಿಕ ಭಾಷೆಗಳು ಅಂದರೆ, ಕನ್ನಡ ಸಾಹಿತ್ಯ, ಸಂಸ್ಕೃತಿ, ಕಾವ್ಯದ ಕಲಿಕೆಯನ್ನು ಒಂದು ವರ್ಷಕ್ಕೇ ಮುಗಿಸಿಬಿಡಿ ಎನ್ನುವುದರ ಮೂಲಕ ನಮ್ಮ ಸಂಸ್ಕೃತಿಗೆ ಧಕ್ಕೆ ತರುವ ಕೆಲಸವನ್ನೂ ಕೇಂದ್ರ ಸರ್ಕಾರ ಮಾಡುತ್ತಿದೆ. ಭಾಷೆ, ಸಾಹಿತ್ಯ ಮತ್ತು ಪ್ರಾದೇಶಿಕ ಸೊಗಡನ್ನು ನಮ್ಮ ಮಕ್ಕಳಿಗೆ ಪರಿಚಯಿಸಬೇಕು ಎಂದು ಸಂವಿಧಾನವೇ ಹೇಳಿದೆ ,ಇತಿಹಾಸ ರಾಷ್ಟ್ರೀಯ ವಿಷಯವಲ್ಲ. ಆದರೆ ಈ ಮೂಲಕ ಇಲ್ಲ ಸಲ್ಲದ ಇತಿಹಾಸವನ್ನು ಕೇಸರಿಕರಣ ಮಾಡಲು ಹೊರಟಿದೆ, ನೈಜ ಇತಿಹಾಸದ ಬದಲಾಗಿ ಬೇರೆ ಇತಿಹಾಸವನ್ನು ಸೃಷ್ಟಿಸುವುದು ಇಲ್ಲಿ ಪ್ರಾಮುಖ್ಯತೆ ಪಡೆಯುತ್ತದೆ ಎನ್ನುವುದು ಪ್ರಮುಖವಾಗುತ್ತದೆ ಈ ಎಲ್ಲಾ ವಿಷಯದಲ್ಲೂ ರಾಷ್ಟ್ರೀಯಗೊಳಿಸುವ ಯತ್ನ ನಡೆಯುತ್ತಿದೆ.


ಕನ್ನಡ, ಕನ್ನಡಿಗರ ಮೇಲಿನ ದಾಳಿ'ಹೊಸ ಶಿಕ್ಷಣ ನೀತಿಯು ಭಾಷಾ ಶಿಕ್ಷಣವನ್ನು ಮೊಟಕುಗೊಳಿಸುವ ಮೂಲಕ ಪರೋಕ್ಷವಾಗಿ ಕನ್ನಡ ಮತ್ತು ಕನ್ನಡಿಗರ ಮೇಲೆ ದಾಳಿ ನಡೆಸುವ ಹುನ್ನಾರವಾಗಿದೆ. ಈಗ ಶಿಕ್ಷಣ ಕ್ಷೇತ್ರವನ್ನೂ ತಮ್ಮ ಸುಪರ್ದಿಗೆ ತೆಗೆದುಕೊಳ್ಳಲು ಖಾಸಗಿ ಸಂಸ್ಥೆಗಳು ಪ್ರಯತ್ನಿಸುತ್ತಿವೆ. ಇಂತಹ ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿಗೆ ಪೂರಕವಾಗಿ ಕೇಂದ್ರ ಸರ್ಕಾರ ಈ ಹೊಸ ನೀತಿಯನ್ನು ಜಾರಿಗೆ ತಂದಿದೆ. ಇಂತ

ನೀತಿಯನ್ನು ರಾಜ್ಯ ಸರ್ಕಾರ ಜಾರಿಗೆ
ಕೆಳಸ್ತರದ ವಿದ್ಯಾರ್ಥಿಗಳಿಗೆ ಅನ್ಯಾಯ
ಆರ್ಥಿಕವಾಗಿ ಬಳಲುವ ಕುಟುಂಬಗ
ದುಸ್ತರವಾಗುತ್ತದೆ.

### ಹೊಸ ಶಿಕ್ಷಣ ನೀತಿ ಏನು

ಕೇಂದ್ರ ಸರ್ಕಾರವು ಭಾರಿ ಮಹತ್
ನೀತಿಯನ್ನು ರೂಪಿಸಿದ್ದರೂ ಅದರ ಜ
ಕಂಡಿಲ್ಲ. ಅದಕ್ಕೆ ಹಲವು ಕಾರಣಗಳೂ
ಪ್ರತಿಪಾದಿಸುವ ಭಾಷಾ ನೀತಿಯ ಬಗ್ಗ
ವ್ಯಕ್ತಪಡಿಸಿವೆ. ಈಗ ಇರುವ ಸ್ಥಿತಿಯಲ್ಲಿ
ಜಾರಿಗೊಳಿಸಿದರೆ ಹಲವು ಸಮಸ್ಯೆಗಳ
ತಮಿಳುನಾಡು ಸರ್ಕಾರವು ಪ್ರತಿಪಾದಿ
ವಿವಿಧ ರಾಜ್ಯಗಳು ಹೊಂದಿರುವ ಆಕ್ಷೆ
ವಿಳಂಬವಾಗಲು ಕಾರಣವಾಗಿದೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ
ತರಲು ಕೇಂದ್ರ ಸರ್ಕಾರವು ಸ್ಪಷ್ಟವಾದ
ರೂಪಿಸಿಲ್ಲ ಎಂದು ಹಲವು ರಾಜ್ಯಗಳ
23ನೇ ಸಾಲಿನಲ್ಲಿ ಮೊದಲ ಹಂತದಲ್ಲಿ
ನೂತನ ಶಿಕ್ಷಣ ನೀತಿಗೆ ಅನುಗುಣವಾ
ಸರ್ಕಾರವು ಗುರಿ ಹಾಕಿಕೊಂಡಿದೆ. ಆ
ತರುವುದು ಹೇಗೆ ಎಂಬುದನ್ನು ಸ್ಪಷ್ಟ
ಶಿಕ್ಷಣ ಇಲಾಖೆಯು ಪ್ರಾಥಮಿಕ ಶಿಕ್ಷ
ಮಂಡಳಿಗಳು ಮಾಧ್ಯಮಿಕ ಮತ್ತು ಪ್ರೌ
ನೋಡಿಕೊಳ್ಳುತ್ತಿವೆ. 5+3+3+4 ವ
ಪ್ರಾಥಮಿಕ ಶಿಕ್ಷಣದ ಮೇಲ್ವಿಚಾರಣೆ
ಎಂಬುದನ್ನು ಕೇಂದ್ರ ಸರ್ಕಾರ ಸ್ಪಷ್ಟ
ಇದರ ಮೇಲ್ವಿಚಾರಣೆ ನೋಡಿಕೊಳ್ಳು



ಡುವ

ತಿ

ೂಳಿಸುವ ಮೂಲಕ
ಮಾಡಿದಂತಾಗುತ್ತದೆ
ಳಿಗೆ ಶಿಕ್ಷಣ ಕಲಿಸುವುದು

ಹೇಳುತ್ತದೆ?

ತ್ವಾಕಾಂಕ್ಷೆಯಿಂದ ಶಿಕ್ಷಣ
ಜಾರಿಯಲ್ಲಿ ಅಷ್ಟು ಉತ್ಸಾಹ
ಇವೆ. ಶಿಕ್ಷಣ ನೀತಿಯು
ಕೆಲವು ರಾಜ್ಯಗಳು ಆಕ್ಷೇಪ
ಶಿಕ್ಷಣ ನೀತಿಯನ್ನು
ಎದುರಾಗಲಿವೆ ಎಂದು
ಸಿದೆ. ಶಿಕ್ಷಣ ನೀತಿಯ ಬಗ್ಗೆ
ೇಪಗಳು ಕೂಡ ನೀತಿ ಜಾರಿ

ಯನ್ನು ಅನುಷ್ಠಾನಕ್ಕೆ
ಕಾರ್ಯಯೋಜನೆಯನ್ನು
ಆರೋಪಿಸಿವೆ. 2022–
ಪ್ರಾಥಮಿಕ ಶಿಕ್ಷಣವನ್ನು
ಗಿ ಆರಂಭಿಸಲು ಕೇಂದ್ರ
ದರೆ, ಅದನ್ನು ಅನುಷ್ಠಾನಕ್ಕೆ
ಪಡಿಸಿಲ್ಲ.'ಈಗ ರಾಜ್ಯ
ವನ್ನು ಮತ್ತು ವಿವಿಧ
ಢ ಶಿಕ್ಷಣದ ಮೇಲ್ವಿಚಾರಣೆ
ಗಳ ಶಿಕ್ಷಣ ವ್ಯವಸ್ಥೆಯಲ್ಲಿ
ನೋಡಿಕೊಳ್ಳುವುದು ಯಾರು
ಡಿಸಿಲ್ಲ. ಪ್ರಾಧಿಕಾರಗಳು
ತ್ತವೆ ಎಂದಷ್ಟೇ ಹೇಳಿದೆ.

ಶಿಕ್ಷಣ ಇಲಾಖೆಯೇ ಇದರ ಮೇಲ್ವಿಚಾರಣೆ ನೋಡಿಕೊಳ್ಳಬೇಕೆ? ಅಥವಾ ಇದಕ್ಕಾಗಿ ಪ್ರತ್ಯೇಕ ಪ್ರಾಧಿಕಾರ ರಚಿಸಬೇಕೆ ಎಂಬುದನ್ನು ಸರ್ಕಾರವು ಸ್ಪಷ್ಟಪಡಿಸಿಲ್ಲ. ಅಥವಾ ತಮಗೆ ಅಗತ್ಯವಿರುವಂತೆ ನೀತಿಗೆ ಬದಲಾವಣೆ ಮಾಡಿಕೊಳ್ಳಲು ಅವಕಾಶವಿದೆಯೇ ಎಂಬುದನ್ನೂ ಕೇಂದ್ರ ಸರ್ಕಾರ ಸ್ಪಷ್ಟಪಡಿಸಿಲ್ಲ' ಎಂದು ಪಶ್ಚಿಮ ಬಂಗಾಳ ಸರ್ಕಾರವು ರಚಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಅಧ್ಯಯನ ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ಏಕರೂಪದ ಶಿಕ್ಷಣ ತರವಲ್ಲ'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ದೇಶದಾದ್ಯಂತ ಏಕರೂಪದ ಶಿಕ್ಷಣವನ್ನು ಜಾರಿಗೆ ತರಬೇಕು ಎಂದು ಹೇಳುತ್ತದೆ. ಪಠ್ಯಕ್ರಮ, ಬೋಧನಾಕ್ರಮ ಮತ್ತು ಮೌಲ್ಯಮಾಪನ ವಿಧಾನ ಏಕಪ್ರಕಾರದಲ್ಲಿ ಇರಲಿದೆ ಎಂದು ಈ ನೀತಿ ಹೇಳುತ್ತದೆ. ಆದರೆ ಏಕರೂಪದ ಶಿಕ್ಷಣ ತರವಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.'ರಾಜ್ಯದ ಸಂಸ್ಕೃತಿಗೆ ಅನುಗುಣವಾಗಿ ಪಠ್ಯಕ್ರಮ ಮತ್ತು ಬೋಧನಾಕ್ರಮವನ್ನು ರೂಪಿಸಬೇಕಾಗುತ್ತದೆ. ಆದರೆ ನೂತನ ಶಿಕ್ಷಣ ನೀತಿಯು ಈ ಅಂಶಗಳನ್ನು ಪರಿಗಣಿಸದೆ ಏಕರೂಪದ ಶಿಕ್ಷಣ ಬೇಕು ಎಂದು ಹೇಳುತ್ತದೆ' ಎಂದು ಪಶ್ಚಿಮ ಬಂಗಾಳ ಸರ್ಕಾರವು ರಚಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಅಧ್ಯಯನ ಸಮಿತಿ ತನ್ನ ವರದಿಯಲ್ಲಿ ಹೇಳಿದೆ.'ರಾಜ್ಯಗಳ ಅಧಿಕಾರ ಕಸಿಯುವ ನೀತಿ'ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿ ಬರುತ್ತದೆ. ಅಂದರೆ ಶಿಕ್ಷಣಕ್ಕೆ ಸಂಬಂಧಿಸಿದ ನೀತಿಗಳು, ಕಾನೂನುಗಳನ್ನು ರೂಪಿಸುವಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಚರ್ಚಿಸಿ, ಒಮ್ಮತದ ಮೇರೆಗೆ ನಿರ್ಧಾರಕ್ಕೆ ಬರಬೇಕಾಗುತ್ತದೆ. ಕಡ್ಡಾಯ ಶಿಕ್ಷಣ ಮತ್ತು ಸರ್ವಶಿಕ್ಷಣ ಅಭಿಯಾನ ಹೊರತುಪಡಿಸಿ ಶಾಲಾ ಶಿಕ್ಷಣದ ನೀತಿಗಳನ್ನು ರೂಪಿಸುವ ಸಂಪೂರ್ಣ ಅಧಿಕಾರ ರಾಜ್ಯಗಳ ಕೈಯಲ್ಲಿದೆ. ಆದರೆ ನೂತನ ಶಿಕ್ಷಣ ನೀತಿಯು ರಾಜ್ಯಗಳ ಈ ಅಧಿಕಾರವನ್ನು ಕಸಿದುಕೊಂಡಿದೆ ಎಂದು ತಮಿಳುನಾಡು, ಕೇರಳ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳು ಆರೋಪಿಸಿವೆ.'ನೂತನ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಇಲ್ಲ. ಏಕಪಕ್ಷೀಯವಾಗಿ ಈ ನೀತಿಯನ್ನು ರೂಪಿಸಿದೆ. ಈ ಮೂಲಕ ರಾಜ್ಯಗಳ ಅಧಿಕಾರವನ್ನು ಕಸಿದುಕೊಂಡಿದೆ. ನೀತಿಯನ್ನು ಜಾರಿಗೆ ತಂದು, ಆನಂತರ ರಾಜ್ಯದ ಅಧಿಕಾರಿಗಳನ್ನು ಚರ್ಚೆಗೆ ಆಹ್ವಾನಿಸಲಾಗಿದೆ. ಚುನಾಯಿತ ಸರ್ಕಾರ ಮತ್ತು ಶಿಕ್ಷಣ ಸಚಿವರನ್ನು ಬದಿಗೊತ್ತಿ, ಅಧಿಕಾರಿಗಳ ಜತೆ ಚರ್ಚಿಸಲಾಗಿದೆ. ಈ ಕಾರಣದಿಂದಲೇ ಸಭೆಗೆ ನಾವು ಹಾಜರಾಗಿಲ್ಲ' ಎಂದು ತಮಿಳುನಾಡು ಸರ್ಕಾರ್ಲ ಹೇಳಿತ್ತು.'ಶಿಕ್ಷಣ ನೀತಿಯನ್ನು ಹೇರಿಕೆ ರೀತಿಯಲ್ಲಿ ಅನುಷ್ಠಾನಕ್ಕೆ ತರಲು ಕೇಂದ್ರ ಸರ್ಕಾರ ಮುಂದಾಗಿದೆ. ಸಮವರ್ತಿ ಪಟ್ಟಿಯ ಪ್ರಕಾರ ಶಿಕ್ಷಣಕ್ಕೆ ಸಂಬಂಧಿಸಿದ ನೀತಿ ರೂಪಿಸುವಲ್ಲಿ ರಾಜ್ಯ ಸರ್ಕಾರಗಳೂ ಸಮನಾದ ಅಧಿಕಾರ ಹೊಂದಿವೆ. ಅದನ್ನು ಕಸಿದುಕೊಂಡು, ತ್ರಿಭಾಷಾ ಸೂತ್ರವನ್ನು ಜಾರಿಗೆ ತನ್ನಿ ಎನ್ನುತ್ತಿದೆ. ಇದನ್ನು ನಾವು ಒಪ್ಪುವುದಿಲ್ಲ' ಎಂದು ತಮಿಳುನಾಡು ಸರ್ಕಾರ ಸ್ಪಷ್ಟಪಡಿಸಿದೆ.

## ಹೊಸ ಮಹತ್ವಾಕಾಂಕ್ಷೆಯ ಶಿಕ್ಷಣ ನೀತಿಯೇ?

ಹೊಸ ಶಿಕ್ಷಣ ನೀತಿಯು 21ನೇ ಶತಮಾನದ ತಂತ್ರಜ್ಞಾನ ಯುಗಕ್ಕೆ ಮಕ್ಕಳನ್ನು ಸಜ್ಜುಗೊಳಿಸುವುದು ಸೇರಿದಂತೆ ಮಹತ್ವದ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡಿದೆ. ಪಠ್ಯಕ್ರಮ, ತರಗತಿ ವರ್ಗೀಕರಣ, ಆರಂಭದ ಕಲಿಕೆ, ಭಾಷೆ, ಕಲಿಕೆ ಜೊತೆ ಕೌಶಲ ತರಬೇತಿ, ಉನ್ನತ ಶಿಕ್ಷಣ ಹಾಗೂ ಪರೀಕ್ಷೆ ಸರಳೀಕರಣದಂತಹ ಹತ್ತಾರು ಬದಲಾವಣೆಗಳ ಆಶಯವನ್ನು ಹೊಂದಿದೆ.ಹೊಸ ಶಿಕ್ಷಣ ನೀತಿಯ ಪ್ರಮುಖ ಸುಧಾರಣೆಗಳಲ್ಲಿ ಮಹತ್ವದ್ದು ಎಂದು ಪರಿಗಣಿಸಲಾಗಿರುವುದು ಆರಂಭಿಕ ಶಿಕ್ಷಣ. ಮಕ್ಕಳ ಆರಂಭಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಉದ್ದೇಶವನ್ನು ನೀತಿ ಹೊಂದಿದೆ. ಶಾಲಾ ವಿದ್ಯಾಭ್ಯಾಸದಿಂದ ವಂಚಿತರಾಗಿರುವ ಸುಮಾರು 2 ಕೋಟಿ ಮಕ್ಕಳನ್ನು2030ರ ವೇಳೆಗೆ ಮರಳಿ ಶಾಲೆಗೆ ಕರೆತರುವ ಮಹತ್ವದ ಉದ್ದೇಶವನ್ನು ನೀತಿ ಪ್ರಸ್ತಾಪಿಸಿದೆ.ಭಾಷಾ ನೀತಿಯಲ್ಲಿ ಬದಲಾವಣೆಗಳನ್ನು ತರಲಾಗಿದೆ. ವಿದ್ಯಾರ್ಥಿಯು ಇಂತಹದ್ದೇ ಭಾಷೆ ಕಲಿಯಬೇಕು ಎಂಬ ಹೇರಿಕೆಯನ್ನು ಕೈಬಿಡಲಾಗಿದೆ. ಮಾಧ್ಯಮಿಕ ಹಂತದಲ್ಲಿ ಮಕ್ಕಳಿಗೆ ವಿದೇಶಿ ಭಾಷೆಗಳನ್ನು ಕಲಿಯಲೂ ಅವಕಾಶ ನೀಡುವ ವಾಗ್ದಾನ ನೀಡಿದೆ. ಮಾತೃಭಾಷೆ ಅಥವಾ ಸ್ಥಳೀಯ ಭಾಷೆ ಅಥವಾ ಪ್ರಾದೇಶಿಕ ಭಾಷೆಯನ್ನು ಕನಿಷ್ಠ 5ನೇ ತರಗತಿಯವರೆಗೆ ಬೋಧನಾ ಮಾಧ್ಯಮವಾಗಿ ಬಳಸಬೇಕು. 8ನೇ ತರಗತಿ ಮತ್ತು ಅದಕ್ಕೂ ಹೆಚ್ಚಿನ ಶಿಕ್ಷಣಕ್ಕೂ ಅದು ಅನ್ವಯವಾದರೆ ತೊಂದರೆಯಿಲ್ಲ ಎಂದು ತಿಳಿಸಿದೆ. ಈ ಮೂಲಕ ಭಾಷಾ ಮಾಧ್ಯಮ ಗೊಂದಲಕ್ಕೆ ಸ್ಪಷ್ಟತೆ ದೊರಕಿಸುವ ಯತ್ನ ಮಾಡಿದೆ.

ತರಗತಿಗಳ ವರ್ಗೀಕರಣದಲ್ಲಿ ಗುರುತರ ಬದಲಾವಣೆಯ ಗುರಿ ಹಾಕಿಕೊಳ್ಳಲಾಗಿದೆ. ಈಗಿರುವ 10+2 ರಚನೆಯ ಬದಲಾಗಿ, 5 + 3 + 3 + 4 ರಚನೆ ಪ್ರಸ್ತಾಪಿಸಲಾಗಿದೆ. ಇದರ ಪ್ರಕಾರ ಮಗುವಿನ ಪ್ರಾಥಮಿಕ ಶಿಕ್ಷಣ 3ನೇ ವರ್ಷದಿಂದ ಆರಂಭವಾಗುತ್ತದೆ. ವಿದ್ಯಾರ್ಥಿಯ 18ನೇ ವರ್ಷದವರೆಗೆ ತರಗತಿಗಳನ್ನು ವರ್ಗೀಕರಣ ಮಾಡಲಾಗಿದೆ.

ವಿವರಿಸಿ ಹೇಳುವುದಾದರೆ, ಹೊಸ ವ್ಯವಸ್ಥೆಯು ಮೂರು ವರ್ಷಗಳ ಅಂಗನವಾಡಿ ಅಥವಾ ಶಾಲಾಪೂರ್ವ ಕಲಿಕೆಯೊಂದಿಗೆ 12 ವರ್ಷಗಳ ಶಾಲಾ ಶಿಕ್ಷಣವನ್ನು ಹೊಂದಿರುತ್ತದೆ. 5 ಅಥವಾ 6ನೇ ವರ್ಷಕ್ಕೆ ಶಾಲೆಗೆ ಸೇರಿಸುವ ಪದ್ಧತಿ ಕೊನೆಯಾಗಲಿದೆ. 3ರಿಂದ 6 ವರ್ಷ ವಯಸ್ಸಿನವರನ್ನು ಶಾಲಾ ಪಠ್ಯಕ್ರಮದ ಅಡಿಯಲ್ಲಿ ತರಲಾಗುತ್ತಿದೆ. ಈ ವಯಸ್ಸು ಮಗುವಿನ ಮಾನಸಿಕ ಸಾಮರ್ಥ್ಯಗಳ ಅಭಿವೃದ್ಧಿಗೆ ನಿರ್ಣಾಯಕ ಹಂತವೆಂದು ಜಾಗತಿಕವಾಗಿ ಗುರುತಿಸಲಾಗಿದೆ.ಮಕ್ಕಳಿಗೆ ಶಾಲಾ ಅವಧಿಯಲ್ಲೇ ವೃತ್ತಿಪರ ಶಿಕ್ಷಣ ನೀಡಿ ಸನ್ನದ್ಧಗೊಳಿಸುವ ಮಹತ್ವಾಕಾಂಕ್ಷೆಯನ್ನು ಸರ್ಕಾರ ವ್ಯಕ್ತಪಡಿಸಿದೆ. ಈ ದಿಸೆಯಲ್ಲಿ 6ನೇ ತರಗತಿಯಿಂದ ಶಾಲೆಗಳಲ್ಲಿ ವೃತ್ತಿಪರ ಶಿಕ್ಷಣ ಪ್ರಾರಂಭವಾಗಲಿದ್ದು, ಇಂಟರ್ನ್‌ಶಿಪ್ ಒಳಗೊಂಡಿರುತ್ತದೆ. ಈಗಿರುವ ಸಾರಾಂಶ ರೂಪದರ್ಶಿ; ಮೌಲ್ಯಮಾಪನದ ವಿಧಾನ ಬದಲಾಗಲಿದ್ದು, ನಿಯಮಿತ ಮತ್ತು ರಚನಾತ್ಮಕ ಮೌಲ್ಯಮಾಪನಕ್ಕೆ ಮಕ್ಕಳು, ಶಿಕ್ಷಕರು ಸಿದ್ಧರಾಗಬೇಕಿದೆ. ಹೀಗೆ ಮಾಡುವುದರಿಂದ ಸಾಮರ್ಥ್ಯ ಆಧರಿತ ಕಲಿಕೆಯನ್ನು ಉತ್ತೇಜಿಸಿದಂತಾಗುತ್ತದೆ. ಮಕ್ಕಳಲ್ಲಿ ವಿಶ್ಲೇಷಣೆ, ವಿಮರ್ಶಾತ್ಮಕ ಚಿಂತನೆ ಮತ್ತು ಪರಿಕಲ್ಪನೆ ರೂಪಿಸುವುದು ಮೊದಲಾದ ಉನ್ನತ ಕೌಶಲಗಳು ಬೆಳೆಯುತ್ತವೆ ಎಂದು ನೀತಿಯು ಹೇಳಿದೆ.ಪರೀಕ್ಷಾ ವ್ಯವಸ್ಥೆ ಸುಧಾರಣೆ ಆಗಲಿದೆ ಎಂಬ ಭರವಸೆಯನ್ನು ಹೊಸ ನೀತಿ ನೀಡಿದೆ. 3, 5 ಮತ್ತು 8ನೇ ತರಗತಿಯಲ್ಲಿ ಪರೀಕ್ಷೆಗಳು ಇರಲಿವೆ. ಇದನ್ನು ಸೂಕ್ತ ಪ್ರಾಧಿಕಾರ ನಡೆಸುತ್ತದೆ. 10 ಮತ್ತು 12ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ಎಂದಿನಂತೆ ಇರಲಿವೆ. ಆದರೆ ಅವುಗಳನ್ನು ಸಮಗ್ರ ಅಭಿವೃದ್ಧಿ ದೃಷ್ಟಿಕೋನದೊಂದಿಗೆ ಮರುವಿನ್ಯಾಸಗೊಳಿಸಲಾಗುತ್ತದೆ. ಹುಟ್ಟು ಅಥವಾ ಇತರೆ ಕಾರಣದಿಂದ ಯಾವುದೇ ಮಗು ಕಲಿಕೆಯಿಂದ ವಿಮುಖವಾಗಬಾರದು ಎಂಬುದು ಹೊಸ ನೀತಿಯ ಧ್ಯೇಯವಾಗಿದೆ. ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರು, ಅಂಗವಿಕಲರಿಗೆ ವಿಶೇಷ ಒತ್ತು ನೀಡವುದು ನೀತಿಯ ಆಶಯವಾಗಿದೆ. ಉನ್ನತ ಶಿಕ್ಷಣದಲ್ಲೂ ಸುಧಾರಣೆಯ ಗುರಿಯಿದ್ದು, ಎಲ್ಲ ವಿದ್ಯಾರ್ಥಿಗಳಿಗೆ ಹೊಂದಿಕೊಳ್ಳುವ ಪಠ್ಯಕ್ರಮದೊಂದಿಗೆ ಸಮಗ್ರ ಪದವಿಪೂರ್ವ ಶಿಕ್ಷಣವು 3 ಅಥವಾ 4 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ವಿದ್ಯಾರ್ಥಿ ಮೇಲೆ ಯಾವುದೇ ಒತ್ತಡ ಇರುವುದಿಲ್ಲ. ತರಗತಿ ಬೋಧನೆಗೆ ತಂತ್ರಜ್ಞಾನದ ನೆರವು ಬಳಸಿಕೊಳ್ಳಲಾಗುವುದು ಎಂದು ನೀತಿಯು ಹೇಳಿದೆ.



# ಪದವಿ ಶಿಕ್ಷಣದಲ್ಲಿ ಕನ್ನಡ ಕಲಿಕೆ ಮೊಟಕುಗೊಳಿಸುವುದಿಲ್ಲ

**ಉನ್ನತ ಶಿಕ್ಷಣ ಸಚಿವ ಅಶ್ವತ್ಥ್ ನಾರಾಯಣ**

ಪದವಿ ಶಿಕ್ಷಣದಲ್ಲಿ ಕನ್ನಡ ಕಲಿಕೆಯನ್ನು ಮೊಟಕುಗೊಳಿಸುವ ಯಾವುದೇ ಚಿಂತನೆ ಅಥವಾ ಪ್ರಸ್ತಾವನೆ ಸರಕಾರದ ಮುಂದಿಲ್ಲ .ಸ್ಥಳೀಯ ಹಾಗೂ ಪ್ರಾದೇಶಿಕ ಭಾಷೆಗಳಿಗೆ ಹೆಚ್ಚು ಮನ್ನಣೆ ನೀಡಿ ಆ ಭಾಷೆಗಳಲ್ಲೇ ವೃತ್ತಿಪರ ಶಿಕ್ಷಣ ಸೇರಿ ಎಲ್ಲ ವಿಭಾಗದ ಉನ್ನತ ಶಿಕ್ಷಣವನ್ನು ಬೋಧಿಸಬೇಕು ಎಂಬುದು ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯ. ಈ ಅಂಶಕ್ಕೆ ಶಿಕ್ಷಣ ನೀತಿಯಲ್ಲಿ ಹೆಚ್ಚು ಒತ್ತು ನೀಡಲಾಗಿದೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ, ಪದವಿ ಶಿಕ್ಷಣ ಸಂರಚನೆ ಹೀಗಿರುತ್ತದೆ. ಮೂರು ವರ್ಷ ವ್ಯಾಸಂಗ ಮಾಡಿದರೆ ಪದವಿ ಮುಗಿಯುತ್ತದೆ. ನಾಲ್ಕು ವರ್ಷ ಓದಿದರೆ ಅದನ್ನು ಡಿಗ್ರಿ ಆನರ್ಸ್ ಎಂದು ಪರಿಗಣಿಸಲಾಗುತ್ತದೆ, ಮತ್ತೂ ಐದು ವರ್ಷ ವ್ಯಾಸಂಗ ಮಾಡಿದರೆ ಸ್ನಾತಕೋತ್ತರ ಪದವಿಯೇ ಪೂರ್ಣಗೊಳಿಸಿದಂತೆ ಆಗುತ್ತದೆ. ಇದು ಪೂರ್ವ ವ್ಯವಸ್ಥೆಯ ಸುಧಾರಣಾ ಕ್ರಮವಷ್ಟೇ ಈ ವಿಷಯ ಇನ್ನು ಕರಡು ತಯಾರಿಕೆ ಹಂತದಲ್ಲಿದೆ. ಈಗಲೇ ಅದರ ಬಗ್ಗೆ ಆತಂಕಪಡುವ ಅಗತ್ಯ ಇಲ್ಲ. ಮುಖ್ಯವಾಗಿ ಪದವಿ ಶಿಕ್ಷಣದಲ್ಲಿ ಎರಡು ವರ್ಷ ಕನ್ನಡ ಬೋಧನೆ ಆಗುತ್ತಿರುವ ಹಾಲಿ ವ್ಯವಸ್ಥೆಯಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ಮಾತೃಭಾಷೆ ಕಲಿಕೆಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸುವ ಬಗ್ಗೆ ಸರಕಾರ ಚಿಂತನೆ ನಡೆಸಿಲ್ಲ . ಶಿಕ್ಷಣದಲ್ಲಿ ಗುಣಮಟ್ಟ ಹಾಗೂ ಜಾಗತಿಕ ದೃಷ್ಟಿ ಇಟ್ಟುಕೊಂಡು ಅತ್ಯಂತ ಪುರಾತನ ಭಾಷೆಯಾದ ಕನ್ನಡದ ಬೋಧನೆ ಮತ್ತು ಕಲಿಕೆಯನ್ನು ಮತ್ತಷ್ಟು ವಿಸ್ತೃತಗೊಳಿಸುವ ಉದ್ದೇಶ ಸರಕಾರಕ್ಕೆ ಇದೆಯೇ ವಿನಾ, ಅದಕ್ಕೆ ಧಕ್ಕೆ ಉಂಟು ಮಾಡುವ ಯಾವುದೇ ಚಿಂತನೆ ಹೊಂದಿಲ್ಲ. ಈ ಬಗ್ಗೆ ಯಾವುದೇ ತಪ್ಪು ಅಭಿಪ್ರಾಯ ಉಂಟಾಗುವುದು ಬೇಡ.


# ಬಡವರ ಶಿಕ್ಷಣಕ್ಕೆ ಬೆಂಕಿ ಇಡುವ ನೀತಿ

**ಸಿದ್ದರಾಮಯ್ಯ**

ಯಾವುದೇ ಚರ್ಚೆ ನಡೆಸದೆ ಆದೇಶ ಹೊರಡಿಸಿರುವುದು ಸರ್ವಾಧಿಕಾರಿ ನಿಲುವು. ದೇಶದ ಒಕ್ಕೂಟ ತತ್ವಕ್ಕೆ ಮಾಡಿರುವ ಅವಮಾನ' ಎಂದು ಆಕ್ರೋಶ ವ್ಯಕ್ತಪಡಿಸಿರುವ ಅವರು, ವಿಸ್ತೃತ ಚರ್ಚೆ ನಡೆಸಿದ ನಂತರ ಅನುಷ್ಠಾನಗೊಳಿಸುವ ಕುರಿತು ತೀರ್ಮಾನಿಸಬೇಕು ಶಿಕ್ಷಣ ತಜ್ಞರು, ಉಪನ್ಯಾಸಕರು, ಹಿರಿಯರು ಮತ್ತು ವಿರೋಧ ಪಕ್ಷಗಳ ಮುಖಂಡರು ಈ ನೀತಿಯನ್ನು ತರಾತುರಿಯಲ್ಲಿ ಹೇರಬೇಡಿ, ಸಂಬಂಧಿಸಿದ ವಲಯಗಳ ಜನರ ಜೊತೆ ಚರ್ಚೆ ನಡೆಸಿ, ಸಾಧಕ ಬಾಧಕಗಳನ್ನು ಪರಿಶೀಲಿಸಿದ ನಂತರ ತೀರ್ಮಾನಿಸಿ ಎಂದು ಹೇಳಿದ್ದೆವು. ಆ ರೀತಿ ಮಾಡದೆ ಈ ಅನಾಹುತಕಾರಿ ನೀತಿಯನ್ನು ಜಾರಿಗೊಳಿಸಿ ಆದೇಶ ಹೊರಡಿಸಲಾಗಿದೆ. ಬಡವರ, ಮಧ್ಯಮ ವರ್ಗದವರ ಗುಣಮಟ್ಟದ ಉನ್ನತ ಶಿಕ್ಷಣ ಪಡೆಯುವ ಕನಸಿಗೆ ನೇರವಾಗಿ ಬೆಂಕಿ ಇಡುವ ಪ್ರಕ್ರಿಯೆಯ ಭಾಗವಾಗಿ ಈ ನೀತಿ ಜಾರಿಗೊಳಿಸಲಾಗುತ್ತಿದೆ ಕನ್ನಡ ಭಾಷಾ ವಿಷಯವನ್ನು ಕೇವಲ ಎರಡು ಸೆಮಿಸ್ಟರ್‌ಗಳಿಗೆ, ಅಂದರೆ ಒಂದು ವರ್ಷ ಕಲಿಸುವುದಾಗಿ ಹಿಂದೆ ಹೇಳಿದ್ದರು. ರಾಜ್ಯದ ವಿವಿಧ ವಲಯಗಳಿಂದ ಪ್ರಬಲ ವಿರೋಧ ಬಂದ ಮೇಲೆಉನ್ನತ ಶಿಕ್ಷಣ ಸಚಿವಡಾ. ಅಶ್ವತ್ಥ ನಾರಾಯಣ ಈ ಸಮಸ್ಯೆ ಸರಿಪಡಿಸುವುದಾಗಿ ಹೇಳಿದ್ದರು. ಆದರೆ, ಹೊರಡಿಸಿರುವ ಆದೇಶದಲ್ಲಿ ಸ್ಪಷ್ಟತೆ ಇಲ್ಲ. ಒಂದು ವರ್ಷಕ್ಕೆ ಸೀಮಿತಗೊಳಿಸುವರೊ ಇಲ್ಲ ಹಿಂದೆ ಇದ್ದಂತೆ ಎರಡು ವರ್ಷಗಳೂ ಕಲಿಸುವರೊ ಅಥವಾ ನಾವು ಒತ್ತಾಯ ಮಾಡಿದಂತೆ ಧಾರವಾಡ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಇರುವಂತೆ ಮೂರೂ ವರ್ಷಗಳಿಗೆ ಕಲಿಸಲಾಗುವುದೊ ಎಂಬ ಬಗ್ಗೆ ಉಲ್ಲೇಖ ಇಲ್ಲ. ಜಗತ್ತಿನ ಯಾವ ದೇಶಗಳಲ್ಲೂ ಇಲ್ಲದ ಕಲಿಕಾ ಕ್ರಮವನ್ನು ಈ ಆದೇಶದಲ್ಲಿ ಪ್ರಸ್ತಾಪಿಸಲಾಗಿದೆ. ಅದರ ಪ್ರಕಾರ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿ ಶೇ 40ರಷ್ಟು ಕ್ರೆಡಿಟ್ಟುಗಳನ್ನು, ಅಂಕಗಳನ್ನು, ಆನ್ ಲೈನ್ ಮೂಲಕ ಕೇಳಿ ಪಡೆಯಬಹುದು. ತರಗತಿಗಳಿಗೆ ಹಾಜರಾಗಬೇಕಾದ ಅಗತ್ಯವಿಲ್ಲ. ಯಾವುದೇ ವಿಶ್ವವಿದ್ಯಾಲಯದಿಂದ ಶೇ 50ರಷ್ಟು ಅಂಕ, ಕ್ರೆಡಿಟ್ಟುಗಳನ್ನು ಪಡೆಯಬೇಕು. ಇದರಿಂದಾಗಿ ಪ್ರಾಕ್ಟಿಕಲ್ ತರಗತಿಗಳನ್ನು ಹೊರತುಪಡಿಸಿ ಉಳಿದಂತೆ ತರಗತಿಗಳಿಗೆ ಹಾಜರಾಗುವ ಅಗತ್ಯವಿಲ್ಲ.



ಈ ನೀತಿಯ ಪ್ರಕಾರ, ವಿಶ್ವವಿದ್ಯಾಲಯಗಳನ್ನು ದೂರ ಶಿಕ್ಷಣ ಕೇಂದ್ರಗಳಂತೆ ಮಾಡಲಾಗುತ್ತಿದೆ. ಅನೇಕ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ವಿದ್ಯಾರ್ಥಿಗಳಿಗೆ ಮಾರಾಟ ಮಾಡುವ, ನಿಧಾನಕ್ಕೆ ಸರ್ಕಾರಿ ವಿವಿಗಳನ್ನು ಮುಚ್ಚಿ ಖಾಸಗಿ ವಿವಿಗಳನ್ನು ಹೆಚ್ಚಿಸಲು, ಖಾಸಗಿಯವರಿಗೆ ವಿಪರೀತ ಹಣ ಮಾಡಲು ಬೇಕಾದ ವೇದಿಕೆಯನ್ನು ನೀತಿಯ ಮೂಲಕ ಸೃಷ್ಟಿಸಿಕೊಡಲು ಕೇಂದ್ರ– ರಾಜ್ಯ ಸರ್ಕಾರ ಹೊರಟಿವೆ. ಗುಣಮಟ್ಟದ ಪ್ರಾಧ್ಯಾಪಕರು ಮತ್ತು ಅತ್ಯಂತ ಪ್ರಾಯೋಗಿಕವಾದ ಹಾಗೂ ಬದುಕಿಗೆ ಹತ್ತಿರವಾದ ಕಲಿಕೆ ಮತ್ತು ಬೋಧನಾ ವಿಧಾನ ಗಳ ಮೂಲಕ ಶಿಕ್ಷಣ ಕೊಡುವ ಕಡೆಗೆ ಯೋಚಿಸುವುದರ ಬದಲಾಗಿ ವಿಶ್ವವಿದ್ಯಾಲಯಗಳನ್ನು ಸರ್ಟಿಫಿಕೇಟ್ ನೀಡುವ ಅಂಗಡಿಗಳಾಗಿ ಮಾಡಲಾಗುತ್ತಿದೆ. ಬಿಜೆಪಿಯು ಉನ್ನತ ಶಿಕ್ಷಣವನ್ನು ಸರಿಪಡಿಸುವ ನೆಪದಲ್ಲಿ ಎಲ್ಲವನ್ನೂ ಧ್ವಂಸ ಮಾಡುತ್ತಿದೆ. ಖಾಸಗಿ ಬಂಡವಾಳಿಗರು ಶಿಕ್ಷಣದ ದಿಕ್ಕು ದೆಸೆಗಳನ್ನು ನಿರ್ಧರಿಸುವ ಹೊಲಸು ಕ್ರಮವನ್ನು ಪರಿಚಯಿಸಲಾಗುತ್ತಿದೆ. ಇದು ಸ್ಪಷ್ಟವಾಗಿ ಜನವಿರೋಧಿ ಕ್ರಮ. ದೇಶದ್ರೋಹವೆಂದರೆ ಜನದ್ರೋಹವೆ.



# ಸಿನಿಮಾ ಮಂದಿಯ ನಿರ್ಲಕ್ಷ್ಯಕ್ಕೆ ಇನ್ನೆಷ್ಟು ಬಲಿ?



● ಪರಶಿವ ಧನಗೂರು

ಕನ್ನಡ ಸಿನಿಮಾ ಮಂದಿಗೆ ಬುದ್ಧಿ ಬರುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಸರ್ಕಾರ ಮಧ್ಯೆ ಪ್ರವೇಶಿಸಿ ಚಿತ್ರೀಕರಣದ ವೇಳೆಯಲ್ಲಿ ಕಲಾವಿದರ ರಕ್ಷಣೆಗೆ ಸರಿಯಾದ ನೀತಿ ನಿಯಮ ಜಾರಿಮಾಡಿ ಎಚ್ಚರಿಸದಿದ್ದರೆ ಇನ್ನೆಷ್ಟು ಜೀವಗಳನ್ನು ಬಲಿಪಡೆಯುತ್ತಾರೋ ಈ ಬಣ್ಣದಜನ ಎನ್ನುತ್ತಿದ್ದಾರೆ ಕರ್ನಾಟಕದ ಜನ. ಕೆದಕುತ್ತಾ ಹೋದರೆ ಕನ್ನಡ ಸಿನಿಮಾ ರಂಗದಲ್ಲಿ ಶೂಟಿಂಗ್ ದುರಂತಗಳ ಕತೆ ಸಾಲು ಸಾಲೇ ಇವೆ! ಮೊದಲಿಗೆ 25 ವರ್ಷಗಳ ಹಿಂದೆ ಸದ್ದು ಮಾಡಿದ್ದು ಲಾಕಪ್ ಡೆತ್ ಸಿನಿಮಾದ ಬೈಕ್ ಜಂಪ್ ದುರಂತ. ಅಂದಿನ ಕಾಲಕ್ಕೆ ಅದೇ ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಸೆನ್ಸೇಷನ್ ಸಿನಿಮಾ ಆಕ್ಸಿಡೆಂಟ್!! ಚೇಸಿಂಗೂ, ಪೈಟಿಂಗೂ, ಬಿಲ್ಡಿಂಗೂ ಬಸ್ಸುಗಳಮೇಲೆಲ್ಲಾ ಸಾಹಸ ಕಲಾವಿದ ಕುಳಿತಬೈಕ್ ಹಾರಿಸಿ, ಸರಿಯಾದ ಮುನ್ನೆಚ್ಚರಿಕೆ ವಹಿಸದೆ ಸಾಹಸ ಕಲಾವಿದರು ಕೈಕಾಲು ಮುರಿದುಕೊಂಡು ಹಾಸಿಗೆ ಹಿಡಿದು ಅಂಗವಿಕಲರಾಗಿದ್ದು ಇತಿಹಾಸ!

ಆಗ ರಾಜ್ಯದ ಮೂಲೆಯಲ್ಲೂ ಥ್ರಿಲ್ಲರ್ ಮಂಜು ಎಂಬ ಸಾಹಸ ನಿರ್ದೇಶಕನ ಹೆಸರು ಪಸರಿಸಿತ್ತು. ಇದೇ ಆಕ್ಸಿಡೆಂಟ್ ಥ್ರಿಲ್ಲರ್ ಮಂಜು ರವರನ್ನು ಕನ್ನಡ ಸಿನಿಮಾ ಇಂಡಸ್ಟ್ರಿಯಲ್ಲಿ 30ವರ್ಷ ಕೈಹಿಡಿದು ಮೇಲೆತ್ತಿ ನಡೆಸಿ, ನಿರ್ದೇಶಕ, ನಿರ್ಮಾಪಕ, ನಾಯಕ ನಟನನ್ನಾಗಿಸಿ ಉಳಿಸಿದೆ! ಅದೇ ರೀತಿ 1999ರಲ್ಲಿ ಟಿಕೆಟ್ ಟಿಕೆಟ್ ಎಂಬ ಹೆಸರಿನ ಚಿತ್ರದ ಸಾಹಸ ದ್ರಶ್ಯಕ್ಕಾಗಿ ಬಾಂಬ್ ತಯಾರಿಸುತ್ತಿದ್ದಾಗ ಬಾಂಬ್ ಸಿಡಿದು ಬಾಂಬ್ ರವಿ ಜೀವ ಕಳೆದುಕೊಂಡ. ಆಗ ಆ ದುರ್ಘಟನೆ ಕನ್ನಡ ಸಿನಿಮಾ ರಂಗದಲ್ಲಿ ದೊಡ್ಡ ಸಂಚಲನವನ್ನು ಸೃಷ್ಟಿಸಿ ವಿವಾದ ಹಾಗೆಯೇ ತಣ್ಣಗಾಗಿತ್ತು. 1997ರಲ್ಲಿ ಸಿಂಹದ ಮರಿ ಚಿತ್ರೀಕರಣದಲ್ಲಿ ಕ್ಯಾಮೆರಾ ಆಪರೇಟರ್ ವಿಜಿ ಪ್ರಾಣ ಕಳೆದುಕೊಂಡಿದ್ದರು. 2000ಇಸವಿಯಲ್ಲಿ ರೌಡಿ ಅಳಿಯ ಚಿತ್ರದ ಚಿತ್ರೀಕರಣದ ವೇಳೆಯಲ್ಲಿ ಸಾಹಸ ಕಲಾವಿದ ಡಿಫರೆಂಟ್ ಡ್ಯಾನಿಗೆ ಅಪಘಾತವಾಗಿ ಪ್ರಾಣಾಪಾಯದಿಂದ ಪಾರಾಗಿದ್ದೇ ಹೆಚ್ಚು. ಫ್ಯಾನ್ ಇಂಡಿಯಾ ಸಿನಿಮಾ ಕೆ.ಜಿ.ಎಫ್. ನಲ್ಲಿ ಹಾಕಿದ್ದ ಶೆಟ್ ಕಳಚಿಕೊಂಡು ಬಿದ್ದು ಸುಮಾರು ಜನರು ದುರಂತದಿಂದ ಪಾರಾಗಿದ್ದು ಆಗಿದೆ.

2014 ರಲ್ಲಿ ಚಿರಂಜೀವಿ ಸರ್ಜಾ ಮತ್ತು ಆ ದಿನಗಳು ಚೇತನ್ ಅಭಿನಯಿಸುತ್ತಿರುವ ರಣಂ ಸಿನಿಮಾ ಚಿತ್ರೀಕರಣದ ವೇಳೆ ಸಿಲಿಂಡರ್ ಸ್ಫೋಟಗೊಂಡು ಇಬ್ಬರು ಸಾವನ್ನಪ್ಪಿದ್ದರು. ಚಿತ್ರದ ಸಾಹಸ ದೃಶ್ಯ ಚಿತ್ರೀಕರಣ ಮಾಡುವ ವೇಳೆ ಸ್ಫೋಟ ಆದ ಪರಿಣಾಮ ಚಿತ್ರೀಕರಣ ನೋಡಲು ಬಂದ ಸುಮೈರಾ ಮತ್ತು ಆಯಿಶಾ ಎನ್ನುವ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದರು. ಕಾರು ಬ್ಲಾಸ್ಟ್ ಮಾಡುವ ದೃಶ್ಯದ ಚಿತ್ರೀಕರಣ ನಡೆಯುತ್ತಿತ್ತು. ಆಗ ನಡೆದ ದುರ್ಘಟನೆಯಲ್ಲಿ ಇಬ್ಬರು ಪ್ರಾಣ ಚೆಲ್ಲಿದ್ದರು.

ಹಾಗೆಯೇ ಬಹುಮುಖ್ಯವಾಗಿ 2016ರಲ್ಲಿ ಬೆಂಗಳೂರಿನ ಹೊರವಲಯದ ಮಾಗಡಿ ಬಳಿಯ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹೆಲಿಕಾಪ್ಟರ್ ಮೇಲಿಂದ ಜಿಗಿದು ಖ್ಯಾತ ಖಳನಟರಾಗಿದ್ದ ಅನಿಲ್




ಮತ್ತು ಉದಯ್ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ, ದುನಿಯಾ ವಿಜಯ್ ಅಭಿನಯದ ಮಾಸ್ತಿಗುಡಿ ಚಲನಚಿತ್ರದ ಆ ಚಿತ್ರೀಕರಣದಲ್ಲಿ ಸಿನಿಮಾ ಹೀರೋ ದುನಿಯಾ ವಿಜಯ್ ರನ್ನು ಮಾತ್ರ ಸ್ಟಂಟ್ ಡೈರೆಕ್ಟರ್ ರವಿವರ್ಮ ಕಾಪಾಡಿ ಪ್ರಾಣ ಉಳಿಸಿದ್ದು ಕಣ್ಮುಂದೆ ಇರುವಂತೆಯೇ ಈಗ ಯುವ ಸಾಹಸ ಕಲಾವಿದ ಫೈಟರ್ ವಿವೇಕ್ ಬಲಿಯಾಗಿದೆ.

## ದುರುಂತ ನಡೆದಿದ್ದು ಹೇಗೆ?

ಲವ್ ಯೂ ರಚ್ಚು ಚಿತ್ರದ ಚಿತ್ರೀಕರಣದ ಈ ಕ್ರೇನ್ ದುರಂತ, ಫೈಟರ್ ಕಲಾವಿದ ವಿವೇಕ್ ಸಾವು ಚಿತ್ರತಂಡದ ಬೇಜವಾಬ್ದಾರಿತನದ ಅಜ್ಞಾನದ ಪರಮಾವಧಿಯಾಗಿದೆ. ಎಕ್ಸ್ ಟ್ರಾ ಹೈಟೆನ್ಷನ್ ವೈರುಗಳು ಹಾದು ಹೋಗಿರುವ ಸ್ಥಳದಲ್ಲಿ ಯಾವ ಅಯೋಗ್ಯನೂ ಚಿತ್ರೀಕರಣದ ಪ್ಲಾನ್ ಮಾಡಲಾರ. ಆದರೇ ಈ ಚಿತ್ರ ತಂಡ ನಾಲ್ಕು ದಿನಗಳಿಂದಲೂ ಅಲ್ಲೇ ಭರದಿಂದ ಚಿತ್ರೀಕರಣ ನಡೆಸಿದೆ! ರಾಮನಗರದ ಪೊಲೀಸ್ ಇಲಾಖೆಯಿಂದ ಅನುಮತಿಯನ್ನೇ ಪಡೆಯದೆ ಇದ್ದುದರಿಂದ ಇನ್ನೂ ಇವರು ಆಡಿದ್ದೇ ಆಟವೆನ್ನುವಂತಾಗಿದೆ. ಮುಖ್ಯವಾಗಿ ಇಲ್ಲಿ ಎಚ್ಚರ ವಹಿಸಬೇಕಾಗಿದ್ದುದ್ದು ಸಾಹಸ ಸಂಯೋಜಿಸುವ ಮುನ್ನ ಸಾಕಷ್ಟು ಮುನ್ನೆಚ್ಚರಿಕೆ ಅದಕ್ಕೆ ಬೇಕಾಗುವ ರಕ್ಷಣಾ ಪರಿಕರಗಳ ಪೂರ್ವ ತಯಾರಿಯನ್ನು ನಿರ್ದೇಶಕರು ಮಾಡಿಕೊಳ್ಳಬೇಕಿತ್ತು. ಮೊದಲನೆಯದಾಗಿ ಚಿತ್ರೀಕರಣ ಮಾಡಲು ಹೈಟೆನ್ಷನ್ ವಿದ್ಯುತ್ ತಂತಿ ಹಾದು ಹೋಗಿರುವ ಜಾಗವನ್ನು ಆಯ್ಕೆಮಾಡಿಕೊಂಡಿರುವುದೇ ದೊಡ್ಡ ತಪ್ಪು. ಸಾಮಾನ್ಯವಾಗಿ ಅಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿ ಗಳಲ್ಲಿ 60ಕಿಲೋ ವ್ಯಾಟ್ ವಿದ್ಯುತ್ ನಿಂದ 440ಕಿಲೋ ವಾಟ್ ವರೆಗೂ ವಿದ್ಯುತ್ ಹರಿಯುತ್ತಿರುತ್ತದೆ. ಇಂತಹ ಎಕ್ಸ್ ಟ್ರಾ ಹೈಟೆನ್ಷನ್ ವಿದ್ಯುತ್ ತಂತಿ ಹಾದು ಹೋಗಿರುವ ಸ್ಥಳದ ವೈರುಗಳ ಕೆಳಗೆ ಯಾರೂ ವಾಸಿಸಬಾರದೆಂದೂ ಕಾನೂನೇ ಜಾರಿಯಲ್ಲಿದೆ! ಈ ಡೇಂಜರಸ್ ಹೈವೋಲ್ಟೇಜ್ ವಿದ್ಯುತ್ ತಂತಿ ಹರಿಯುವ ವೈರುಗಳ ಪಕ್ಕದ 2.3 ಮೀಟರ್ ಪರಿಧಿಯನ್ನು ಆರ್ಕ್ ಝೋನ್ ಎಂದು



ಗುರುತಿಸಲಾಗಿರುತ್ತದೆ. ಈ ಡೇಂಜರಸ್ ಝೋನ್ ಒಳಗೇ ಮನುಷ್ಯ ಬಂದರೆ ಸಾಕು, ವಿದ್ಯುತ್ ತಂತಿ ಸ್ಪರ್ಶಿಸುವ ಅವಶ್ಯಕತೆಯೇ ಬೇಕಾಗಿಲ್ಲ ಮನುಷ್ಯ ನಿಗೆ ವಿದ್ಯುತ್ ಪ್ರವಹಿಸಿ ಸಾವನ್ನಪ್ಪುತ್ತಾನೆ! ಕೇವಲ ನಮ್ಮ ಮನೆಗಳಲ್ಲಿರುವ 440 ವೋಲ್ಟೇಜ್ ವಿದ್ಯುತ್ ತಗುಲಿದರೇ ಮನುಷ್ಯ ಸಾಯುತ್ತಾನೆ. ಇನ್ನೂ 66ಕಿಲೋ ವ್ಯಾಟ್ 220 ಕಿಲೋ ವ್ಯಾಟ್ 400ಕಿಲೋ ವ್ಯಾಟ್ ಹೊತ್ತು ಸಾಗುತ್ತಿರುವ ಎಕ್ಸ್ ಟ್ರಾ ಹೈಟೆನ್ಷನ್ ವೈರುಗಳಿಗೆ ಈ ವಿವೇಕ್ ಗೆ ಕಟ್ಟಿದ್ದ ಉಕ್ಕಿನ ವೈರು(ಮೆಟಲ್ ರೋಪ್)ಗಳ ತಂತಿಯಾಗಲೀ, ಕ್ರೇನ್ ಆಗಲೀ ತಗುಲಿದ್ದರೇ ರಕ್ತಹರಿಯುವ ವ್ಯಕ್ತಿಯ ಜೀವದಗತಿ ಏನಾಗಿರಬಹುದೆಂದೂ ನೀವೇ ಊಹಿಸಿಕೊಳ್ಳಿ. ತೆಂಗಿನ ತೋಟದ ಓನರ್ ಪುಟ್ಟರಾಜುಗಾಗಲೀ ಕ್ರೇನ್ ಡ್ರೈವರ್ ಮುನಿಯಪ್ಪ ಎಂಬವನಿಗಾಗಲೀ ಬುದ್ಧಿ ಇರದಿರಬಹುದು. ಲವ್ ಯೂ ರಚ್ಚು ಸಿನಿಮಾದ ನಿರ್ದೇಶಕ ಶಂಕರ್ ರಾಜ್, ಸ್ಟಂಟ್ ಡೈರೆಕ್ಟರ್ ವಿನೋದ್ ಮಾಸ್ಟರ್ ಗಾಗಲೀ ತಲೆಯಲ್ಲಿ ಲದ್ದಿ ತುಂಬಿಕೊಂಡಿತ್ತೇ? ಕೇವಲ ವ್ಯಕ್ತಿಯ ದೇಹಕ್ಕೆ ರೋಪ್ ಕಟ್ಟಿ ಕ್ರೇನ್ ನಿಂದ ಮೇಲಕ್ಕೆತ್ತಿ ಬೀಳಿಸುವುದನ್ನೇ ಫೈಟ್ ಕಂಪೋಸಿಂಗ್ ಎಂದುಕೊಂಡಿರುವ ಇಂದಿನ ಕೆಲವು ಸಿನಿಮಾ ಸ್ಟಂಟ್ ಡೈರೆಕ್ಟರ್ ಗಳಿಗೆ ಫೈಟ್ ಸೀನ್ ಗಳಲ್ಲಿ ರಿಸ್ಕ್ ಶಾಟ್ ಗಳನ್ನು ತೆಗೆಯುವಾಗ ಯಾವರೀತಿಯ ರಕ್ಷಣಾ ಕ್ರಮಗಳ ಮುನ್ನೆಚ್ಚರಿಕೆ ಕೈಗೊಳ್ಳಬೇಕೆಂಬ ಜವಾಬ್ದಾರಿ ಮರೆತು ಹೋದಂತಿದೇ. ಪ್ರೊಡೆಕ್ಷನ್ ಮ್ಯಾನೇಜರ್ ಕೈಗೆ ದುಡ್ಡು ಕೊಟ್ಟು ಮತ್ತೆಲ್ಲೊ ಕುಳಿತು ತಮ್ಮ ಸಿನಿಮಾ ಚಿತ್ರೀಕರಣದಲ್ಲಿ ಪ್ರತಿದಿನ ಏನೇನಾಗುತ್ತಿದೆ ಎಂಬುದನ್ನು ಗಮನಿಸದ ನಿರ್ಮಾಪಕರು ಇದ್ದಾರೆ! ಕೇವಲ ಹತ್ತು ನಿಮಿಷದ ಶಾರ್ಟ್ ಮೂವೀ ತೆಗೆಯುವವರೇ ಚಿತ್ರೀಕರಣದ ಬಗ್ಗೆ ಕಾಳಜಿಯಿಂದ ಕೇರ್ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ.



ಹೀಗಿರುವಾಗ ಈ ನಮ್ಮ ಕನ್ನಡ ಸಿನಿಮಾ ರಂಗದ ಜನರಿಗೆ ಏನಾಗಿದೆ? ಇವರು ಪಕ್ಕಾ ಪ್ರೊಫೆಷನಲ್ ಆಗಿರುವಾಗ ಹೇಗಿರಬೇಕಿತ್ತೇಳಿ ಇವರ ಚುರುಕುತನ, ಪ್ರಜ್ಞೆ ಜವಾಬ್ದಾರಿ. ಮನುಷ್ಯನ ಜೀವಕ್ಕೆ ಬೆಲೆಯೇ ಇಲ್ಲವೇನೋ ಎಂಬಂತೆ ಪಾಪದ ಅಮಾಯಕ ಕಲಾವಿದರನ್ನು ಕಾಸಿನಾಸೆ ತೋರಿಸಿ ಕರೆತಂದು ಬೇಜವಾಬ್ದಾರಿಗೆ ಬಲಿ ಕೊಡುತ್ತಿದ್ದಾರೆ! ಸತ್ತ ಕಲಾವಿದನ ಕುಟುಂಬಕ್ಕೆ ಯಾರು ದಿಕ್ಕು?

## ಫೈಟರ್ ಗಳೆಂಬ ಗಾಣದೆತ್ತುಗಳ ಸಾವಿನ ಮೇಲಿನ ನಡಿಗೆ..!

ಬೆಳ್ಳಿ ಪರದೆಯ ಬಣ್ಣದ ಬದುಕಿನ ವ್ಯಾಮೋಹ ಎಷ್ಟೋ ಸ್ಟಂಟ್ ಕಲಾವಿದರ, ಫೈಟರ್ ಎನಿಸಿಕೊಂಡವರ ಬದುಕನ್ನು ಬಲಿಹಾಕಿದೆ. ಯಾವುದೇ ದೃಶ್ಯದ ಚಿತ್ರೀಕರಣವೇ ಆಗಲಿ ಸಿನಿಮಾ ಹೀರೋ ಹೀರೋಯಿನ್ ಗಳ ಮೇಲೆ ಇಡುವಷ್ಟು ಕಾಳಜಿಯನ್ನು ಚಿತ್ರ ನಿರ್ದೇಶಕರು ಫೈಟರ್ ಗಳ ಮೇಲಾಗಲೀ ಇತರ ಸಹ ಕಲಾವಿದರ ಮೇಲೂ ತೋರಿಸುವುದಿಲ್ಲ. ಒಬ್ಬ ಹೀರೋ ಶೂಟಿಂಗ್ ಸ್ಪಾಟಿಗೆ ಬರುತ್ತಿದ್ದಂತೆಯೇ ತಲೆ ಮೇಲೊಂದು ನೆರಳಿಗೆ ಚತ್ರಿಯಿಂದಿಡಿದು, ಊಟ ತಿಂಡಿ ತೀರ್ಥ ಪ್ರಸಾದದ ವರೆಗೂ ಸೇವೆ ಮಾಡುತ್ತಾ ಅತ್ಯಂತ ಕಾಳಜಿ–ಜವಾಬ್ದಾರಿಯಿಂದ ನೋಡಿಕೊಳ್ಳುವ ಸಿನಿಮಾ ನಿರ್ದೇಶಕರು, ನಿರ್ಮಾಪಕರು ಅದೇ ರೀತಿಯ ಗೌರವ ಪ್ರೀತಿ ಕಾಳಜಿಗಳನ್ನು ಸಿನಿಮಾದ ಇನ್ನುಳಿದ ಕಲಾವಿದರಿಗೆ ತೋರುವುದಿಲ್ಲ! ಕೆಲವೊಮ್ಮೆ ಕೆಲಸ ಮಾಡಿಸಿಕೊಂಡು ಕಾಲಕಸಕ್ಕಿಂತಲೂ ಕಡೆಯಾಗಿ ಕಂಡಿರುವ ಉದಾಹರಣೆಗಳು ಸಾಕಷ್ಟಿವೆ. ಕೇವಲ ಎರಡು ಹೊತ್ತಿನ ಊಟ 800 ರೂಪಾಯಿ ದುಡ್ಡಿಗಾಗಿ ತಮ್ಮ ಜೀವದ ಹಂಗು ತೊರೆದು ಫೈಟರ್ ಆಗಿ ನಟನೆಯ ಕೆಲಸ ಮಾಡುತ್ತಿರುವ ಸಾಹಸ ಕಲಾವಿದರು ಎಷ್ಟೋ ಸಾರಿ ಬಿಸಿಲು ಮಳೆ ಚಳಿಗಾಳಿ ಎನ್ನದೆ ಹಗಲು ರಾತ್ರಿ ಸಿನಿಮಾ ಚಿತ್ರೀಕರಣದಲ್ಲಿ ತೊಡಗಿಸಿಕೊಂಡು ಹೊಡೆದಾಟದ ದ್ರಶ್ಯ, ಚೇಸಿಂಗ್ ದೃಶ್ಯ ಗಳಲ್ಲಿಯೂ, ಉರಿವ ಬೆಂಕಿಯೊಡನೆ ನಟಿಸುವಾಗ, ಬಿಲ್ಡಿಂಗ್ ಗಳ ಮೇಲಿಂದ ಎಗರಿ ಬೀಳುವಾಗ, ಗಾಜಿನ ಗ್ಲಾಸುಗಳನ್ನು ಹೊಡೆದು ಧೈರ್ಯದಿಂದ ನುಗ್ಗುವಾಗ ದೃಶ್ಯಗಳು ನೈಜವಾಗಿ ಬರುವುದಕ್ಕಾಗಿಯೇ ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಸಾವುನೋವಿಗೆ ಹೆದರದೇ ಮೈ–ಕೈ ತಲೆಗೆ ಗಾಯ ಮಾಡಿಕೊಂಡು ಒಮ್ಮೊಮ್ಮೆ ಕೈಕಾಲಿನ ಬೆನ್ನುಮೂಳೆ ಮುರಿದುಕೊಂಡು ಚಿತ್ರೀಕರಣದಲ್ಲಿ ನಟಿಸಿರುವ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ವೇಗವಾಗಿ ಬೈಕ್ ಸವಾರಿ ಮಾಡುತ್ತಾ ರಸ್ತೆಯಲ್ಲಿ ಬೀಳುವುದು, ಬೈಕ್ ಹಾರಿಸುವುದು. ಕಾರನ್ನು ವೇಗವಾಗಿ ಗುದ್ದಿಸುವುದು, ವೇಗವಾಗಿ ಕುದುರೆ ಏರಿ ಬರುತ್ತಾ ಹಾರಿಬೀಳುವುದು, ಆಕಾಶದಲ್ಲಿ ಹಾರಾಡುತ್ತಾ ಪ್ಯಾರಾ ಗ್ಲೈಡರ್ ಗಳಿಂದಲೋ, ಹೆಲಿಕಾಪ್ಟರ್ ಗಳಿಂದಲೋ ಸಮುದ್ರಕ್ಕೆ–ನದಿಗೇ ನೇರವಾಗಿ ದುಮುಕುವುದು ಮುಂತಾದ ಲೈಫ್ ರಿಸ್ಕ್ ಶಾಟ್ ಗಳಲ್ಲಿ ಇದೇ ಫೈಟರ್ ಗಳು ಹೀರೋಗಳೆನಿಸಿಕೊಂಡವರಿಗೇ ನಕಲಿ ಹೀರೋಗಳಾಗಿ ಡ್ಯೂಪ್ ಗಳಾಗಿ ನಟಿಸಿ ಪರದೆ ಮೇಲೆ ಹೀರೋ ಪಾತ್ರದಾರಿಗೆ ಶಿಳ್ಳೆ ಚಪ್ಪಾಳೆ ಸಿಗುವಂತೆ ಮಾಡಿ ಎಲ್ಲೋ ಮರೆಯಲ್ಲಿರುತ್ತಾರೆ! ಕನ್ನಡ ಸಿನಿಮಾ ರಂಗದಲ್ಲಿ ಟೈಗರ್ ಎನಿಸಿಕೊಂಡೇ ಮೆರೆದ ಅಪರೂಪದ ಫೈಟರ್ ಸಾಹಸ ಕಲಾವಿದ ಪ್ರಭಾಕರ್ ರಂತವರಿಗೆ ಮಾತ್ರ ಹೀರೋ ಆಗಿ ಮೆರೆಯುವ ಅವಕಾಶ ಕೆಲವೊಮ್ಮೆ ಬಂದಿರುತ್ತದೆ. ಉಳಿದವರು ಖಳನಾಯಕರಾಗಿಯೇ ಹೊಟ್ಟೆ ಹೊರೆದುಕೊಳ್ಳಬೇಕಾಗುತ್ತದೆ.ಅಅಭಿಮಾನಿಗಳಿಂದ ನಮ್ಮ ಹೀರೋ ಗಳು ಬಾಸ್, ಕಿಂಗು, ಸೈ ಎನಿಸಿಕೊಳ್ಳುವಲ್ಲಿ ಇದೇ ಫೈಟರ್ ಗಳ ರಕ್ತ ಬೆವರಿನ ಶ್ರಮ ಸಾಕಷ್ಟಿರುತ್ತದೆ. ಹೀರೋ ಕೈಯಲ್ಲಿ ಒದೆ ತಿಂದಂತೆ ನೆಲದಲ್ಲಿ ಬಿದ್ದು ನೆಗೆದು ಹೊರಳಾಡಿ, ಮಣ್ಣು ಕಲ್ಲು ಕೆಸರು ನೋಡದೆ ಸಾಹಸ ನಿರ್ದೇಶಕರ ಅಣತಿಯಂತೆ ನಟಿಸಿ ಆ ದ್ರಶ್ಯ ಅದ್ದೂರಿಯಾಗಿ ಬರವಲ್ಲಿ ಫೈಟರ್ ಸಾಹಸ ಕಲಾವಿದರ ಪರಿಶ್ರಮ ಪರದೆಮೇಲೆಯೇ ಕಾಣಸಿಗುತ್ತದೆ. ಆದರೆ ಸಿನಿಮಾ ರಿಲೀಸ್ ಆದ ತಕ್ಷಣ ಸಹಜವಾಗಿ ಯಾರ್ಯಾರಿಗೋ ರಾತ್ರೋರಾತ್ರಿ ಸ್ಟಾರ್ ಪಟ್ಟ ಬಂದುಬಿಡುತ್ತದೆ ,

ಇಡೀ ಸಿನಿಮಾ ಅಧ್ಬುತವಾಗಿ ಬರುವುದಕ್ಕಾಗಿಯೇ ಎಲ್ಲರೂ ಒಟ್ಟಾಗಿ ತಂಡದಂತೆ ಒಗ್ಗಟ್ಟಾಗಿ ಕೆಲಸಮಾಡಿದ್ದರೂ ಎಲ್ಲರನ್ನೂ ಕರೆದು ಗೌರವಿಸಿ, ಸನ್ಮಾನಿಸುವ ಕೆಲಸವನ್ನು ಯಾರು ಅಷ್ಟಾಗಿ ಮಾಡಲು ಹೋಗುವುದಿಲ್ಲ. ಸಿನಿಮಾ ಫೈಟ್ ಸೀನ್ ಗಳಲ್ಲಿ ಎಗರಿ ಎಗರಿ ಬೀಳುತ್ತಾ ಕಿರುಚಾಡಿ ಕೊಂಡು ಒದೆ ತಿನ್ನುವಂತೆ

# ವಿಜಯನಗರ ಕಾಲದ ಅಣೆಕಟ್ಟೆಗಳು ಮತ್ತು ಪರಿಸರಸ್ನೇಹಿ ತಂತ್ರಜ್ಞಾನವೂ...



ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ



ನಮ್ಮ ಹಳ್ಳಿಗಳಲ್ಲಿ ಒಂದು ನಾಣ್ಣುಡಿ ಸಾಮಾನ್ಯವಾಗಿದೆ. ಅದೆಂದರೆ "ಧರ್ಮದ ಊರಿನ ಮುಂದೆ ಮಳೆ ಬಂದರೆ, ಕರ್ಮದ ಊರಿನ ಮುಂದೆ ಹಳ್ಳ ಹರಿಯಿತು" ಎಂಬುದು. ಕಳೆದ ಇಪ್ಪತ್ತೆಂಟು ವರ್ಷಗಳ ನನ್ನ ಅನುಭವದಲ್ಲಿ 2009ನ್ನು ಹೊರತುಪಡಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿ ಮಳೆ ಸುರಿದದ್ದು ತೀರ ಅಪರೂಪವೇ. ಆದರೆ ಇಲ್ಲಿನ ತುಂಗಭದ್ರೆ ಮಾತ್ರ ಪ್ರತಿವರ್ಷವೂ ಮೈದುಂಬಿ ಹರಿದು ತನ್ನ ಕಬಂದಬಾಹುಗಳಿಂದ ಪ್ರವಾಹವನ್ನು ನಿರಂತರವಾಗಿ ಸೃಷ್ಟಿಸುತ್ತಾ ಬಂದಿದ್ದಾಳೆ. ಬಿಸಿಲ ಬೇಗೆ ಮತ್ತು ಬರದ ಛಾಯೆಯನ್ನು ಹೊತ್ತೇ ಮುನ್ನಡೆಯುತ್ತಿರುವ ಪ್ರದೇಶ ಬಳ್ಳಾರಿ ಜಿಲ್ಲೆಯದು. ಇದಕ್ಕೆ ಕೊಪ್ಪಳ, ರಾಯಚೂರು ಜಿಲ್ಲೆಗಳೂ ಹೊರತಾಗಿಲ್ಲ. ಮಲೆನಾಡಿನ ಸಹ್ಯಾದ್ರಿ ಬೆಟ್ಟಶ್ರೇಣಿಗಳಲ್ಲಿ ಎಡೆಬಿಡದೆ ಸುರಿಯುವ ಮಳೆಯ ನೀರನ್ನು ಹೊತ್ತು ರಮ್ಯರಮಣೀಯವಾಗಿ ಹರಿದುಬರುವ ತುಂಗಭದ್ರಾ ನದಿ ಈ ಜಿಲ್ಲೆಗಳಿಗೆ ವರದಾನವೇ ಸರಿ. ಇದು ಒಂದು ಬಗೆಯಲ್ಲಿ ಈಜಿಪ್ಟಿನ ನೈಲ್ ನದಿಯಂತೆ, ಮರಳುಗಾಡಿನ ಓಯಸಿಸ್ ಎಂಬಂತೆ ಈ ಭಾಗದ ಜೀವಜಲವಾಗಿದೆ. ಮಳೆಗಾಲದಲ್ಲಂತೂ ತುಂಗಭದ್ರೆಯು ಹಂಪೆ ಪರಿಸರದ ಬೆಟ್ಟಗುಡ್ಡ, ಕಲ್ಲುಬಂಡೆಗಳನ್ನು ಸೀಳಿ ಹರಿಯುವ ಆ ನೋಟ ನೋಡಲು ಚಂದ ಮತ್ತು ಮಹದಾನಂದ. ಇದನ್ನು ಪಂಪಾ, ಹಂಪಿಹೊಳೆ, ತುಂಗಭದ್ರೆ ಎಂದೆಲ್ಲಾ ಕರೆಯಲಾಗಿದೆ. ಈ ನದಿ ಹರಿಯುವುದು ಈ ಮೇಲೆ ಹೇಳಿದ ಬಿಸಿಲನಾಡಿನಲ್ಲಿ ಆಗಿರುವುದರಿಂದ ಮೇಲಿನ ನಾಣ್ಣುಡಿ ಸರಿಹೊಂದುತ್ತದೆ. ಬಿಸಿಲ ನಾಡಿನಲ್ಲಿ ಹರಿಯುವ ಈ ನದಿಯ ನೀರನ್ನು ಪ್ರಾಚೀನ ಕಾಲದಿಂದಲೂ ವಿವಿಧ ವಿಧಾನಗಳನ್ನು ಅಳವಡಿಸಿಕೊಂಡು ಬಳಸಿಕೊಳ್ಳುವ ಪ್ರಯತ್ನವನ್ನು ನಮ್ಮ ಪೂರ್ವಜರು ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದರು. ಅದು ಇಂದು ಎಷ್ಟರಮಟ್ಟಿಗೆ ಎಂದರೆ ತುಂಗಭದ್ರಾ ಮಧ್ಯಕರ್ನಾಟಕದ ಜನರ ಬಹುಮುಖ್ಯ ಜೀವಸೆಲೆಗಳಲ್ಲಿ ಒಂದಾಗಿ ಬೆರೆತುಹೋಗಿದೆ. ಅಷ್ಟೇ ಅಲ್ಲ, ಅದು ದಕ್ಷಿಣ ಭಾರತದಲ್ಲೇ ದೊಡ್ಡ ಸಾಮ್ರಾಜ್ಯವೊಂದರ ಆಶ್ರಯ ತಾಣವಾಗಿದ್ದುದು ಗಮನಾರ್ಹ. ವಿಜಯನಗರವೆಂಬ ವಿಶಾಲ ಸಾಮ್ರಾಜ್ಯದ ರಾಜಧಾನಿಗೆ ಜೀವಸೆಲೆಯಾದ್ದದ್ದು ಈ ತುಂಗಭದ್ರಾ ನದಿಯೇ ಆಗಿದೆ. ಸುಮಾರು 250 ವರ್ಷಗಳ ಸುದೀರ್ಘ ಆಳ್ವಿಕೆಗೆ ಜೀವಜಲವಾಗಿ ಹಂಪೆ-ವಿಜಯನಗರ ರಾಜಧಾನಿ ಮತ್ತು ಅದರ ಸರ್ವತೋಮುಖ ಬೆಳವಣಿಗೆಗೆ, ಅಲ್ಲಿನ ಪರಿಸರಕ್ಕೆ ಜೀವಂತಿಕೆಯನ್ನು ಮೈದುಂಬಿದುದು ಈ ನದಿಯೆಂದರೆ ಅತಿಶಯೋಕ್ತಿಯೇನಲ್ಲ. ವಿಜಯನಗರದ ರಾಜಧಾನಿಯಾದ ಬಳಿಕ ಹಂಪೆ ಪರಿಸರವು ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಸಾಕ್ಷಿಯಾಯಿತು. ನಗರವು ಸುಮಾರು 25 ಚ.ಕಿ.ಮೀ. ವಿಸ್ತಾರವಾಗಿ ಬೆಳೆಯಲು ತುಂಗಭದ್ರಾ ನದಿಪರಿಸರವೇ ಕಾರಣ. ಇಂದಿನ ಶಿವಮೊಗ್ಗ, ಹರಿಹರ, ದಾವಣಗೆರೆ, ಹೊಸಪೇಟೆ, ಬಳ್ಳಾರಿ, ಕೊಪ್ಪಳ, ರಾಯಚೂರು ಮುಂತಾದ ನಗರಗಳು ವಿಸ್ತಾರಗೊಂಡಿರುವುದಕ್ಕೆ ಈ ನದಿಯೇ ಮುಖ್ಯ ಆಧಾರವಾಗಿದೆ.

ವಿಜಯನಗರ ಕಾಲದಲ್ಲಿ ಮಳೆನೀರನ್ನು, ನದಿ-ಹಳ್ಳ-ಕೊಳ್ಳಗಳನ್ನು ಅತ್ಯಂತ ವ್ಯವಸ್ಥಿತವಾದ ಮತ್ತು ಸರಳ ಮಾದರಿಯ ಹಾಗೂ ಪರಿಸರಸ್ನೇಹಿಯಾದ ವಿಧಾನ ಮತ್ತು ಪರಿಕರಗಳ ಮೂಲಕ ಸಂಗ್ರಹಿಸಿ ಸಂರಕ್ಷಿಸಿ ಅಗತ್ಯಕ್ಕೆ ಅನುಗುಣವಾಗಿ ಬಳಸಿಕೊಂಡಿದ್ದುದು ಗಮನಿಸಬೇಕಾದ ಸಂಗತಿ. ಇದಕ್ಕೆ ಸಾಮ್ರಾಜ್ಯದಾದ್ಯಂತ ಅಂದು ನಿರ್ಮಾಣವಾದ ಅಣೆಕಟ್ಟೆ, ಕಾಲುವೆ ಮತ್ತು ಸಾವಿರಾರು ಕೆರೆಗಳು ಇಂದಿಗೂ ಜೀವಂತ ಸಾಕ್ಷ್ಯಗಳಾಗಿವೆ. ವರ್ಷಪೂರ್ತಿ ತುಂಬಿ ಹರಿಯುತ್ತಿದ್ದ ನದಿ ಮತ್ತು ಅವುಗಳ ಪ್ರವಾಹಗಳನ್ನು ತಡೆಯುವ, ಇಲ್ಲವೆ ತಗ್ಗಿಸುವ ಪ್ರಯತ್ನಕ್ಕೂ ಕೈಹಾಕಿದ್ದರು. ಕುಡಿಯಲು ಮಾತ್ರವಲ್ಲದೆ ಕೃಷಿ ಬಳಕೆಗೂ ನೆರವಾಗುವಂತೆ ವ್ಯವಸ್ಥೆಗೊಳಿಸಿದ್ದರು. ವಿಜಯನಗರವು ತನ್ನ ಸಾಮ್ರಾಜ್ಯದ ವಿಸ್ತಾರವನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಿಸಿದ ಹಿನ್ನೆಲೆಯಲ್ಲಿ ಅದರ ವ್ಯಾಪ್ತಿಯೊಳಗೆ ಬರುವ ಅನೇಕ ನದಿಗಳು, ಹಳ್ಳ-ಕೊಳ್ಳಗಳಿಗೆ ಅಣೆಕಟ್ಟೆ, ಕೆರೆಕಟ್ಟೆಗಳನ್ನು ಕಟ್ಟುವ ಮೂಲಕ ನೀರಿನ ಸದ್ಬಳಕೆಗೆ ಹೆಚ್ಚು ಒತ್ತು ನೀಡಿದ್ದರು. ಕೃಷ್ಣಾ, ತುಂಗಭದ್ರಾ, ಕಾವೇರಿ ಮೊದಲಾದ ನದಿ, ಹಳ್ಳಕೊಳ್ಳಗಳಿಗೆ ಅಣೆಕಟ್ಟೆಗಳನ್ನು ಕಟ್ಟುವ, ಕಾಲುವೆಗಳನ್ನು ತೋಡುವ ಮೂಲಕ ಕೃಷಿಚಟುವಟಿಕೆಗಳನ್ನು ಚುರುಕುಗೊಳಿಸಿದ್ದಾರೆ. ಅದರಲ್ಲೂ ರಾಜಧಾನಿ ಹಂಪೆ-ವಿಜಯನಗರದ ಮಗ್ಗುಲಲ್ಲಿ ಹರಿಯುವ ತುಂಗಭದ್ರಾ ನದಿ ಮತ್ತು ಅದರ ನೀರನ್ನು ಅತ್ಯಂತ ಉತ್ಕೃಷ್ಟ ಮಟ್ಟದ ತಂತ್ರಜ್ಞಾನವನ್ನು ಬಳಸಿಕೊಂಡಿರುವುದು ಗಮನೀಯ ಸಂಗತಿ. ಇದಕ್ಕೆ ವಿಸ್ತಾರವಾಗಿ ಬೆಳೆಯುತ್ತಿದ್ದ ರಾಜಧಾನಿ, ಅದರ ನಗರೀಕರಣ, ಜನಸಂಖ್ಯಾ ಸಾಂದ್ರತೆ, ಅದಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾದ ಅನಿವಾರ್ಯತೆಯೂ ಮುಖ್ಯವಾಗಿದ್ದಿತು. ಈ ಹಿನ್ನೆಲೆಯಲ್ಲಿ ತುಂಗಭದ್ರೆಗೆ ಅಡ್ಡಲಾಗಿ ಅನೇಕ ಅಣೆಕಟ್ಟುಗಳನ್ನು ಈ ಅವಧಿಯಲ್ಲಿ ಕಟ್ಟಿ, ಕಾಲುವೆಗಳನ್ನು ತೋಡಿಸಿ, ಕೃಷಿಯ ಜೊತೆಗೆ ನಗರಕ್ಕೂ ಅನುಕೂಲ ಕಲ್ಪಿಸಿದ್ದುದು ಗಮನಾರ್ಹ. ಇದಕ್ಕೆ ಅವರು ಬಳಸಿದ ಸರಳ ಮತ್ತು ಪರಿಸರಸ್ನೇಹಿ ತಂತ್ರಜ್ಞಾನಗಳು ಅತಿ ಮುಖ್ಯವಾಗಿವೆ. ಇಂದಿನ ಆಧುನಿಕ ಯುಗದಲ್ಲಿ ನದಿಗಳನ್ನು ಬಳಸಿಕೊಳ್ಳುವ ಕ್ರಮಕ್ಕೂ, ಹಿಂದಿನವರ ವಿಧಾನಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಇಂದು ಕಟ್ಟಲಾದ ಅಣೆಕಟ್ಟೆಗಳು ನದಿಯನ್ನು ಹರಿಯಗೊಡದೆ, ನದಿಪಾತ್ರವನ್ನೇ ಮುಚ್ಚಿಹಾಕುವ, ನದಿಮುಖಜ ಪರಿಸರವನ್ನೇ ನಾಶಮಾಡುವತ್ತ ಸಾಗಿವೆ. ವರ್ಷಪೂರ್ತಿ ಹರಿಯುತ್ತಿದ್ದ ನದಿಗಳು ಈ ಆಧುನಿಕ ಅಣೆಕಟ್ಟೆಗಳಿಂದ ಬೇಸಿಗೆಯಲ್ಲಿ ಬರಿದಾಗಿ ಒಣಗಿ ಅಲ್ಲಿನ ಸಸ್ಯ, ಪ್ರಾಣಿ ಸಂಕುಲವನ್ನೇ ವಿನಾಶಕ್ಕೆ ದೂಡಿವೆ. ಆದರೆ ಹಿಂದಿನವರ ಜಾಣ್ಮೆ ಎಲ್ಲವನ್ನೂ ಆಪೋಷನ ಮಾಡುವುದಲ್ಲ. ತನಗೆಷ್ಟು ಬೇಕೆಂಬುದನ್ನು ಅರಿತು ಇತರರ ಅಗತ್ಯವನ್ನೂ ಚಾಚೂತಪ್ಪದೆ ಪಾಲಿಸುವಂತಿತ್ತು. ಅದು ತಾನು ಬದುಕಿ, ಇತರರ ಬದುಕಿಗೂ ನೆರವಾಗುವಂತಿದ್ದುದೇ ಆಗಿತ್ತು. ಇದಕ್ಕೆ ಅಂದಿನ ನೀರಿನ ಬಳಕೆಯ ಕ್ರಮ, ವಿಧಾನಗಳು ಅನುಸರಣೀಯ. ತುಂಗಭದ್ರಾ ನದಿಗೆ ಕಟ್ಟಲಾದ ಅಂತಹ ಅಣೆಕಟ್ಟೆಗಳಲ್ಲಿ ವಲ್ಲಭಾಪುರ ಅಣೆಕಟ್ಟು ಅತ್ಯಂತ ಮಹತ್ವದ್ದು. ಇದು ಇಂದಿನ ತುಂಗಭದ್ರಾ ಅಣೆಕಟ್ಟೆಯಲ್ಲಿ ಲೀನವಾಗಿದೆ. ಅದು ಅಂದಿನ ಮಟ್ಟಿಗೆ ದೊಡ್ಡ ನೀರಿನ ಸಂಗ್ರಹಾಗಾರವೇ. ಈ ಅಣೆಕಟ್ಟೆಯೂ ಇಂದಿನಂತೆ ಬಲ ಮತ್ತು ಎಡದಂಡೆಗಳಲ್ಲಿ ಬಸವಣ್ಣ ಮತ್ತು ಕೋರಗಲ್ ಕಾಲುವೆಗಳನ್ನು ಹೊಂದುವ ಮೂಲಕ ಎರಡೂ ದಂಡೆಗಳ ಜನರಿಗೆ ನೆರವಾಗಿದ್ದವು. ಬಲದಂಡೆಯ ಮೇಲಿನ ಬಸವಣ್ಣ ಕಾಲುವೆ ಇಂದಿಗೂ ಹೊಸಪೇಟೆಯನ್ನು ಸೀಳಿಕೊಂಡು ಕಮಲಾಪುರ ಕೆರೆಯಲ್ಲಿ ಕೊನೆಗೊಳ್ಳುತ್ತದೆ. ಆ ಮೂಲಕ ಕಮಲಾಪುರ ಕೆರೆಯನ್ನು ವರ್ಷಪೂರ್ತಿ ಜೀವಂತವಾಗಿಟ್ಟಿತ್ತು. ಆ ಮೂಲಕ ವಿಜಯನಗರ ಪಟ್ಟಣಕ್ಕೂ ನೆರವಾಗಿತ್ತು. ಈ ಅಣೆಕಟ್ಟೆ ಮತ್ತು ಕಾಲುವೆಗಳನ್ನು ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿಸಲಾಗಿತ್ತೆಂಬುದು ದಾಖಲೆಗಳಿಂದ ತಿಳಿಯುತ್ತದೆ. ಆದರೆ ಅಲ್ಲಿಯವರೆಗೆ ಮಳೆಯಾಶ್ರಿತ ಕಮಲಾಪುರ ಕೆರೆ ಪಟ್ಟಣದ ಜನರು ಮತ್ತು ಕೃಷಿಗೆ ಸಾಕಾಗುತ್ತಿತ್ತು. ಆದರೆ ಕೃಷ್ಣದೇವರಾಯನ ಕಾಲದ ಹೊತ್ತಿಗೆ ವಿಜಯನಗರ ಪಟ್ಟಣದ ವಿಸ್ತೀರ್ಣ ಮತ್ತು ಜನಸಾಂದ್ರತೆಯಿಂದ ನೀರಿನ ಕೊರತೆ ಕಂಡುಬಂದು ತುಂಗಭದ್ರೆಗೆ ಅಣೆಕಟ್ಟೆ ಕಟ್ಟುವ ಮತ್ತು ಕಾಲುವೆಗಳನ್ನು ತೋಡುವ ಪ್ರಮೇಯ ಬಂದದ್ದನ್ನು ಗಮನಿಸಬಹುದು. ಆದರೆ ಮುಖ್ಯ ಪಟ್ಟಣದ ಹೊರಭಾಗದ ಉಪಪಟ್ಟಣಗಳಾಗಿ ವಿಸ್ತಾರಗೊಂಡ ವಿರೂಪಾಕ್ಷಪುರ, ಕೃಷ್ಣಾಪುರ, ಅಚ್ಯುತಾಪುರ ಮತ್ತು ವಿಠಲಾಪುರಗಳಿಗೆ ಬುಕ್ಕರಾಯನ ಕಾಲದಲ್ಲಿ ನಿರ್ಮಾಣವಾದ ತುರ್ತು ಅಣೆಕಟ್ಟೆಯು ನೀರನ್ನು ಒದಗಿಸಲು ಅನುವಾಗಿದ್ದುದು ಗಮನಾರ್ಹ. ಕಮಲಾಪುರ ಕೆರೆಯು ತುಂಗಭದ್ರೆಯಿಂದ ಕಾಲುವೆಗಳ ಮೂಲಕ ನೀರನ್ನು ಪಡೆಯುವ ಮೂಲಕ ವಿಜಯನಗರ ಪಟ್ಟಣ(ಇಂದಿನ ಹಾಳುಪಟ್ಟಣ)ದ ಜೀವನಾಡಿಯಾಗಿತ್ತು. ಆದರೆ ತುಂಗಭದ್ರಾ ನದಿಗೆ ಕಟ್ಟಲಾದ ವಲ್ಲಭಾಪುರ ಅಣೆಕಟ್ಟೆಯು ನದಿಯ ಇಡೀ ನೀರನ್ನು ಕೂಡಿಹಾಕಿಕೊಳ್ಳುತ್ತಿರಲಿಲ್ಲ. ಇದರ ವಿಶೇಷತೆಯೆಂದರೆ ಕಾಲುವೆಗೆ ಸಾಕಾಗುವ ಮತ್ತು ಸುರಕ್ಷಿತವಾಗಿ ಹರಿಯುವಷ್ಟು ಮಾತ್ರವಾಗಿತ್ತು. ಅಂತೆಯೇ ಇದೇ ರೀತಿಯ ಅನೇಕ ಅಣೆಕಟ್ಟೆಗಳನ್ನು ಕೃಷಿ ಮತ್ತಿತರ ಚಟುವಟಿಕೆಗಳಿಗೆ ತುಂಗಭದ್ರಾ ನದಿಯುದ್ದಕ್ಕೂ ನಿರ್ಮಿಸಲಾಗಿತ್ತು. ಸಿ.ಟಿ.ಎಂ. ಕೊಟ್ರಯ್ಯ ಅವರ ಪ್ರಕಾರ ನದಿಯ ಎಡ ಮತ್ತು ಬಲಭಾಗದಲ್ಲಿ 18ಕ್ಕೂ ಹೆಚ್ಚು ಅಣೆಕಟ್ಟೆಗಳನ್ನು ವಿಜಯನಗರ ಅರಸರು ನಿರ್ಮಿಸಿದ್ದರು. ಅವುಗಳೆಂದರೆ ವಲ್ಲಭಾಪುರವಲ್ಲದೆ ರಾಮಣ್ಣ, ಕುರುದಗಡ್ಡೆ(ಹೊಸಕೋಟೆ), ಹೊಸೂರು, ತುರ್ತು ಅಣೆಕಟ್ಟು, ರಾಮಸಾಗರ, ಸಣಾಪುರ, ಹಿರೇಜಂತಕಲ್ಲು, ಕಂಪಲಿ, ಚಿಕ್ಕಜಂತಕಲ್ಲು, ಕೆಂಚನಗುಡ್ಡ, ದೇಶನೂರು ಅಣೆಕಟ್ಟೆಗಳು. ವಲ್ಲಭಾಪುರ ಅಣೆಕಟ್ಟೆಯ ಮೇಲ್ಭಾಗದಲ್ಲಿ ಒಂದು ಅಣೆಕಟ್ಟನ್ನು ಕಟ್ಟಲಾಗಿತ್ತು. ಅದು ಈ ಭಾಗದಲ್ಲಿ ಬರುವ ಮೊದಲ ಅಣೆಕಟ್ಟೆಯಾದುದರಿಂದ ಅದು ಮೊದಲಕಟ್ಟೆಯಾಗಿತ್ತು. ಅದು ಇಂದಿಗೂ ಮದಲಗಟ್ಟವಾಗಿ ಹೆಸರಾಗಿದೆ. ವಿಜಯನಗರ ಕಾಲದಲ್ಲಿ ಕಟ್ಟಲಾದ ಅಣೆಕಟ್ಟೆಗಳಲ್ಲಿ ಅತ್ಯಂತ ಹಳೆಯದು ತುರ್ತು ಅಣೆಕಟ್ಟು. ಇದನ್ನು ಬುಕ್ಕರಾಯನ ಕಾಲದಲ್ಲಿ ನಿರ್ಮಿಸಲಾಯಿತೆಂದು ಹೇಳಲಾಗುತ್ತದೆ. ಅಲ್ಲದೆ ಶಾಸನವೊಂದು ಚಿಂತಾಯಕ ದೇವಣ್ಣನು ಈ ಅಣೆಕಟ್ಟೆಯನ್ನು ಮತ್ತು ಬೊಮ್ಮೋಜ ಎಂಬುವನು ತುರ್ತು ಕಾಲುವೆ(ಶಾಸನಗಳಲ್ಲಿ ಹಿರಿಯ ಕಾಲುವೆ)ಯನ್ನು ಕಟ್ಟಿಸಿದರೆಂದು ಹೇಳಿದೆ. ಈ ಅಣೆಕಟ್ಟು ಹಂಪಿಯಿಂದ ಪಶ್ಚಿಮಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿದೆ.

ಮುಂದುವರಿಯುವುದು...

---

ನಟಿಸುವ ಈ ಸಾಹಸ ಕಲಾವಿದರನ್ನಂತೂ ಕೇಳುವವರೇ ಇರುವುದಿಲ್ಲ. ಎಷ್ಟೋ ಡಮ್ಮಿ ಹೀರೋ ಗಳೂ ಫೈಟರ್ ಗಳಿಂದಲೇ ರಾತ್ರೋರಾತ್ರಿ ಆಕ್ಷನ್ ಹೀರೋಗಳಾಗಿ ಬಿಂಬಿತವಾಗಿರುವ ಸತ್ಯ ಕಣ್ಮುಂದೆಯೆ ಇವೆ. ಸಾಹಸ ನಿರ್ದೇಶಕರಾದ ಫೈಟ್ ಮಾಸ್ಟರ್ ಗಳು ಕಂಪೋಸ್ ಮಾಡುವ ಡಿಫರೆಂಟ್ ಫೈಟಿಂಗ್ ಶಾಟ್ ಗಳು ಎಷ್ಟೋ ನಾಯಕ ನಾಯಕಿಯರನ್ನು, ಖಳನಾಯಕರನ್ನೂ ನಾಲ್ಕು ಎತ್ತರಕ್ಕೂ ಕಾಲು ಎತ್ತಲಾರದವರನ್ನೂ ಕ್ಷಣಾರ್ಧದಲ್ಲಿ ಬಡಿದಾಡುವ ವೀರ ಧೀರ-ಶೂರನನ್ನಾಗಿ ಪರದೆ ಮೇಲೆ ತೋರಿಸಿ ಮೆರೆಸಿ ಬಿಟ್ಟಿರುತ್ತವೆ!

ಕಷ್ಟಪಟ್ಟು ಬಾಡಿ ಬಿಲ್ಡ್ ಮಾಡಿಕೊಂಡು ಕಟ್ಟುಮಸ್ತು ಮೈ ಕೈ ಬೆಳೆಸಿಕೊಂಡು ಕರಾಟೆ, ಸ್ಟಂಟ್, ಜಂಪ್ ಗಳನ್ನು ಪ್ರಾಕ್ಟೀಸ್ ಮಾಡಿಕೊಂಡು ಫೈಟರ್ ಗಳಾಗಿ ಸಿನಿಮಾ ರಂಗಕ್ಕೆ ಎಂಟ್ರಿ ಕೊಡುವ ಸಾಹಸ ಕಲಾವಿದರೆನಿಸಿಕೊಳ್ಳುವ ಫೈಟರ್ ಕಲಾವಿದರು ಹೊಟ್ಟೆ ಪಾಡಿಗಾಗಿ ಮುಂದೊಂದು ದಿನ ಒಳ್ಳೆಯ ಖಳನಟನ ರೋಲ್ ಸಿಗಬಹುದೆಂಬ ನಿರೀಕ್ಷೆಯಿಂದ ಪ್ರಾಣ ಭಯವಿದ್ದರೂ ಫೈಟಿಂಗ್ ಕಂಪೋಸರ್ ಗಳಿಂದ ಬಯ್ಯಿಸಿಕೊಂಡು ಹೇಳಿಕೊಟ್ಟಿದ್ದನ್ನೆಲ್ಲಾ ಮೈಮೇಲೆ ಹಾಕಿಕೊಂಡು ಕೆಮೆರಾ ಎದುರು ಮಾಡುತ್ತಾರೆ ಸ್ವಲ್ಪ ಯಾಮಾರಿದರೂ ಅನಿಲ್, ಉದಯ್, ವಿವೇಕ್ ರಂತೆ




ನಿಮಿಷದಲ್ಲೇ ಸಾಯುತ್ತಾರೆ!

ಯಾವುದೇ ಸೌಲಭ್ಯಗಳನ್ನು ನೀಡದೆ ಫೈಟಿಂಗ್ ಸೀನ್ ನಲ್ಲಿ ಭಾಗವಹಿಸುವ ಫೈಟರ್ ಗಳನ್ನೂ, ಸಹ ಕಲಾವಿದರನ್ನೂ ಲೈಫ್ ರಿಸ್ಕ್ ಇರುವಂತಹ ಶಾಟ್ ಗಳಲ್ಲಿ ಬಳಸಿಕೊಂಡು ಕಂಡೋರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುತ್ತಿರುವುದು ಸಿನಿಮಾ ರಂಗಕ್ಕೆ ಎಷ್ಟು ಸರಿ ಎಂದು ಜನ ಪ್ರಶ್ನೆ ಮಾಡುತ್ತಿದ್ದಾರೆ. ಲವ್ ಯೂ ರಚ್ಚು ಸಿನಿಮಾದ ನಿರ್ಮಾಪಕ ಗುರು ದೇಶಪಾಂಡೆಗೆ ಕನ್ನಡ ಚಿತ್ರರಂಗದ ಹೊಸದೇನಲ್ಲ. ಫೈಟ್ ಮಾಸ್ಟರ್ ವಿನೋದ್ ಗೂ ಸ್ಟಂಟ್ ಡೈರೆಕ್ಟರ್ ರವಿವರ್ಮರಷ್ಟಲ್ಲದಿದ್ದರೂ ಒಳ್ಳೆಯ ಹೆಸರಂತೂ ಇತ್ತೂ. ಆದರೆ ಈಗ ಏನಾಗಿದೆ? ಈ ಸಾವಿಗೆ ಯಾರು ಹೊಣೆ? ಅವನ ತಪ್ಪು ಇವನ ಮೇಲೆ ಈವನ ತಪ್ಪು ಅವನ ಮೇಲೆ ಹಾಕಿ ತಪ್ಪಿಸಿಕೊಳ್ಳಲು ನೋಡುತ್ತಿದ್ದಾರೆ. ಅಂತಿಮವಾಗಿ ಎಲ್ಲಾ ತಪ್ಪನ್ನು ಕ್ರೇನ್ ಡ್ರೈವರ್ ಮೇಲೆ ಹಾಕಲು ರೆಡಿಯಾಗಿದ್ದಾರೆ. ರೂಫ್ ಸ್ಟಂಟ್ ಶಾಟ್ ಎಂಬ ರಿಸ್ಕೀ ಶಾಟ್ ಗಳಲ್ಲಿ ಈಗ ಎಲ್ಲಾ ಚಿತ್ರರಂಗದಲ್ಲೂ ಮೆಟಲ್ ರೋಪ್ (ಉಕ್ಕಿನ ವೈರ್) ಕಾಮನ್ ಆಗಿದೆ. ಹಗ್ಗ,

ಪ್ಲಾಸ್ಟಿಕ್ ಬಳಸುವುದನ್ನು ನಿಲ್ಲಿಸಿ ಎಷ್ಟೋ ಕಾಲವಾಗಿದೆಯಂತೇ. ಹದಿನೈದು ವರ್ಷಗಳ ಹಿಂದೆಯೇ 'ಹಲೋ ಸಿಸ್ಟರ್' ಚಲನ ಚಿತ್ರ ಚಿತ್ರೀಕರಣದ ವೇಳೆಯಲ್ಲಿ ಇದೇ ರೀತಿ ಕ್ರೇನ್ ಶಾಟ್ ತೆಗೆಯುವಾಗ ವಿದ್ಯುತ್ ತಂತಿ ತಗುಲಿ ಇಬ್ಬರು ಹುಡುಗರು ಸುಟ್ಟು ಹೋಗಿದ್ದರು!! ಹಳೆಯ ಯಾವ ದುರ್ಘಟನೆಗಳಿಂದಲೂ ನಮ್ಮ ಸಿನಿಮಾ ರಂಗದವರು ಪಾಠ ಕಲಿತಿಲ್ಲವಲ್ಲ ಅದಕ್ಕಾಗಿಯೇ ಈಗ ಇತಿಹಾಸ ಮತ್ತೆ ಮರುಕಳಿಸಿದೆ ಅಷ್ಟೇ! ಇದೇ ಜೋಗನ ಪಾಳ್ಯದ ತೆಂಗಿನ ತೋಟದಲ್ಲೂ ಫೈಟರ್ ವಿವೇಕ್ ಜೊತೆಗೇ ರಂಜಿತ್ ಎಂಬ ಇನ್ನೊಬ್ಬ ಸಹ ಕಲಾವಿದ ಸಾಯಬೇಕಿತ್ತು ಅದೃಷ್ಟಾವಶಾತ್ ಬದುಕಿದ್ದಾನೆ.

ಬೇಜವಾಬ್ದಾರಿ ನಿರ್ದೇಶಕರನ್ನು ಬಂಧಿಸುವುದು ರಿಂದ ಅವರ ಮೇಲೆ ಕೇಸು ಹಾಕುವುದರಿಂದ ಇವೆಲ್ಲ ನಿಲ್ಲಲು ಸಾಧ್ಯವೇ? ಈ ಹಿಂದೆ ಕೂಡ ಅನಿಲ್, ಉದಯ್ ಇದೇ ರಾಮನಗರ ಜಿಲ್ಲೆಯ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹೆಲಿಕಾಪ್ಟರ್ ನಿಂದ ನೆಗೆದು ಪ್ರಾಣ ಬಿಟ್ಟಾಗ ಸ್ಟಂಟ್ ಡೈರೆಕ್ಟರ್ ರವಿವರ್ಮ ಮತ್ತು ಸಿನಿಮಾ ನಿರ್ದೇಶಕ ನಾಗಶೇಖರ್ ಮೇಲೆ ಕೊಲೆ ಪ್ರಕರಣವನ್ನೇ ದಾಖಲಿಸಲಾಗಿತ್ತು! ಈಗ 'ಲವ್ ಯೂ ರಚ್ಚು' ಹೀರೋ ಅಜಯ್ ರಾವ್ ಫೈಟರ್ ವಿವೇಕ್ ಸಾಯುವಾಗ ಪಕ್ಕದಲ್ಲೆ ಇದ್ದರು ಅವರನ್ನು ಬಂಧಿಸಿ ಅಂತಿದ್ದಾರೆ ಕೆಲವರು! ಕನ್ನಡ ಚಿತ್ರರಂಗದಲ್ಲಿ ಕಲಾವಿದರಿಗಾಗಿ ಒಂದು ಸರಿಯಾದ ಕಾರ್ಮಿಕ ಕಾನೂನು ಗಳಿಲ್ಲ-ನೀತಿ ನಿಯಮಗಳಿಲ್ಲ ಇಂತ ಬಡ ಫೈಟರ್ ಗಳಿಗಂತೂ ಜೀವ ವಿಮೆಯಂತೂ ಇರಲು ಸಾಧ್ಯವೇ ಇಲ್ಲ. ಕಲಾವಿದರ ಸಂಘವಂತೂ ಸದಾ ನಿದ್ರೆಯಲ್ಲಿರುತ್ತದೆ. ಚಲನ ಚಿತ್ರ ವಾಣಿಜ್ಯ ಮಂಡಳಿಗೆ ಕಣ್ಣು-ಕಿವಿಯಿದ್ದರೂ ಪ್ರಯೋಜನವಿಲ್ಲ ಎನ್ನುವಂತಾಗಿದೆ ನಮ್ಮ ಕನ್ನಡ ಸಿನಿಮಾ ರಂಗದ ಸ್ಥಿತಿ. ಗಾಂಧಿನಗರದ ನಿರ್ದೇಶಕರ ಬೇಜವಾಬ್ದಾರಿ ಹೀಗೆ ಮುಂದುವರಿದರೇ ಇನ್ನೆಷ್ಟು ಬಡ ಕಲಾವಿದರ ಹೆಣ ಬೀಳಲಿವೆಯೋ?.

# ಕಟ್ಟುಪಾಡಿನೊಳಗೆ ಜೊಲ್ಲೆಯಂತ ಭ್ರಷ್ಟರಿಗೆ ಮಣೆಹಾಕಿದ ಬೊಮ್ಮಾಯಿ



●ತುರುವನೂರು ಮಂಜುನಾಥ

ಬಸವರಾಜ್ ಬೊಮ್ಮಾಯಿ ಸಚಿವ ಸಂಪುಟದಲ್ಲಿ ಹೊಸಬರಿಗೆ ಅವಕಾಶ ಸಿಗಲಾಗುತ್ತದೆ ಎನ್ನುವ ನಂಬಿಕೆ ಇತ್ತು ಆದರೆ ಅ ನಂಬಿಕೆ ಸುಳ್ಳು ಮಾಡಿ ಕೆಲಭ್ರಷ್ಟರಿಗೆ ಮಣೆ ಹಾಕಲಾಗಿದೆ ಇನ್ನೂ ಕೆಲವರು ಕಳೆದ ಸಚಿವ ಸಂಪುಟದಲ್ಲಿ ಅಷ್ಟಾಗಿ ಕೆಲಸ ಮಾಡದ ಸಚಿವರಿಗೂ ಈ ಸಚಿವ ಸಂಪುಟದಲ್ಲಿ ಅವಕಾಶ ನೀಡಲಾಗಿದೆ. ಇದು ಒಂದು ರೀತಿ ಅಸಮತೋಲನಕ್ಕೆ ಕಾರಣವಾಗಿದೆ .



ಕುಡಚಿ ಶಾಸಕ ಪಿ.ರಾಜೀವ್, ಸುರುಪುರದ ಶಾಸಕ ರಾಜು ಗೌಡ, ಹಿರಯೂರು ವಿಧಾನಸಭಾ ಕ್ಷೇತ್ರದ ಪೂರ್ಣಿಮ ಶ್ರೀನಿವಾಸ್, ಮತ್ತು ಸದಾ ಪಾದರಸದಂತೆ ಕಾರ್ಯ ಮಾಡುತ್ತಿದ್ದ ಬೆಂಗಳೂರು ರಾಜಾಜಿನಗರದ ಶಾಸಕ ಸುರೇಶ್ ಕುಮಾರ್ ಅವರಿಗೆ ಅವಕಾಶ ನೀಡದಿರುವುದು ಬೇರೆಯೇ ಸಂದೇಶ ರವಾನೆಯಾಗುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.

ಬಸವರಾಜ್ ಬೊಮ್ಮಾಯಿ ಸಿಎಂ ಆಗಿ ಆಯ್ಕೆಯಾಗುತ್ತಿದ್ದಂತೆ ಅವರ ಸಚಿವ ಸಂಪುಟದಲ್ಲಿ ಎಲ್ಲಾ ಜಾತಿಗೂ ಎಲ್ಲಾ ಜಿಲ್ಲೆಗೂ ಪ್ರಾತಿನಿಧ್ಯ ನೀಡುವ ಮೂಲಕ ಸಮತೋಲನ ಸಂಪುಟವನ್ನು ರಚಿಸುತ್ತಾರೆ ಎನ್ನುವ ಮಾತುಗಳು ಕೇಳಿ ಬರುತ್ತಿದ್ದವು ಆದರೆ ಅವರು ಕೆಲವರ ಮಾತಿಗೆ ಕಟ್ಟು ಬಿದ್ದು ಬಡ ಮಕ್ಕಳಿಗೆ ಹಂಚುವ ಮೊಟ್ಟೆಗಳಲ್ಲಿ ಕಮಿಷನ್ ಪಡೆಯುವ ಮೂಲಕ ಭ್ರಷ್ಟ ಸಚಿವೆ ಎನ್ನುವ ಪಟ್ಟ ಕಟ್ಟಿಕೊಂಡಿರುವ ಶಶಿಕಲಾ ಜೊಲ್ಲೆ ಅವರಿಗೆ ಅವಕಾಶ ನೀಡುವ ಮೂಲಕ ಬೇರೆಯದ್ದೆ ಸಂದೇಶ ರವಾನೆಯಾಗಿದೆ ಆದರೆ ಅವರಿಗೆ ಮತ್ತೆ ಅದೇ ಖಾತೆ ಕೊಡುವ ಬದಲು ದೇವರ ಕೃಪಾ ಕಟಾಕ್ಷ ಇರಲಿ ಎಂದು ಮುಜರಾಯಿ ಮತ್ತು ವಕ್ಫ್ ಸಚಿವ ಸ್ಥನ ನೀಡುವ ಮೂಲಕ ಮತ್ತೊಂದು ಸಂದೇಸ ರವಾನಿಸುವ ಪ್ರಯತ್ನ ನಡೆಸಿದರು ಕೂಡ ಜೊಲ್ಲೆ ಬಸವರಾಜ್ ಬೊಮ್ಮಾಯಿ ಸಚಿವ ಸಂಪುಟದಲ್ಲಿ ಸೇರಿಸಿಕೊಳ್ಳುವ ಕಸರತ್ತು ಮಾಡಬಾರದಿತ್ತು. ಸಂತೋಷ್‌ಅವರ ಕೃಪಾ ಕಟಾಕ್ಷದಿಂದ ಕೊನೆ ಘಳಿಗೆಯಲ್ಲಿ ಅವರಿಗೆ ವಿಮಾನ ನಿಲ್ದಾಣದಿಂದ ಜೀರೋ ಟ್ರಾಫಿಕ್ ಮೂಲಕ ರಾಜಭವನದಕ್ಕೆ ಬರುವ ಅವಕಾಶ ಮಾಡಿಕೊಟ್ಟು ಪ್ರಮಾಣ ವಚನ ಸ್ವೀಕರಿಸುವ ಕೃಪೆ ತೋರಿದ್ದು ಕೂಡ ಬಸವರಾಜ್ ಬೊಮ್ಮಾಯಿ ಸಚಿವ ಸಂಪುಟದ ಒಂದು ಕಪ್ಪು ಚುಕ್ಕೆಯೇ ಸರಿ.



ಇದರ ಬದಲಿಗೆ ಹಿರಯೂರು ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಅವರಿಗೆ ನೀಡುವ ಮೂಲಕ ಯಾದವ ಸಮುದಾಯಕಕ್ಕೆ ಪ್ರಾಶಸ್ತ್ಯನೀಡಿದಂತಾಗುತ್ತಿತ್ತು ಆದರೆ ಅದೇಕೋ ಕಟ್ಟುಪಾಡಿಗೆ ಸಿಲುಕಿ ಈ ನಿರ್ಧಾರ ಕೈಗೊಂಡಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಕಾಣುತ್ತಿದೆ.



ಬೊಮ್ಮಾಯಿ ಸಚಿವ ಸಂಪುಟ ಒಂದು ರೀತಿ ಅಸಮತೋಲನದಂತಿದೆ, ಪ್ರಾದೇಶಿಕ, ಜಾತಿವಾರು ಹಂಚಿಕೆಯಾಗಿಲ್ಲ ಎನ್ನುವುದನ್ನು ಮೇಲ್ನೋಟಕ್ಕೆ ಕಾಣುತ್ತದೆ. ಇದೆಲ್ಲವೂ ವಲಸೆ ಬಂದವರಿಂದ ಅನಿವಾರ್ಯವಾಗಿ ಅವರಿಗೆ ಕೊಡಬೇಕಾದ ಸ್ಥಾನಗಳನ್ನು ಕೊಟ್ಟಿರುವ ಕಾರಣ ಇನ್‌ಬ್ಯಾಲನ್ಸ್ ಅಗಿದೆ ಎಂದುಕೊಂಡರು ಕೂಡ ಪ್ರಾದೇಶಿಕವಾರು ಮತ್ತು ಜಾತಿವಾರು ಕೊಡುವ ಎಲ್ಲಾ ಸಾಧ್ಯತೆಗಳು ಇದ್ದರೂ ಕೂಡ ಕೆಲವರ ಹಿತಾಸಕ್ತಿಗೆ ಬಲಿಯಾಗಿ ಈ ರೀತಿಯ ಸಚಿವ ಸಂಪುಟ ಹೊರಬಂದಿದೆ.

ಎಲ್ಲಾ ಜಾತಿ ಮತ್ತು ಜನವರ್ಗ ಗಳಿಗೆ ಸೂಕ್ತ ಪ್ರಾತಿನಿಧ್ಯವಿರುವ ಸರ್ವಾಂಗ ಸುಂದರವಾದ ಸಚಿವ ಸಂಪುಟ ರಚನೆಯ ಅವಕಾಶವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಪ್ಪಿಸಿಕೊಂಡಿದ್ದಾರೆ.ಶಾಸಕರ ಸಂಖ್ಯೆಗೆ ಅನುಗುಣವಾಗಿ ಮಂತ್ರಿ ಸ್ಥಾನಗಳಿಗೆ ಒತ್ತಾಯ ಬರುವುದು ಸಹಜ.ಉದಾಹರಣೆಗೆ ಜೆಡಿಎಸ್–ಕಾಂಗ್ರೆಸ್ ಸರ್ಕಾರದಲ್ಲಿ ಒಕ್ಕಲಿಗ ಶಾಸಕರ ಸಂಖ್ಯೆ ಜಾಸ್ತಿ ಇತ್ತು.ಆಗ ಎಚ್ ಡಿ ಕುಮಾರಸ್ವಾಮಿ ಸೇರಿದಂತೆ 10 ಒಕ್ಕಲಿಗ ಮಂತ್ರಿಗಳಿದ್ದರು.ಬಿಜೆಪಿ ಯಲ್ಲಿ ಲಿಂಗಾಯತ ಶಾಸಕರ ಸಂಖ್ಯೆ 41.ಆದ್ದರಿಂದ ಯಡಿಯೂರಪ್ಪ ಸಂಪುಟದಲ್ಲಿ ಅವರೂ ಸೇರಿದಂತೆ 10 ಲಿಂಗಾಯತ ಮಂತ್ರಿಗಳಿದ್ದರು.ಆದರೆ ಈ ಬಾರಿ ಬೊಮ್ಮಾಯಿಯವರು ಸ್ವತಃ ಲಿಂಗಾಯತರು ಆಗಿರುವುದರಿಂದ

ಲಿಂಗಾಯತ ಮಂತ್ರಿಗಳ ಸಂಖ್ಯೆಯನ್ನು 5 ಅಥವಾ 6 ಕ್ಕೆ ಸೀಮಿತಗೊಳಿಸುವ ರಾಜಕೀಯ ಇಚ್ಛಾ ಶಕ್ತಿಯನ್ನು ಮತ್ತು ಔದಾರ್ಯವನ್ನು ಪ್ರದರ್ಶಿಸಬಹುದಿತ್ತು .ಉಮೇಶ್ ಕತ್ತಿ, ಸಿ.ಸಿ. ಪಾಟೀಲ, ಮತ್ತು ಶಶಿಕಲಾ ಜೊಲ್ಲೆ ಅವರನ್ನು ಬಿಟ್ಟಿದ್ದರೆ ಆಕಾಶವೇನೂ ಕಳಚಿ ಬೀಳುತ್ತಿರಲಿಲ್ಲ. ಯಾದವ ಸಮುದಾಯದ ಪೂರ್ಣಿಮಾ ಶ್ರೀನಿವಾಸ್ ಅವರಿಗೆ ಕಡೇ ಗಳಿಗೆಯಲ್ಲಿ ಅವಕಾಶವನ್ನು ತಪ್ಪಿಸಿ ಶಶಿಕಲಾ ಜೊಲ್ಲೆ ವಿಮಾನ ನಿಲ್ದಾಣದಿಂದ ಜೀರೋ ಟ್ರಾಫಿಕ್ ನಲ್ಲಿ ರಾಜಭವನಕ್ಕೆ ಬಂದು ಪ್ರಮಾಣ ವಚನ ಸ್ವೀಕರಿಸಿದ್ದು ಬಿಜೆಪಿ ಯ ಒಂದು ನಿರ್ಲಜ್ಜ ರಾಜಕೀಯ ಡ್ರಾಮಾ.ಕ್ಲೀನ್ ಇಮೇಜ್ ಕ್ಯಾಬಿನೆಟ್ ಮಾಡುತ್ತೇವೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಬಿಜೆಪಿ ಮುಖಂಡರು ಹಲವು ಹಗರಣಗಳಲ್ಲಿ ಸಿಲುಕಿ ನಿಷ್ಕ್ರಿಯ ಸಚಿವರಾಗಿದ್ದ ಜೊಲ್ಲೆಯವರಿಗೆ ಮತ್ತೆ ಅವಕಾಶ ನೀಡಿರುವುದು ಒಂದು ವಿಪರ್ಯಾಸ.ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಆರಂಭಿಕ ಕೆಲವು ವರ್ಷ ತಮ್ಮ ಜಾತಿಯವರಾದ ಕುರುಬರನ್ನು ಸಂಪುಟಕ್ಕೆ ಸೇರಿಸಿಕೊಂಡಿರಲಿಲ್ಲ.ಒಕ್ಕಲಿಗ ಮಂತ್ರಿಗಳ ಸಂಖ್ಯೆಯನ್ನು ಕೂಡ ಐದಕ್ಕೆ ಸೀಮಿತಗೊಳಿಸಬಹುದಿತ್ತು.ಭೋವಿ ಸಮುದಾಯದ ಅರವಿಂದ ಲಿಂಬಾವಳಿ ಸಂಪುಟದಲ್ಲಿ ಇರಬೇಕಿತ್ತು. ಒಂದು ಕಾಲದಲ್ಲಿ (2008) ಯಡಿಯೂರಪ್ಪ ಸಂಪುಟದಲ್ಲಿ ಆರು ಮಂದಿ ಭೋವಿ ಸಮುದಾಯದ ಸಚಿವರಿದ್ದರು.ರಾಜ್ಯದಲ್ಲಿ ಬಿಜೆಪಿ ನ ಬೆನ್ನೆಲುಬಾಗಿರುವ ವಾಲ್ಮೀಕಿ ಜನಾಂಗದವರಿಗೆ ಒಂದೇ ಸ್ಥಾನ ನೀಡಿರುವುದು ಸರಿಯಲ್ಲ.ಸುರಪುರದ ರಾಜೂ ಗೌಡ ಅಥವಾ ಬಾಲಚಂದ್ರ ಜಾರಕಿಹೊಳಿಯವರನ್ನು ಪರಿಗಣಿಸಬಹುದಿತ್ತು. ಕೋವಿಡ್ ನಡುವೆಯೂ ಖಖಐಅ ಪರೀಕ್ಷೆಗಳನ್ನು ಸಮರ್ಥವಾಗಿ ನಡೆಸಿದ್ದ ಮತ್ತು ಖಾಸಗಿ ಎಜುಕೇಶನ್ ಮಾಫಿಯಾವನ್ನು ಅನಾಮತ್ತಾಗಿ ಎದುರಿಸಿದ್ದ ಸುರೇಶ್ ಕುಮಾರ್ ಅವರನ್ನು ಕೈ ಬಿಡುವ ಮೂಲಕ ರಾಜ್ಯದ ಜನತೆಗೆ ಯಾವ ರೀತಿಯ ಸಂದೇಶವನ್ನು ರವಾನೆ ಮಾಡಲಾಗುತ್ತಿದೆ?ಈಡಿಗರ ಕೋಟಾದಲ್ಲಿ ಇನ್ನೂ ಒಬ್ಬರಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾತಿನಿಧ್ಯ ನೀಡಬಹುದಿತ್ತು.ಲಂಬಾಣಿ ಕೋಟಾದಲ್ಲಿ ಅಪರೂಪದ ಒಳನೋಟ ಹೊಂದಿರುವ ಕ್ರಿಯಾಶೀಲ ಶಾಸಕ ರಾಜೀವ್ ಕುಡುಚಿ ಅವರಿಗೆ ಅವಕಾಶ ನೀಡಬೇಕಿತ್ತು.ಇದೊಂದು ಅಸಮತೋಲನ ಮತ್ತು ಬಲಾಢ್ಯರ ಜಾತೀಯತೆಯ ನಿರ್ಲಜ್ಜ ಪ್ರದರ್ಶನ.



## ಕೆಲ ಅಚ್ಚರಿ ಬೆಳವಣಿಗೆ

ಹೊಸ ಸಂಪುಟದಲ್ಲಿ ತಮ್ಮ ಮಗ ಬಿ.ವೈ. ವಿಜಯೇಂದ್ರ ಅವರಿಗೆ ಸ್ಥಾನ ದೊರಕಿಸಿಕೊಡಲು ಯಡಿಯೂರಪ್ಪ ನಡೆಸಿದರು ಎನ್ನಲಾದ ಯತ್ನ ಫಲಕಾರಿಯಾಗಿಲ್ಲ. ಯಡಿಯೂರಪ್ಪ ಅವರು ಅಧಿಕಾರದಲ್ಲಿದ್ದಾಗ ವಿಜಯೇಂದ್ರ ಅವರು ಆಡಳಿತದಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದರು ಎಂಬ ಆರೋಪ ಇತ್ತು. ಆಡಳಿತ ಪಕ್ಷದ ಕೆಲವು ಶಾಸಕರೇ ಇಂತಹ ಆರೋಪ ಮಾಡಿದ್ದರು. ಮತ್ತೊಂದು ಅಧಿಕಾರ ಕೇಂದ್ರ ನೆಲೆಗೊಳ್ಳುವುದು ಬೇಡ ಎಂಬ ಮುನ್ನೆಚ್ಚರಿಕೆಯ ಕ್ರಮವಾಗಿ ಅವರ ಸೇರ್ಪಡೆಗೆ ವರಿಷ್ಠರು ಅನುಮತಿ ನಿರಾಕರಿಸಿರುವ ಸಾಧ್ಯತೆ ಇದೆ. ಅಷ್ಟರಮಟ್ಟಿಗೆ ಯಡಿಯೂರಪ್ಪ ಅವರಿಗೆ ಹಿನ್ನಡೆಯಾಗಿದೆ ಎನ್ನಲು ಅಡ್ಡಿಯಿಲ್ಲ. ಆದರೆ ತಮ್ಮ ನೇತೃತ್ವದ ಸರ್ಕಾರದ ವಿರುದ್ಧ ಬಹಿರಂಗವಾಗಿ ವಾಗ್ದಾಳಿ ನಡೆಸಿದ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ್, ಅರವಿಂದ ಬೆಲ್ಲದ ಮತ್ತು ಸಿ.ಪಿ. ಯೋಗೇಶ್ವರ್ ಅವರ ಸಂಪುಟ ಸೇರ್ಪಡೆ ಯತ್ನವನ್ನು ತಡೆಯುವಲ್ಲಿ ಯಡಿಯೂರಪ್ಪ ಯಶಸ್ವಿಯಾಗಿ ದ್ದಾರೆ ಎನ್ನಬಹುದು. ಕೋವಿಡ್ ಎರಡನೇ ಅಲೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿರಲಿಲ್ಲ. ಸಚಿವರ ನಡುವೆ ಹೊಂದಾಣಿಕೆ ಇಲ್ಲದೇ ಇದ್ದುದು ಅದಕ್ಕೆ ಒಂದು ಕಾರಣ. ಹೊಸ ಸಂಪುಟದಲ್ಲೂ ಹೆಚ್ಚಿನವರು ಅವರೇ ಇದ್ದಾರೆ. ಆದಕಾರಣ, ಆಡಳಿತದಲ್ಲಿ ದೊಡ್ಡ ಮಟ್ಟದಲ್ಲಿ ಬದಲಾವಣೆ ತರುವುದು,&ಟಿಭಳಿ;ಹೊಸ ಚೈತನ್ಯ ತುಂಬುವುದು ಮುಖ್ಯಮಂತ್ರಿಯವರಿಗೆ ಸವಾಲಿನ ಕೆಲಸವಾಗ ಬಹುದು. ಹೊಸ ನಿರೀಕ್ಷೆಗಳನ್ನು ಮೂಡಿಸಬಲ್ಲಂತಹ ತಂಡವನ್ನು ಹೊಂದುವ ಅವಕಾಶ ಇತ್ತು. ಆ ಸಾಧ್ಯತೆಯನ್ನು ಮುಖ್ಯಮಂತ್ರಿ ಮತ್ತು ಪಕ್ಷದ ವರಿಷ್ಠರು ಬಳಸಿಕೊಂಡಿಲ್ಲ. ಸಚಿವ ಸಂಪುಟ ರಚನೆಯ ಬೆನ್ನಲ್ಲೇ ಅಸಮಾಧಾನಗಳು ಕೂಡ ಹೊರಬಿದ್ದಿವೆ. ಅವಕಾಶವಂಚಿತ ಕೆಲವು ಶಾಸಕರ ಬೆಂಬಲಿಗರು ಕೆಲವೆಡೆ ಪ್ರತಿಭಟನೆ ನಡೆಸಿದ್ದಾರೆ. ಇದನ್ನು ಊಹಿಸಿಯೇ ಸಂಪುಟದಲ್ಲಿ ನಾಲ್ಕು ಸ್ಥಾನಗಳನ್ನು ಖಾಲಿ ಉಳಿಸಿಕೊಳ್ಳಲಾಗಿದೆ ಎನ್ನುವುದು ಸರ್ವವೇದ್ಯ. ಆಡಳಿತಕ್ಕೆ ಹೊರೆಯೆನಿಸಿದ್ದ ಉಪಮುಖ್ಯಮಂತ್ರಿ ಸ್ಥಾನಗಳನ್ನು ಕೈಬಿಟ್ಟಿರುವುದು ಸ್ವಾಗತಾರ್ಹ



ಸಚಿವ ಸಂಪುಟ ರಚನೆಯಲ್ಲಿ ಪ್ರಾದೇಶಿಕ ಅಸಮತೋಲನ ಎದ್ದು ಕಾಣುವಂತಿದೆ. ಬೆಂಗಳೂರು ನಗರಕ್ಕೆ ಸಿಂಹಪಾಲು ಲಭಿಸಿದೆ. ಆರು ಜಿಲ್ಲೆಗಳಿಂದ ತಲಾ ಇಬ್ಬರು ಸಚಿವರಾಗಿದ್ದರೆ, 13 ಜಿಲ್ಲೆಗಳಿಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯವೇ ಸಿಕ್ಕಿಲ್ಲ. ಅದರಲ್ಲೂ ಉತ್ತರ ಕರ್ನಾಟಕದ ಕಲಬುರ್ಗಿ, ಬಳ್ಳಾರಿ, ವಿಜಯ ಪುರ, ರಾಯಚೂರು, ಯಾದಗಿರಿ ಜಿಲ್ಲೆಗಳನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ. ಚಾಮರಾಜನಗರ, ಮೈಸೂರು, ಕೊಡಗು, ಹಾಸನ ಜಿಲ್ಲೆಗೂ ಪ್ರಾತಿನಿಧ್ಯ ದೊರೆತಿಲ್ಲ. ರಾಜಕೀಯ ಅನಿವಾರ್ಯಗಳು ಏನೇ ಇದ್ದರೂ ಈ ರೀತಿಯ ಪ್ರಾದೇಶಿಕ ತಾರತಮ್ಯವು ಅಭಿವೃದ್ಧಿಯ ಅಸಮಾನತೆಗೆ ಕಾರಣವಾಗುವುದು ಸುಳ್ಳಲ್ಲ. ಮಹಿಳೆಯರ ಪ್ರಾತಿನಿಧ್ಯದ ವಿಷಯದಲ್ಲೂ ಇತ್ತೀಚೆಗೆ ನಿಸ್ಸೀಮ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಸಚಿವೆ ಆಗಿದ್ದ ಶಶಿಕಲಾ ಜೊಲ್ಲೆ ಅವರಿಗೆ ಸ್ಥಾನ ಕೈತಪ್ಪಬಹುದು ಎಂಬ ವದಂತಿ ಇತ್ತು. ಅದು ನಿಜವಾಗಿಲ್ಲ. ಹೊಸ ಸಚಿವ ಸಂಪುಟದಲ್ಲಿ ಮಹಿಳಾ ಸಮುದಾಯವನ್ನು ಪ್ರತಿನಿಧಿಸುವ ಏಕೈಕ ಪ್ರತಿನಿಧಿ ಅವರು. ಇಸ್ಲಾಂ, ಕ್ರೈಸ್ತ, ಜೈನ ಮುಂತಾದ ಅಲ್ಪಸಂಖ್ಯಾತ ಧರ್ಮಗಳಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಜಾತಿಗಳ ಪ್ರಾತಿನಿಧ್ಯವನ್ನು ಗಮನಿಸಿದರೂ ಪ್ರಬಲ ಜಾತಿಗಳ ಪಾರಮ್ಯವೇ ಎದ್ದು ಕಾಣುತ್ತಿದೆ. ಕೋವಿಡ್ ಸಾಂಕ್ರಾಮಿಕ ಮತ್ತು ಪ್ರವಾಹದ ಕಾರಣದಿಂದ ರಾಜ್ಯದ ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ವಿವಿಧ ಸಮಸ್ಯೆಗಳಿವೆ. ಈಗಿನದ್ದು ಸಾಮಾನ್ಯ ಸ್ಥಿತಿ ಅಲ್ಲ. ಹಾಗಾಗಿ, ಜನರ ಸಂಕಷ್ಟದ ತೀವ್ರತೆ ತಗ್ಗಿಸಲು ಸರ್ಕಾರವು ಅತ್ಯಂತ ದಕ್ಷವಾಗಿ ಮತ್ತು ಚುರುಕಿನಿಂದ ಕೆಲಸ ಮಾಡಬೇಕಿದೆ. ನೆಲಕಚ್ಚಿರುವ ಆರ್ಥಿಕತೆಗೆ ಪುನಶ್ಚೇತನ ತುಂಬಿ, ಸಂಪನ್ಮೂಲ ಕ್ರೋಡೀಕರಣಕ್ಕೂ ಒತ್ತು ಕೊಡಬೇಕಿದೆ. ಖಾತೆ ಹಂಚಿಕೆಯ ಕೆಲಸವನ್ನು ಕ್ಷಿಪ್ರವಾಗಿ ಪೂರ್ಣಗೊಳಿಸಿ, ಸಚಿವರು ತಕ್ಷಣವೇ ಕಾರ್ಯಪ್ರವೃತ್ತರಾಗಲು ಮುಖ್ಯಮಂತ್ರಿ ಅನುವು ಮಾಡಿಕೊಡಬೇಕಿದೆ. ಎರಡು ವರ್ಷಗಳ ರಾಜಕೀಯ ಅಸ್ಥಿರತೆಯಿಂದ ಜಡಗೊಂಡಿರುವ ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸುವ ಕೆಲಸವು ತುರ್ತಾಗಿ ಆಗಬೇಕಿದೆ.

# ಸವಾಲುಗಳ ಮಣಿಸಿ ಗೆದ್ದು ನಕ್ಕ ರೇಖಾ

ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



"ನಾನು ಯಶಸ್ಸಿನ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ ಅದು ನನಗೆ ಅನ್ಯ ಪದ"ಎನ್ನುವ ಅಭಿನೇತ್ರಿ ರೇಖಾ ಹುಟ್ಟಿದ್ದು ಚನ್ನೈನಲ್ಲಿ. ತಂದೆ ತಮಿಳ,ತಾಯಿ ತೆಲುಗು,ರೇಖಾ ಎಂಬ ನಟಿ ಕನ್ನಡದ ಮೂಲಕ ನಾಯಕಿಯಾಗಿ ಪ್ರವೇಶಿಸಿ ನೆಲೆಗೊಂಡದ್ದು ಹಿಂದಿ ಚಿತ್ರರಂಗದಲ್ಲಿ. ಏಕರೂಪೀ ಪಾತ್ರಗಳಿಗೆ ಅಂಟಿಕೊಳ್ಳದೇ ಸದಾ ಹೊಸ ಪ್ರಯೋಗಗಳ ಮೂಲಕ ತನ್ನ ಚರಿಷ್ಮಾವನ್ನ ಚಲನಶೀಲಗೊಳಿಸಿಕೊಂಡಾಕೆ.ಹಾಗೆ ನೋಡಿದರೆ ರೇಖಾ ಸಿನಿಮಾಕ್ಕೆ ಬಂದಿದ್ದೇ ಆಕಸ್ಮಿಕ. ಮನೆಯ ಆರ್ಥಿಕ ತೊಂದರೆ ನಿವಾರಿಸಲಿಕ್ಕಾಗಿ ಅಮ್ಮ ಈಕೆಗೆ ಬಣ್ಣ ಹಚ್ಚಿಸಿದಳು.ಮುಂದೆ ಬಾಲಿವುಡ್ ಗೆ ತೆರಳಿದಾಗ ಆಕೆ ಬಣ್ಣದ ಸಮಸ್ಯೆ ಎದುರಿಸಬೇಕಾಯ್ತು.ಭಾಷೆಯ ಗೇಲಿಗೆ ಒಳಗಾಗ ಬೇಕಾಯ್ತು.ಆದರೆ ತನ್ನದೇ ಆಯ್ಕೆಯ ಕಾಳಜಿ ಹಾಗೂ ನಿರಂತರ ಶ್ರದ್ಧೆ ಮತ್ತು ಶ್ರಮದ ಮೂಲಕ ಗಲ್ಲಾ ಗಳಿಕೆಯ ಹ್ಯಾಟ್ರಿಕ ವರ್ಷಗಳ ಏಕೈಕ ನಾಯಕಿ ಎಂಬ ಹೆಗ್ಗಳಿಕೆಗೆ ಕಾರಣಳಾದಳು.ಎನ್ ಸೈಕ್ಲೋಪೀಡಿಯಾ ಆಪ್ ಬ್ರಿಟಾನಿಕಾದಲ್ಲಿ ಹಿಂದಿ ಚಿತ್ರದ ಸ್ಮರಣೀಯ ನಟಿ ಎಂದು ಕರೆಸಿಕೊಂಡಳು.ಲಜ್ಜಾದ ವಿಮರ್ಶಕರ ಮೆಚ್ಚುಗೆಗೆ ಪ್ರತಿಯಾಗಿ"ಲಜ್ಜಾ ನಾನೇ" ಎಂದಳು.

ಚಿತ್ರ ಬದುಕಿನುದ್ದಕ್ಕೂ ಒಲುಮೆಯ ಮೋಹನ ಮುರಳಿಯ ಬೆನ್ನಟ್ಟಿದ ಕೃಷ್ಣ ಸುಂದರಿಗೆ ದೇಹದ ಬಿಸುಪು ಸಿಕ್ಕರೂ ಅವಳ ಕೈಗೆ ಸಿಗದೇ ಜಿಗಿದದ್ದು ಅವಳೇ ಬಯಸಿದ ಅವನ ಪ್ರೇಮ.ರೇಖಾ ಹಲವು ಬಣ್ಣಗಳ ಚಿತ್ರಗಳಂತೆ ಕಂಡರೂ ಅಲೆಗಳ ನುಂಗಿ ಸಮುದ್ರಂತೆ ಉಳಿದಿದ್ದೇ ಅವಳ ರಿಯಲ್ ಚಿತ್ರ.

ರಾಷ್ಟ್ರೀಯ ಚಲನ ಚಿತ್ರ ಪ್ರಶಸ್ತಿ,ಪಲ್ಮ್ ಫೇರ್,ಪದ್ಮ ಪ್ರಶಸ್ತಿ,ಅತ್ಯುನ್ನತ ನಾಯಕಿಯ ಪ್ರಶಸ್ತಿ ಪಡೆದ ರೇಖಾ ಅತ್ಯುತ್ತಮ ನಟಿಯಲ್ಲೊಬ್ಬರು.ಜನಪ್ರಿಯ,ಕಲಾತ್ಮಕ ಪಾತ್ರಗಳಿಂದ ಜನಮನ ಸೂರೆಗೆಂಡ ಈಕೆಯ ಮೊದಲ ನಾಯಕಿ ಪ್ರಧಾನ ಚಿತ್ರ ಕನ್ನಡದ ಆಪರೇಷನ್ ಜಾಕ್ ಪಾಟ್ ನಲಿ ಸಿಐಡಿ 999.

" ಐ ಥ್ಯಾಂಕ್ಯು ವೆರಿ ಮಚ್ " ಎಂದು ಡಾ.ರಾಜ್ ಕುಮಾರ್ ಜೊತೆಗೆ ನುಲಿವ ಈ ನಟಿಯ ಮೊದಲ ಹಿಂದಿ ಸಿನಿಮಾ ಸಾವನ್,

" ಏ ಕಹಾ ಆಗೆಯೇ ಹಮ್ ಯುಹಿ ಸಾಥ್ ಸಾಥ್ ಚಲ್ತೆ.." ಎಂಬ ಸಿಲ್ ಸಿಲಾದ ಲತಾ ಮಂಗೇಶ್ಕರ್ ಹಾಡು,ಆ ಫೋಟೋ ಗ್ರಫಿ,ಅಮಿತಾಬ್ ಬಚ್ಚನ್ ಡೈಲಾಗ್ ,ಸಂಗೀತ ಎಲ್ಲಾ ಮಿಳಿತಗೊಂಡು 'ದೊ ಅಂಜಾನೆಯಿಂದ ಸಿಲ್ ಸಿಲಾದ' ತನಕ ಚಲಿಸಿದ ಎವರ್ ಗ್ರೀನ್ ಪ್ರೇಮ ಇಬ್ಬರ ಕಂಪಿನ ಇತಿಹಾಸದಂತಿದೆ.

ಊರಿಗೆ ಮನೆಯೆಂಬುದೊಂದು ಪಾಠ ಶಾಲೆ. ಅಪ್ಪ ಅಮ್ಮಂದಿರು ಸಂಸ್ಕಾರ ನೀಡುವ ಮೂಲ ಗುರುಗಳು. ಅವರೇ ದಿಕ್ಕು ತಪ್ಪಿದರೆ!? ಮಕ್ಕಳಿಗೆ ಬೆಳಕಿನ ದಾರಿ ತೋರುವವರಾರು? ರನ್ನದ ಗೊಂಬೆ ಬೆಳ್ಳಿತೆರೆಯ ಉಮ್ರಾವ್ ಜಾನ್ ಕಥನದ ಎಳೆಯೇ ಇದೆ ರೇಖಾ ಬದುಕು.

" ಇನ್ ಆಂಕೋಕೆ ಮಸ್ತಿ ಕೆ ಮಸ್ತಾನೆ ಹಜಾರೋ ನೇ .." ಎನ್ನುವ ಆಕರ್ಷಕ ಹಾಡು ಹಾಡುತ್ತಾ ತನ್ನ ಬದುಕಿನಲ್ಲೂ ಚಲುವಿನ ಹೃದಯ ಒಡೆದು ಹೋಳು ಮಾಡಿಕೊಂಡವಳು ನಟಿ ರೇಖಾ. ರೇಖಾಳ ಚಿತ್ರ ಜೀವನದ ಕಥನಗಳನ್ನ ನೋಡಬೇಕೆಂದರೆ ಅವಳ ಅಪ್ಪ ಅಮ್ಮಂದಿರ ಕಥನಗಳನ್ನೇ ನೋಡಬೇಕು.

" ಸಲಾಮೆ ಇಷ್ಕ ಮೇರಿ ಜಾನ್ " ಎನ್ನುವ ಮುಖದ್ದರ್ ಕಾ ಸಿಂಕಂದರ್ ಹಾಡಿನಂತೆಯೇ ಪ್ರೇಮಿಯನ್ನ ತನ್ನ ಕಣ್ಣಲ್ಲೇ ಹಿಡಿದು ಚಲ್ಲಾಡುತ್ತಾ ಒನಪು ವಯ್ಯಾರಗಳಲ್ಲಿ ತೂಗಿ ಬಿಸಾಕುತಿದ್ದ ರೇಖಾ ಮೂಲತಹ ಬೋಲ್ಡ ನಟಿ ,'ಯಾರು ಏನೆಂದರೆ ನನಗೇನು' ಎನ್ನುವಂತೆ ಬದುಕಿದವಳು. ಊರಿಗೆ ಊರೇ ತನ್ನನ್ನು ಚಲ್ಲು ಚಲ್ಲಾದ ಹುಡುಗಿ ಅಂದರೂ ಆ ಬಗ್ಗೆ 'ಡೋಂಟ್ ಕೇರ್' ಅನ್ನುತಿದ್ದಾಕೆ.

" ಆಪ್ ಕೆ ಆಂಕೋಮೆ ಕುಛ್ ಮೆಹಕೆ ಹುವೆಸೇ ರಾಜ್ ಹೇ.." ಎಂಬ ವಿನೋದ್ ಮೆಹ್ರನ ಜೊತೆಯ ಸುಂದರ ಹಾಡಿನಂತೆ ರೇಖಾ ಒಲವಿನ ಝರಿ ಸದಾ ಸೊಬಗನದೇ ಆಗಿತ್ತು. ಮಜಾ ಗೊತ್ತಾ? ಆಕೆಗೆ ಗಂಡಸರೆಂದರೆ ಒಂಥರಾ ಅಲರ್ಜಿ!. ಅಟ್ ದಿ ಸೇಮ್ ಟೈಮ್ ವಿಚಿತ್ರ ವ್ಯಾಮೋಹ!!. ಹಚ್ಚಿಕೊಂಡರೆ ಜೀವವನ್ನೇ ಕೊಡುವಷ್ಟು ಪ್ರೀತಿಸುತ್ತಿದ್ದಳು.ಆದರೆ ಅದೇಕೋ ಅವರಾಗಿ ಅವರೇ ಮೈಮೇಲೆ ಏರಿ ಬಂದಾಗ ಕನಿಕರ ಇಲ್ಲದೇ ಎಡಗೈಯಿಂದ ಹಂಗೇ ತಳ್ಳಿ ಬಿಡುತಿದ್ದಳು.



ಆದರೆ ಆಕೆ ಬರಿ ಇದನ್ನೇ ಮಾಡಲಿಲ್ಲ. ಎಲ್ಲರಂತೆ ಬದುಕಿನಲ್ಲಿ ಸೆಟಲ್ ಆಗಬೇಕೆಂದು ಮದುವೆ ಯಾದಳು. ಒಂದಲ್ಲ ಎರಡಲ್ಲ ಅಂತ ನಾಲ್ಕು ಗಂಡಸರ ಮನೆಯಲ್ಲಿ ಸಂಸಾರ ನಡೆಸಿದಳು. ಆದರೆ ಅವರಲ್ಲಿ ಬಹುತೇಕರು ಆತ್ಮ ಹತ್ಯೆ ಮಾಡಿಕೊಂಡರು ಇಲ್ಲಾ ಆಕಸ್ಮಿಕ ಸಾವಿಗೆ ಶರಣಾದರು. ಅಲ್ಲಿಂದಲೇ ಒಂದು ರೂಮರ್ ಹುಟ್ಟಿಕೊಂಡಿತು 'ರೇಖಾಳನ್ನ ಮದುವೆಯಾದ ಗಂಡಸಿಗೆ ಹೆಚ್ಚು ದಿನ ಬದುಕುವ ಅರ್ಹತೆ ಇಲ್ಲ.!"

ರೇಖಾ ಹೆದರಲಿಲ್ಲ! ಇಡೀ ಜಗತ್ತನ್ನೇ ಎದುರು ಹಾಕಿಕೊಂಡು ಬದುಕಿದಳು. ಅವಳಿಗೆ ತನ್ನ ಹಠ ಮುಖ್ಯ.ತನ್ನ ಸಂತೋಷ ಮುಖ್ಯ. ತನ್ನ ಮಾತೇ ನಡೆಯಬೇಕೆಂಬ ವಿಲಕ್ಷಣ ಹಠ.ಇದಕ್ಕೆಲ್ಲಾ ಕಾರಣ ಏನು? ಅವಳು ಮೊದಲಿಂದಲೂ ಹೀಗಿದ್ದಳಾ?ಅಥವಾ ಬಣ್ಣದ ಲೋಕವೇ ಅವಳ ಮನಸ್ಸನಿಲ್ಲಿ ಇಂತಹ ವಿಲಕ್ಷಣ ಬಿಡಿಸಿತಾ?ಗೊತ್ತಿಲ್ಲ.ಆದರೆ ಭಾಷೆಗೊತ್ತಿಲ್ಲವೆಂದು ಛೇಡಿಸಿದವರ ಎದರೇ ಆಕೆ ಗೆದ್ದು ನಿಂತಳು.ಚಂದದ ಬಿಳಿ ಬಣ್ಣದ ಸ್ಟಾರ್ ನಟಿಯರ ಎದರು ಇವಳಾವ ಲೆಕ್ಕ ಎಂದವರನ್ನೇ ತನ್ನ ಹಿಂದೆ ಸುತ್ತಿಕೊಳ್ಳುವಂತೆ ಸಾಧಿಸಿ ನಿಂತಳು.ಮೇಕಪ್ ಮತ್ತು ಉಡುಗೆ ಅಂತ ತಯಾರಿಯಲ್ಲಿ ಅತ್ಯಂತ ಕ್ವಿಕ್ ಆಗಿ ತಯಾರಾಗುತ್ತಿದ್ದ ಏಕೈಕ ನಟಿ ಈಕೆ. ಮನೆಯಲ್ಲಿ ನಲವತ್ತೆಂಟು ಬಾರಿ ಈಕೆಯ ಒಡವೆಗಳ ಕಳ್ಳತನ ನಡೆದರೂ ಕುಗ್ಗಲಿಲ್ಲ. ತಲೆ ಕೆಡಸಿಕೊಳ್ಳಲಿಲ್ಲ.ಕೊನೆಗೆ ಕಳ್ಳ ಸಿಕ್ಕಿ ಜೈಲು ಪಾಲಾದ ಹದಿನೇಳು ವರ್ಷಗಳ ನಂತರ ಆಭರಣವನ್ನ ಕೋರ್ಟನಿಂದ ವಾಪಾಸು ಪಡೆದಾಕೆ ರೇಖಾ.

ರೇಖಾಳನ್ನ ಬೆನ್ನಟ್ಟಿದ್ದು ಬಗೆ ಬಗೆಯ ಜನ. ಆಕೆ ಉಟ್ಟ ಸೀರೆಯ ಚುಂಗು ಮುಟ್ಟಿದರೆ ಸಾಕು ನನ್ನ ಜೀವನವೇ ಸಾರ್ಥಕ ಎಂದು ಹೇಳುವ ಅಭಿಮಾನಿಗಳು, "ನೀನು ಸಿಗದಿದ್ದರೆ ನಾನು ಸತ್ತೇ ಹೋಗುತ್ತೇನೆ" ಎನ್ನುವ ಪಾಗಲ್ ಪ್ರೇಮಿಗಳಿಗೆ ರೇಖಾ ಮಾತ್ರ 'ಯಾರಿಗಾಗಿ ಯಾರೂ ಸಾಯುವುದಿಲ್ಲ ಇಂಥ ಧಮಕಿಗಳಿಗೆ ನಾನು ಹೆದರುವುದಿಲ್ಲ'.ಔಟ್ ಎಂದು ಬಿಡುತಿದ್ದಳು.

ರೇಖಾಳ ಒಲವಿನ ಕಥನವೆಂದರೆ ಅದು ವಿಕ್ಷಿಪ್ತ ಪ್ರೇಮಗಳ ಕಹಾನಿ! ಪ್ರೀತಿಗಾಗಿ ಹಂಬಲಿಸುವ ಕೃಷ್ಣ ಸಖಿಯರನ್ನ ನೆನಪಿಗೆ ತರುವಂತದ್ದು. ಬಾಲ್ಯದಿಂದಲೂ ಪ್ರೀತಿಯನ್ನ,ವಾತ್ಸಲ್ಯವನ್ನ ಬಿನ್ನಟ್ಟಿದ ರೇಖಾಗೆ ಸಿಕ್ಕದ್ದು ಬೇಜಾವಬ್ದಾರಿ ಅಪ್ಪ.ಆತ ಸದಾ ಇನ್ನೊಬ್ಬಳೊಂದಿಗೆ ಅಲೆಯುವುದನ್ನೇ ಕಾಯಕ ಮಾಡಿಕೊಂಡಾತ.ಇದಕ್ಕೂ ಮುಖ್ಯವಾಗಿ ಆಕೆಯ ತಾಯಿ ಪುಷ್ಪವಲ್ಲಿ.ಆಕೆಗೆ ಮಗಳ ಮೈಯಲ್ಲಿ ಕಂಡದ್ದು ವಾತ್ಸಲ್ಯವಲ್ಲ ಹಣದ ಥೈಲಿ!.ಬೆನ್ನಿಗಂಟಿದ ಇಂತಹ ಚರಿತ್ರೆಯಿಂದಲೇ ರೇಖಾ ಇನ್ನೊಬ್ಬರಿಂದ ಅನ್ನಿಸಿಕೊಳ್ಳುವ ಪ್ರಮೇಯಕ್ಕೆ ಸಿಲುಕಿದ್ದು ಇಂಟ್ರ್ಯೂ ಗಳೆಂದರೆ ದೂರ ದೂರ ಉಳಿದ್ದದ್ದು.

ವಿನೋದ್ ಮೆಹ್ರನಾ ಒಲವಿಗೆ ಸೋತ ಪತ್ನಿಯಾಗಿ ಆತನ ತಾಯಿಗೆ ಸೊಸೆಯಾಗಿ ಹೊಸಿಲು ದಾಟಿ ಬಂದ ರೇಖಾಳನ್ನ ಕಂಡದ್ದೇ ಆತನ ತಾಯಿ 'ಒಂದೇ ಒಂದು ಹೆಜ್ಜೆ ನನ್ನ ಮನೆಯ ಹೊಸಿಲು ದಾಟಿದರೆ ರಕ್ತ ಪಾತ,ಇಲ್ಲಿಂದ ಜಾಗ ಖಾಲಿ ಮಾಡದಿದ್ದರೆ ಏನ್ ಮಾಡ್ತಿನಿ ನೋಡ್ತಾ ಇರು... ಎಂದು ರೇಖಾಳಿಗೆ ಗದರಿಸುತ್ತಲೇ.. ಏನಾಗುತ್ತಿದೆ ಎನ್ನೋದರೊಳಗೇ ಚಪ್ಪಲಿ ಹಿಡಿದು ರೇಖಾಳ ಕೆನ್ನೆ ಥರಗುಟ್ಟುವಂತೆ ಬಾರಿಸೇ ಬಿಟ್ಟಳು!. ಯಾವ ಕೆನ್ನ ಮುಟ್ಟಲು ಕೋಟ್ಯಾಂತರ ಜನ ಕನಸು ಕಾಣುತ್ತಿದ್ದರೊ...! ಅಂಥ ಕೆನ್ನೆ ಚಪ್ಪಲಿ ಏಟಿಗೆ ಸಿಕ್ಕಿ ತತ್ತರಿಸಿ ಹೋಗಿತ್ತು!.

ತೆಳು ಅಫೇರ್‌ಗಳಿಗೆ ಸಿಕ್ಕು ಬೇಸತ್ತ ರೇಖಾಳ ಮನಸ್ಸು ಪ್ರೀತಿ ವಾತ್ಸಲ್ಯಕ್ಕೆ ಹಂಬಲಿಸುತಿತ್ತು. ಆದರೆ ಆಕೆಗೆ ದೇಹ ರುಚಿಯ ಕಾಮಾಂಧರು ಸಿಕ್ಕರೇ ಹೊರತು ಹೃದಯ ಸಿರಿಯ ಜನ ಸಿಗಲಿಲ್ಲ.ಇದ್ದುದರಲ್ಲೇ ಗಾಯಗೊಂಡ ಆಕೆಗೆ ಹಿತವೆನಿಸಿದವನೇ ಅಮಿತಾಬ್ ಬಚ್ಚನ್! ಆತನೂ ' ರೇಖಾಳನ್ನ ಪ್ರೀತಿಸುತ್ತಿದ್ದ ಅದೇ ಹೊತ್ತಿಗೆ ಜಯಾಳನ್ನ ಪೂಜಿಸುತ್ತಿದ್ದ'

" ದೇಖಾ ಏಕ್ ಖ್ವಾಬ್ ತೋ ಯೇ ಸಿಲ್ ಸಿಲೇ ಹುವೇ
ದೂರ್ ತಕ್ ಲಿಗಾ ಹುವೇ ಗುಲ್ ಖಿಲೇ ಹುವೇ"

ರೇಖಾಳ ಚರಿತ್ರೆ ಹಿಂದಿ ಸಿನಿ ಜಗತ್ತಿನ ಅಪ್ಪಟ ಅಭಿನೇತ್ರಿಯ ಸವಾಲುಗಳ ನಡುವೆ ಏಳು ಬೀಳುಗಳನ್ನ ಸೀಳಿ ನೆಲೆಗೊಳ್ಳುವ ಸ್ಟೀರಿಯೋ ಟೈಪ್ ಪಾತ್ರಗಳನ್ನ ದಾಟಿದ ಬಹುಮುಖೀ ಸವಾಲುಗಳ ವೈವಿಧ್ಯಮಯ ಪಾತ್ರಗಳ ಲೋಕ. ಉಮ್ರಾವೋ ಜಾನ್,ಉತ್ಸವ್ ತರದ ಸಿನಿಮಾ ಜೊತೆಗೆ ಲಜ್ಜಾ,ಕಲಿಯುಗ್,ಕೂಬ್ ಸೂರತ್,ಅಗರ್ ತುಮ್ ನಾ ಹೋತೆ,ಇಜಾಹತ್,ಸಿಲ್ ಸಿಲಾ,ಕಿಲಾಡಿ ಯೋಂಕಾ ಕಿಲಾಡಿ,ಸುಹಾಗ್,ಆಸ್ತಾ,ಮುಕದ್ದರ್ ಕಾ ಸಿಂಕಂದರ್, ಮೊದಲಾದ 180 ಕ್ಕೂ ಹೆಚ್ಚು ಸಿನಮಾಗಳು. ನಟನೆಯನ್ನ ಆರಾಧಿಸುತ್ತಿದ್ದ ರೇಖಾ ತನಗೆ ಸಿಕ್ಕ ಪ್ರತಿ ಪಾತ್ರವನ್ನೂ ಹೊಕ್ಕು ಅಭಿನಯಿಸಿದಾಕೆ. ರೇಖಾಳಿಗೆ ಪದ್ಮಶ್ರೀ ಪ್ರಶಸ್ತಿ ಜೊತೆಗೆ ಫಿಲಿಂ ಪೇರ್ ಪ್ರಶಸ್ತಿ, ಯಶ್ ಚೋಪ್ರಾ ಪ್ರಶಸ್ತಿ, ನ್ಯಾಷನಲ್ ಪಿಲಿಂ ಫೇರ್ ಅವಾರ್ಡ,ಸ್ಟಾರ್ ಸ್ಕ್ರೀನ್ ಅವಾರ್ಡ,ಜೀ ಸಿನಿ ಲೈಪ್ ಅಚೀವ್ ಮೆಂಟ್ ಅವಾರ್ಡ, ಸೋನಿ ಗೋಲ್ಡನ್ ಅವಾರ್ಡಗಳೂ ಬಂದಿವೆ.ರೇಖಾ ಕಥನದೊಳಗೆ ಬಹುತ್ವದ ಗುಣವಿದೆ.ಬಡತನ ಮೆಟ್ಟಿ ನಿಂತ ಛಲದ ಸೊಗಡಿದೆ.

## ಅವಳೆನಂದರೇ....



ಅರಸೊತ್ತಿಗೆಯ
ಭೋಗದ ಹಸಿವಿಗೆ
ದಾಸಿ ಸಖಿಯರೇ ಮೃಷ್ಟಾನ್ನ .
ಸೆರಗಾಸಿ ಮೈ ಯನಗಲಿಸಿದ
ಅಂದಗಾತಿಯರನ್ನು
ತನ್ನ ಬೊಗಸೆಯಲ್ಲಿ
ಚರಿತ್ರೆ ಬಂದಿಸಲೇ
ಇಲ್ಲ. ಕಾರಣ
ಈ ಚರಿತ್ರೆಗೂ ಸಹ ಚಾರಿತ್ರ್ಯವೆಂಬುದೇ
ಇಲ್ಲ..

ಕಲ್ಲು ಗುಡಿಯ ಕಲ್ಲು ದೇವರ
ಹಿಡುವಳಿದಾರರು
ಅಮಾಯಕರ ಆಪತ್ತು ಸಂಕಟ ಸರಿಪಡಿಸಿ
ವಿಧಿ ಬರಹ ಬದಲಿಸುವ ಸೋಗು
ಹರಿದ ಹಾಸಿಗೆಯ ನೆತ್ತರು
ಮಡಿವಂತರ ಗುಡಿಗೆ ಮೈಲಿಗೆಯಾಗಲಿಲ್ಲ

ಮೈ ನೆರೆದರೆ ಕೇರಿಯ ತರುಣಿ
ಊರನಾಳುವ ಕಚ್ಚೆ ಸಡಿಲಿಸಿದ್ದು
ಪಂಚಾಯತಿ ಕಟ್ಟೆಗೆ ಬರಲಿಲ್ಲ
ಕನ್ಯತ್ವ ಕಸಿದುಕೊಂಡವರ ಲೆಕ್ಕ
ಯಾವ ಗೌಡತಿ ಹೇಳಲಿಲ್ಲ

ದಿಕ್ಕು ದೆಸೆಯಿಲ್ಲದ
ನೊಂದು ಬೆಂದ
ನಲುಗಿದ ನಾರಿಯರು
ಹಸೆಮಣೆ ದಕ್ಕದೆ
ಕಾಮುಕರ ಪಾಲಾಗಿದ್ದು
ಯಾವ ಧರ್ಮವೂ ಖಂಡಿಸಲಿಲ್ಲ

ಕತ್ತಲು ಹಸಿವು, ಬಡತನ,
ಮನಕಂಜಿ ಒಡಲೊಳಗೆ
ಉದುಕಿಸಿಕೊಂಡ ಅತ್ಯಾಚಾರಗಳು
ಉಚ್ಚ ಧನಿಕರ
ಸಂಪ್ರದಾಯದೊಳಗೆ ಸೇರಿ
ಹೋದವೇ.......?



●ಮಲ್ಲಿಕಾರ್ಜುನ. ಎಂ

# ಅಚ್ಚರಿಗಳ ಸರಮಾಲೆಯನ್ನೇ ಪೋಣಿಸಿದ ಟೋಕಿಯೋ ಒಲಿಂಪಿಕ್ಸ್




ನಿರೀಕ್ಷೆ ಇಟ್ಟಲ್ಲಿ ನಿರಾಸೆ, ಸಣ್ಣ ಕನಸು ಕಂಡಿದ್ದಲ್ಲೇ ದೊಡ್ಡ ಗೆಲುವು. ಹೀಗೆ ಅಚ್ಚರಿಗಳ ಸರಮಾಲೆಯನ್ನೇ ಪೋಣಿಸಿದಂತಿದ್ದ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತ ತನ್ನ ಅಭಿಯಾನವನ್ನು ಅತ್ಯಂತ ಯಶಸ್ವಿ ಎಂಬ ಹಿರಿಮೆಯೊಂದಿಗೆ ಮುಕ್ತಾಯಗೊಳಿಸಿದೆ. 1 ಚಿನ್ನ, 2 ಬೆಳ್ಳಿ, 4 ಕಂಚುಗಳೊಂದಿಗೆ 7 ಪದಕ ಬೇಟೆಯಾಡಿದ ಕ್ರೀಡಾಳುಗಳು, ಒಲಿಂಪಿಕ್ಸ್ ಇತಿಹಾಸದಲ್ಲೇ ಅತಿ ಹೆಚ್ಚು, ಅಥ್ಲೆಟಿಕ್ಸ್‌ನಲ್ಲಿ ಮೊದಲ ಚಿನ್ನ ಎಂಬೆಲ್ಲಾ ದಾಖಲೆಗಳೊಂದಿಗೆ ತ್ರಿವರ್ಣ ಧ್ವಜದ ಕೀರ್ತಿಯನ್ನು ಮುಗಿಲಿಗೇರಿಸಿದ್ದಾರೆ.

ಇತಿಹಾಸದಲ್ಲೇ ಅತಿದೊಡ್ಡ ತಂಡ ದೊಂದಿಗೆ ತೆರಳಿದ್ದ ಭಾರತೀಯ ಕ್ರೀಡಾಪಟುಗಳ ಪೈಕಿ ವೈಯಕ್ತಿಕ ವಿಭಾಗದಲ್ಲಿ 6 ಜನರು ಮತ್ತು ಪುರುಷರ ಹಾಕಿ ತಂಡ ಜಯಶಾಲಿಯಾಗಿದೆ. ಇನ್ನು ಭರವಸೆ ಮೂಡಿಸಿದವರ ಪೈಕಿ ಒಂದಿಷ್ಟು ಜನ ನಿರಾಸೆ ಮೂಡಿಸಿದರೆ, ಗಾಲ್ಫ್, ವೇಟ್‌ಲಿಫ್ಟಿಂಗ್ ಸೇರಿದಂತೆ ಕೆಲ ವಿಭಾಗಗಳಲ್ಲಿ ಭರವಸೆದಾಯಕ ಫಲಿತಾಂಶ ಕಂಡುಬಂತು.

2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ 3, 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ 6 ಮತ್ತು 2016ರ ರಿಯೋ ಒಲಿಂಪಿಕ್ಸ್‌ನಲ್ಲಿ ಕೇವಲ 2 ಪದಕ ಗೆದ್ದಿದ್ದ ಭಾರತ ಈ ಬಾರಿ 7 ಪದಕ ಗೆಲ್ಲುವ ಮೂಲಕ ಸಾರ್ವಕಾಲಿಕ ಗರಿಷ್ಠ ಗೆಲುವಿನ ಸಾಧನೆ ಮಾಡಿತು. ಇನ್ನು ಒಟ್ಟಾರೆ ಚಿನ್ನದ ಸಾಧನೆ ನೋಡಿದರೆ, ಭಾರತ ಈವರೆಗೆ 10 ಚಿನ್ನ ಗೆದ್ದಿದೆ. ಈ ಪೈಕಿ 8 ಪುರುಷರ ಹಾಕಿಯಲ್ಲಿ, ಒಂದು ಅಭಿನವ್ ಬಿಂದ್ರಾಗೆ ಶೂಟಿಂಗ್‌ನಲ್ಲಿ ಮತ್ತೊಂದು ಇದೀಗ ನೀರಜ್‌ಗೆ ಜಾವೆಲಿನ್‌ನಲ್ಲಿ ಸಿಕ್ಕಿದೆ.

## ಪದಕ ಗೆದ್ದವರಿವರು

ಜಾವೆಲಿನ್ ಥ್ರೋದಲ್ಲಿ ನೀರಜ್ ಚೋಪ್ರಾಗೆ ಐತಿಹಾಸಿಕ ಚಿನ್ನ, ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು, ಕುಸ್ತಿಯಲ್ಲಿ ರವಿ ದಹಿಯಾ ಬೆಳ್ಳಿ ಪದಕ ಗೆದ್ದರು. ಬ್ಯಾಡ್ಮಿಂಟನ್‌ನಲ್ಲಿ ಪಿ.ವಿ.ಸಿಂಧು, ಬಾಕ್ಸಿಂಗ್‌ನಲ್ಲಿ ಲವ್ಲೀನಾ ಬೊರ್ಗೊಹೈನ್, ಕುಸ್ತಿಯಲ್ಲಿ ಭಜರಂಗ್ ಪೂನಿಯಾ, ಭಾರತದ ಪುರುಷರ ಹಾಕಿ ತಂಡ ಕಂಚು ಪದಕ ಗೆದ್ದಿದೆ.

## ನಿರಾಸೆ ಮೂಡಿಸಿದವರು

ಈ ಬಾರಿ ಬಾಕ್ಸಿಂಗ್, ಕುಸ್ತಿ, ಶೂಟಿಂಗ್, ಆರ್ಚರಿಯಲ್ಲಿ ಭಾರತಕ್ಕೆ ಹೆಚ್ಚಿನ ಪದಕದ ಇರೀಕ್ಷೆ ಇತ್ತು. ಆದರೆ ಮೇರಿ ಕೋಮ್ ಸ್ವಲ್ಪದರಲ್ಲೇ ಪದಕ ವಂಚಿತರಾದರು. ಇನ್ನು ವಿಶ್ವ ನಂ.1 ಅಮಿತ್ ಪಂಘಲ್ ಕೂಡಾ ಪ್ರೀಕ್ವಾರ್ಟರ್‌ನಲ್ಲೇ ಸೋತು ನಿರಾಸೆ ಮೂಡಿಸಿದರು. ಕುಸ್ತಿಯಲ್ಲಿ ವಿನೇಶ್ ಪೋಗಾಟ್ ಕೂಡಾ ಕ್ವಾರ್ಟರ್ ಫೈನಲ್‌ನಲ್ಲೇ ಸೋತಿದ್ದು ಭಾರತಕ್ಕೆ ಆಘಾತ ಮೂಡಿಸಿತು. ಶೂಟಿಂಗ್‌ನಲ್ಲಿ ಮನು ಭಾಕರ್, ಸೌರಭ್ ಚೌಧರಿ ಅವರದ್ದೂ ನಿರಾಶಾದಾಯ ಪ್ರದರ್ಶನ ಕಂಡುಬಂತು. ಆರ್ಚರಿಯಲ್ಲಿ ದೀಪಿಕಾ ಕುಮಾರಿ ಮತ್ತು ಅತನು ದಾಸ್ ಶೂನ್ಯ ಸಾಧನೆ ಸಾಕಷ್ಟು ನಿರಾಸೆ ಮೂಡಿಸಿತು.

## ಪದಕ ಗೆಲ್ಲದಿದ್ರೂ ಹೃದಯ ಗೆದ್ದರು

ಪದಕ ಗೆಲ್ಲಲಾಗದಿದ್ದರೂ ಕರ್ನಾಟಕದ ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್, ಮಹಿಳಾ ಹಾಕಿ ಆಟಗಾರರು ಭಾರತೀಯರ ಮನಸ್ಸು ಗೆದ್ದಿದ್ದಾರೆ. ವಿಶ್ವದ 200ನೇ ಶ್ರೇಯಾಂಕಿತ ಅದಿತಿ ಅಗ್ರ ಗಾಲ್ಫ್ ಆಟಗಾರ್ತಿಯರಿಗೆ ಪ್ರಬಲ ಪೈಪೋಟಿ ನೀಡಿದ್ದರು. 3 ಸುತ್ತಿನ ಅಂತ್ಯದವರೆಗೂ 2ನೇ ಸ್ಥಾನದಲ್ಲಿದ್ದ ಅದಿತಿ ಅಂತಿಮ ಸುತ್ತಿನಲ್ಲಿ 4ನೇ ಸ್ಥಾನ ಪಡೆದರು. ಇದೇ ಮೊದಲ ಬಾರಿಗೆ ಸೆಮಿಗೆ ತಲುಪಿದ್ದ ಭಾರತದ ಮಹಿಳಾ ಹಾಕಿ ತಂಡ ಕಂಚಿನದ ಕದನದಲ್ಲಿ ಸೋತಿತು. ವಿರೋಚಿತ ಸೋಲು ಕಂಡರೂ 4ನೇ ಸ್ಥಾನದ ಐತಿಹಾಸಿಕ ಸಾಧನೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು. ಡಿಸ್ಕಸ್ ಥ್ರೋನ ಅರ್ಹತಾ ಸುತ್ತಿನಲ್ಲಿ ನೇರವಾಗಿ ಫೈನಲ್ ಪ್ರವೇಶಿಸಿದ್ದ ಕಮಲ್‌ಪ್ರೀತ್ ಕೌರ್, ಪುರುಷರ ಸೂಪರ್ ಹೆವಿವೇಟ್ ಬಾಕ್ಸಿಂಗ್‌ನ ಕ್ವಾರ್ಟರ್ ಫೈನಲ್‌ನಲ್ಲಿ ರಕ್ತ ಜಿನುಗುತ್ತಿದ್ದರೂ ಹೋರಾಡಿ ಸೋತ ಯೋಧ ಸತೀಶ್ ಕುಮಾರ್, ಈಕ್ವೆಸ್ಟ್ರೀಯನ್‌ನಲ್ಲಿ ಅಂತಿಮ ಸುತ್ತಿಗೇರಿದ್ದ ಬೆಂಗಳೂರಿನ ಫವಾದ್ ಮಿರ್ಜಾ ಭವಿಷ್ಯದಲ್ಲಿ ಪದಕದ ಭರವಸೆಯಾಗಿದ್ದಾರೆ.

## ಗುರಿ ತಲುಪಿದ ನೀರಜ್ ಚೋಪ್ರಾ

ಒಂದು ಸಣ್ಣ ಸಣ್ಣ ನಿರ್ಧಾರಗಳು ಅನಿರೀಕ್ಷಿತ ಗುರಿಗಳನ್ನು ತಲುಪಿಸುತ್ತವೆ ಎನ್ನುವುದಕ್ಕೆ ನೀರಜ್ ಚೋಪ್ರಾ ಜೀವನ ಕತೆಯೇ ಉದಾಹರಣೆ. ನೀರಜ್, ಅಂತಾರಾಷ್ಟ್ರೀಯ ಕ್ರೀಡಾಪಟುವಾಗಬೇಕು, ದೊಡ್ಡ ದೊಡ್ಡ ಪದಕಗಳನ್ನು ಗೆಲ್ಲಬೇಕು ಎಂದು ಕ್ರೀಡೆಗೆ ಬಂದವರಲ್ಲ. ಬಾಲ್ಯದಲ್ಲಿ ತೂಕ ಜಾಸ್ತಿ ಇದ್ದ ಕಾರಣ ತೂಕ ಇಳಿಸುವ ಸಲುವಾಗಿ ಅಥ್ಲೆಟಿಕ್ಸ್‌ನಲ್ಲಿ ತೊಡಗಿಕೊಂಡರು. ಈಗ ಒಲಿಂಪಿಕ್ಸ್ ಚಾಂಪಿಯನ್.

ಹರ್ಯಾಣದ ಪಾಣಿಪತ್ ಬಳಿಯ ಸಣ್ಣ ಗ್ರಾಮದ ನೀರಜ್ ಅವರದ್ದು 17 ಸದಸ್ಯರಿರುವ ತುಂಬಿದ ಕುಟುಂಬ. ನೀರಜ್ ಬಹಳ ತುಂಟನಾಗಿದ್ದರು. ಅವರನ್ನು ಯಾವುದಾದರೂ ಒಂದು ಕ್ರೀಡೆಗೆ ಸೇರಿಸಬೇಕು ಎಂದು ಮನೆಯವರೆಲ್ಲಾ ನಿರ್ಧರಿಸಿದಾಗ, ನೀರಜ್‌ರ ಚಿಕ್ಕಪ್ಪ ಅವರನ್ನು ಪಾಣಿಪತ್‌ನ ಶಿವಾಜಿ







ಕ್ರೀಡಾಂಗಣಕ್ಕೆ ಕರೆದೊಯ್ದರು. ದಪ್ಪ ದೇಹದ ನೀರಜ್‌ಗೆ ಓಟದ ಕ್ರೀಡೆಗಳಲ್ಲಿ ಆಸಕ್ತಿ ಇರಲಿಲ್ಲ. ಕ್ರೀಡಾಂಗಣದಲ್ಲಿ ಕೆಲ ಹಿರಿಯರು ಜಾವೆಲಿನ್ ಥ್ರೋ ಎಸೆಯುತ್ತಿದ್ದನ್ನು ಕಂಡು ಮನಸಾಯಿತು. ಅಲ್ಲಿಂದ ಮುಂದಿನದ್ದು ಇತಿಹಾಸ.

## 2016ರಲ್ಲಿ ವಿಶ್ವ ಚಾಂಪಿಯನ್

ನೀರಜ್ ಜಾವೆಲಿನ್ ಥ್ರೋ ಕ್ರೀಡೆಯನ್ನು ಗಂಭೀರವಾಗಿ ಪರಿಗಣಿಸಿ ಅದರಲ್ಲಿ ಒಂದೊಂದೇ ಹೆಜ್ಜೆ ಮುನ್ನಡೆದರು. 2013ರಲ್ಲಿ ಉಕ್ರೇನ್‌ನಲ್ಲಿ ನಡೆದ ವಿಶ್ವ ಕಿರಿಯರ ಚಾಂಪಿಯನ್‌ಶಿಪ್‌ನಲ್ಲಿ ಸ್ಪರ್ಧಿಸಿದರೂ ಪದಕ ಸಿಗಲಿಲ್ಲ. 2014ರಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ಕಿರಿಯರ ಒಲಿಂಪಿಕ್ಸ್ ಅರ್ಹತಾ ಟೂರ್ನಿಯಲ್ಲಿ ಬೆಳ್ಳಿ ಜಯಿಸಿದರು. ಅದು ಅವರ ಮೊದಲ ಅಂತಾರಾಷ್ಟ್ರೀಯ ಪದಕ.

2015ರ ರಾಷ್ಟ್ರೀಯ ಹಿರಿಯರ ಚಾಂಪಿಯನ್‌ಶಿಪ್‌ನಲ್ಲಿ ಸ್ಪರ್ಧಿಸಿ 77.33 ಮೀ. ಎಸೆದು ಪದಕ ಗೆದ್ದರು. ಹಿರಿಯರ ವಿಭಾಗದಲ್ಲಿ ನೀರಜ್‌ಗದು ಮೊದಲ ಪದಕ. ಅವರ ಜೀವನಕ್ಕೆ ತಿರುವು ಕೊಟ್ಟಟೂರ್ನಿಯೆಂದರೆ 2016ರ ಕಿರಿಯರ ವಿಶ್ವ ಚಾಂಪಿಯನ್‌ಶಿಪ್. ಆ ಕ್ರೀಡಾಕೂಟದಲ್ಲಿ 86.48 ಮೀ. ದೂರಕ್ಕೆ ಜಾವೆಲಿನ್ ಎಸೆದು ಅಂಡರ್–20 ವಿಭಾಗದಲ್ಲಿ ವಿಶ್ವ ದಾಖಲೆ ನಿರ್ಮಿಸಿದರು. ಆ ದಾಖಲೆ ಈಗಲೂ ಅವರ ಹೆಸರಿನಲ್ಲೇ ಇದೆ. 2018ರ ಕಾಮನ್‌ವೆಲ್ತ್ ಗೇಮ್ಸ್, ಏಷ್ಯನ್ ಗೇಮ್ಸ್, 2017ರ ಏಷ್ಯನ್ ಚಾಂಪಿಯನ್‌ಶಿಪ್‌ಗಳಲ್ಲಿ ಚಿನ್ನ ಗೆದ್ದಿದ್ದಾರೆ. 2017ರಲ್ಲಿ ಭಾರತೀಯ ಸೇನೆಯಲ್ಲಿ ಜೂನಿಯರ್ ಕಮಿಷನ್ ಅಧಿಕಾರಿಯಾಗಿ ಸೇರ್ಪಡೆಗೊಂಡ ನೀರಜ್, ಈಗ ಸುಬೇದಾರ್ ಆಗಿದ್ದಾರೆ. 2018ರಲ್ಲಿ ಅರ್ಜುನ ಪ್ರಶಸ್ತಿಗೆ ಭಾಜನರಾಗಿದ್ದಾರೆ,

ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತದ ಸ್ಪರ್ಧೆಗಳು ಮುಕ್ತಾಯಗೊಂಡಿವೆ. ಬೆಳ್ಳಿಯೊಂದಿಗೆ ಆರಂಭಗೊಂಡಿದ್ದ ಭಾರತದ ಅಭಿಯಾನ, ಚಿನ್ನದ ಪದಕದೊಂದಿಗೆ ಮುಕ್ತಾಯಗೊಂಡಿದೆ. ಟೋಕಿಯೋ ಒಲಿಂಪಿಕ್ಸ್‌ನಲ್ಲಿ 7 ಪದಕ ಗೆಲ್ಲುವ ಮೂಲಕ ಒಲಿಂಪಿಕ್ಸ್‌ನಲ್ಲಿ ಗರಿಷ್ಠ ಪದಕ ಜಯಿಸಿದ ಸಾಧನೆ ಮಾಡಿದೆ. ಈ ಹಿಂದೆ 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾರತ 6 ಪದಕ ಜಯಿಸಿತ್ತು.

ಕ್ರೀಡಾಕೂಟದ ಅಂತಿಮ ದಿನವಾದ ಭಾನುವಾರ ಭಾರತದ ಯಾವ ಸ್ಪರ್ಧೆಗಳು ಇಲ್ಲ. ಈ ಒಲಿಂಪಿಕ್ಸ್ ಹಲವು ವಿಷಯಗಳಿಂದ ವಿಶೇಷ ಎನಿಸುತ್ತದೆ. ಕ್ರೀಡಾಕೂಟದ ಮೊದಲ ದಿನವೇ ಭಾರತವೇ ಪದಕ ಖಾತೆ ತೆರೆದಿತ್ತು. ಮಹಿಳೆಯರ 49 ಕೆ.ಜಿ. ವಿಭಾಗದ ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಗೆದ್ದು ಮೀರಾಬಾಯಿ ಚಾನು ಇತಿಹಾಸ ಬರೆದಿದ್ದರು. ಭಾರತದ ಸ್ಪರ್ಧೆಯ ಅಂತಿಮ ದಿನ ನೀರಜ್ ಚೋಪ್ರಾ ಚಿನ್ನ ಜಯಿಸಿ, ಅದ್ಧೂರಿ 'ಕ್ಲೈಮ್ಯಾಕ್ಸ್' ನೀಡಿದ್ದಾರೆ.

## ಕೊನೆಗೂ ದೊರೆಯಿತು ಫಲ!

ಭಾರತಕ್ಕಿದು ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ಮೊದಲ ಚಿನ್ನದ ಪದಕ. ಒಟ್ಟಾರೆ ಅಥ್ಲೆಟಿಕ್ಸ್‌ನಲ್ಲಿ ಪದಕ ಗೆದ್ದ 2ನೇ ಕ್ರೀಡಾಪಟು ನೀರಜ್ ಚೋಪ್ರಾ. 1900ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಾರ್ಮನ್ ಪ್ರಿಟ್‌ಚಾರ್ಡ್ 200 ಮೀ. ಓಟ ಹಾಗೂ 200 ಮೀ. ಹರ್ಡಲ್ಸ್‌ನಲ್ಲಿ ಬೆಳ್ಳಿ ಪದಕಗಳನ್ನು ಗೆದ್ದಿದ್ದರು. ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ(ಐಒಸಿ) ಆ ಪದಕಗಳನ್ನು ಇನ್ನೂ ಭಾರತದ ಹೆಸರಿನಲ್ಲೇ ಗುರುತಿಸುತ್ತಿದೆ. ಆದರೆ ಈ ಬಗ್ಗೆ ಹಲವು ಸಂಶೋಧನೆಗಳು ನಡೆದಿದ್ದು, ನಾರ್ಮನ್ ಆ ಒಲಿಂಪಿಕ್ಸ್‌ನಲ್ಲಿ ಗ್ರೇಟ್ ಬ್ರಿಟನ್ ಪರ ಸ್ಪರ್ಧಿಸಿದ್ದರು ಎನ್ನಲಾಗಿದೆ. ಒಲಿಂಪಿಕ್ಸ್‌ನ ವೈಯಕ್ತಿಕ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದ ಭಾರತದ 2ನೇ ಕ್ರೀಡಾಪಟು ನೀರಜ್ ಚೋಪ್ರಾ. 2008ರ ಬೀಜಿಂಗ್ ಒಲಿಂಪಿಕ್ಸ್‌ನ 10 ಮೀ. ಏರ್ ರೈಫಲ್ ಶೂಟಿಂಗ್‌ನಲ್ಲಿ ಅಭಿನವ್ ಬಿಂದ್ರಾ ಚಿನ್ನ ಗೆದ್ದಿದ್ದರು. 13 ವರ್ಷಗಳ ಬಳಿಕ ಭಾರತಕ್ಕೆ ಒಲಿಂಪಿಕ್ಸ್ ಚಿನ್ನ ದೊರೆತಿದೆ. ಭಾರತ ಪುರುಷರ ಹಾಕಿ ತಂಡ 8 ಚಿನ್ನದ ಪದಕಗಳನ್ನು ಜಯಿಸಿದೆ. ಒಟ್ಟಾರೆ ಒಲಿಂಪಿಕ್ಸ್‌ನಲ್ಲಿದು ಭಾರತಕ್ಕೆ 10ನೇ ಚಿನ್ನದ ಪದಕ.




# ಅವಿಸ್ಮರಣೀಯ ಚಿತ್ರಗಳನ್ನು ನಿರ್ದೇಶಿಸಿದ ವೈ.ಆರ್.ಸ್ವಾಮಿ

ತೆರೆಮರೆ

ಕನ್ನಡ ಚಿತ್ರ ಇತಿಹಾಸ


ಭಾಗ–38




ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಭಕ್ತ ಕನಕದಾಸ, ಸಿಪಾಯಿರಾಮು, ಭಲೆಹುಚ್ಚ, ನಂದಗೋಕುಲ, ಮುರೂವರೆ ವಜ್ರಗಳು, ಬಿಡುಗಡೆ, ಸ್ವಯಂವರ ಮುಂತಾದ ರಾಜಕುಮಾರ್ ಅಭಿನಯದ ಚಿತ್ರಗಳನ್ನು ನಿರ್ದೇಶಿಸಿದ ವೈ.ಆರ್.ಸ್ವಾಮಿ ಕನ್ನಡ ಚಲನಚಿತ್ರ ರಂಗಕ್ಕೆ ಅವಿಸ್ಮರಣೀಯ ಚಿತ್ರಗಳನ್ನು ನೀಡಿದರು.

ಯರ್ರಿ ರಾಮಚಂದ್ರಸ್ವಾಮಿ ಅವರ ತಂದೆ ತಾಯಿಗಳ ಸ್ಥಳ ಚಿತ್ರದುರ್ಗ ಜಿಲ್ಲೆಯಾದರೂ ಆಂಧ್ರಪ್ರದೇಶದ ಹೈದರಾಬಾದಿನಲ್ಲಿ ನೆಲೆಸಿದ್ದರು. ಸ್ವಾಮಿ ಹೈದರಾಬಾದಿನಲ್ಲಿ 1922ರ ಸೆಪ್ಟೆಂಬರ್ 26ರಂದು ಜನಿಸಿದರು. ತೆಲುಗಿನ ಮೊಟ್ಟಮೊದಲ ಮಾತನಾಡಿದ ಚಿತ್ರ ಭಕ್ತ ಪ್ರಹ್ಲಾದ'ನಿರ್ದೇಶಿಸಿದ ಖ್ಯಾತಿಗೆ ಭಾಜನರಾದ ಕನ್ನಡಿಗ ಎಚ್.ಎಂ.ರೆಡ್ಡಿಯವರ ಮೊಮ್ಮಗ ವೈ.ಆರ್.ಸ್ವಾಮಿ.





ಕೊಲ್ಲಾಪುರದಲ್ಲಿ ಪ್ರೌಢಶಾಲೆ ವ್ಯಾಸಂಗ ಮುಗಿಸಿ, ಮದರಾಸಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ ಸ್ವಾಮಿ ಬ್ಯಾಂಕಿಂಗ್ ವಿಷಯದಲ್ಲಿ ಎಂ.ಎ. ಆನರ್ಸ್ ಪದವಿಯನ್ನು ಐದನೆ ರ್‍ಯಾಂಕ್‌ನಲ್ಲಿ ಪಡೆದು ಉತ್ತೀರ್ಣರಾದರು. ತಾತಾ ರೆಡ್ಡಿಯವರು ಹಲವಾರು ಮೂಕಿ ಚಿತ್ರಗಳನ್ನು ತೆರೆಗೆ ತಂದಿದ್ದರು. 'ಭಕ್ತ ಪ್ರಹ್ಲಾದ' ಮೂಕಿ ಚಿತ್ರದಲ್ಲಿ ಸ್ವಾಮಿ ಪ್ರಹ್ಲಾದನ ಪಾತ್ರವನ್ನು ನಿರ್ವಹಿಸಿದ್ದರು. ಎಚ್.ಎಂ.ರೆಡ್ಡಿಯವರು ವೈ.ಆರ್.ಸ್ವಾಮಿಯನ್ನು ತಮ್ಮ ಸಹಾಯಕರನ್ನಾಗಿ ತೆಗೆದುಕೊಂಡರು. ಮೊದಲು ನಿರ್ದೇಶಿಸಿದ ಚಿತ್ರ ತೆಲುಗಿನ 'ಪ್ರತಿಜ್ಞಾ'. ನಂತರ ತಮಿಳಿನಲ್ಲಿ 'ಪಂದ್ಯಂ' ಚಿತ್ರ ನಿರ್ದೇಶಿಸಿದರು. 'ವದ್ದಂಟಿ ಡಬ್ಬು' ತೆಲುಗು ಹಾಗೂ 'ಪಣಮ ಪಡುತ್ತಂ ಪಾಡು' ತಮಿಳು ತೆಲುಗು ಅವತರಣಿಕೆಯ ಚಿತ್ರಗಳನ್ನು ವೈ.ಆರ್.ಸ್ವಾಮಿ ನಿರ್ದೇಶಿಸಿದರು.

ಕನ್ನಡಿಗರಾದ ವೈ.ಆರ್.ಸ್ವಾಮಿ ಅವರಿಗೆ ಕನ್ನಡ ಚಿತ್ರವನ್ನು ತಯಾರಿಸಬೇಕೆಂಬ ಹಂಬಲವಿತ್ತು. 1956ರಲ್ಲಿ ತಮ್ಮದೆ ರೋಹಿಣಿ ಚಿತ್ರ ಲಾಂಛನದಲ್ಲಿ 'ರೇಣುಕಾ ಮಹಾತ್ಮೆ' ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದರು. 1960ರಲ್ಲಿ ತೆರೆಕಂಡ 'ಭಕ್ತ ಕನಕದಾಸ' ಇವರ ನಿರ್ದೇಶನದ ಎರಡನೆ ಚಿತ್ರ. ರಾಜಕುಮಾರ್ ಅಭಿನಯದ ಚಿತ್ರವನ್ನು ನಿರ್ದೇಶಿಸುವ ಅವಕಾಶ ಎರಡನೆ ಚಿತ್ರದಲ್ಲೇ ದೊರೆಯಿತು. ಅವರಲ್ಲಿದ್ದ ಆಳವಾದ ಅನುಭವ ಈ ಚಿತ್ರವನ್ನು ಸುಂದರವಾಗಿಸಿತು. ಎಂ.ವೆಂಕಟರಾಜು ಅವರನ್ನು ಈ ಚಿತ್ರದ ಮೂಲಕ ಸ್ವತಂತ್ರ ಸಂಗೀತ ನಿರ್ದೇಶಕರಾಗಿ ಪರಿಚಯಿಸಿದರು.

ಭಕ್ತ ಕನಕದಾಸ ನಂತರ ಸತತವಾಗಿ ವೈ.ಆರ್.ಸ್ವಾಮಿಯವರು ರಾಜಕುಮಾರ್ ಅಭಿನಯದ ಹಲವಾರು ಚಿತ್ರಗಳನ್ನು ನಿರ್ದೇಶಿಸಿದರು. ಸ್ವರ್ಣಗೌರಿ (1962), ಮುರಿಯದ ಮನೆ (1964), ವಾತ್ಸಲ್ಯ





(1965), ಕಠಾರಿವೀರ (1966), ಸತಿ ಸುಕನ್ಯ (1962), ಭಲೇ ರಾಜ (1969), ಭಲೇ ಜೋಡಿ, ಪರೋಪಕಾರಿ, ದೇವರ ಮಕ್ಕಳು (1970), ಸಿಪಾಯಿ ರಾಮು, ಭಲೇ ಹುಚ್ಚ, ನಂದಗೋಕುಲ (1972), ಬಿಡುಗಡೆ, ಸ್ವಯಂವರ, ಮೂರುವರೆ ವಜ್ರಗಳು (1973) ಚಿತ್ರಗಳನ್ನು ವೈ.ಆರ್.ಸ್ವಾಮಿ ನಿರ್ದೇಶಿಸಿದರು. 'ದೇವರ ಮಕ್ಕಳು' ಮ.ನ.ಮೂರ್ತಿ ಅವರ ಕಾದಂಬರಿ ಆಧರಿಸಿದರೆ, ಎನ್.ಪಂಕಜ ಅವರ 'ಬರಲೆ ಇನ್ನು ಯಮುನೆ' ಕಾದಂಬರಿ ಆಧರಿಸಿ 'ಸಿಪಾಯಿ ರಾಮು' ಚಿತ್ರ ರೂಪಿಸಿದರು. ಉತ್ತಮ ಸಂಗೀತ ಹಾಗೂ ಸುಶ್ರಾವ್ಯ ಗೀತೆಗಳನ್ನು ಒಳಗೊಂಡ ಜೇನುಗೂಡು (1963), ಮುದ್ದು ಮೀನ (1967), ಮಮತೆ, ಅತ್ತೆಗೊಂದು ಕಾಲ ಸೊಸೆಗೊಂದು ಕಾಲ (1968), ಮಗ ಮೊಮ್ಮಗ (1974), ಮನೆ ಬೆಳಕು, ದೇವರಕಣ್ಣು, ಅಪರಾಧಿ (1976), ಪಾವನಗಂಗಾ, ತಾಯಿಗಿಂತ ದೇವರಿಲ್ಲ (1977), ಕುದುರೆ ಮುಖ (1978)




ಪಕ್ಕಾ ಕಳ್ಳ, ಸವತಿಯ ನೆರಳು (1979), ಜಾರಿ ಬಿದ್ದ ಜಾಣ (1980), ಅಪೂರ್ವ ಸಂಗಮ (1984) ಬಂಗಾರದಂಥ ಮಗ (1991) ಮುಂತಾದವು ವೈ.ಆರ್.ಸ್ವಾಮಿ ನಿರ್ದೇಶನದ ಇನ್ನಿತರ ಚಿತ್ರಗಳು. ಬಂಗಾಳಿಯ ಪ್ರಸಿದ್ಧ ಕಾದಂಬರಿಕಾರ ನಿಹಾರ್ ರಂಜನ್ ಗುಪ್ತ ಅವರ ಕಾದಂಬರಿ ಆಧರಿಸಿ ತೆಗೆದ 'ದೇವರಕಣ್ಣು' ಅತ್ಯಂತ ಯಶಸ್ವಿ ಚಿತ್ರಗಳಲ್ಲಿ ಒಂದು. 'ಕಠಾರಿ ವೀರ' ಮೂಲಕ ಉಪೇಂದ್ರಕುಮಾರ್ ಅವರನ್ನು ಸಂಗೀತ ನಿರ್ದೇಶಕರಾಗಿ ಬೆಳಕಿಗೆ ತಂದರು.

ತಮ್ಮ ನಿರ್ದೇಶನದ ಹಲವಾರು ಚಿತ್ರಗಳಿಗೆ ವೈ.ಆರ್.ಸ್ವಾಮಿಯವರೇ ಚಿತ್ರಕಥೆ ರಚಿಸಿದ್ದಾರೆ. ಸಿದ್ಧಲಿಂಗಯ್ಯನವರೇ ಮುಂತಾದ ಜನಪ್ರಿಯ ನಿರ್ದೇಶಕರನ್ನು ರೂಪಿಸಿದ ಕೀರ್ತಿ ಇವರೊಂದಿಗಿದೆ. ಒಳ್ಳೆಯ ಟೆನ್ನಿಸ್ ಹಾಗೂ ಬ್ಯಾಡ್‌ಮಿಂಟನ್ ಪಟುವಾದ ಇವರು ಕ್ರೀಡಾಸಕ್ತರು. ಇವರ ಸಹೋದರ ಮಧು ಚಿತ್ರರಂಗದಲ್ಲಿ ಗುರುತಿಸಿಕೊಂಡ ಛಾಯಾಗ್ರಾಹಕ. 'ಸಿಪಾಯಿ




ರಾಮು' ಚಿತ್ರಕ್ಕೆ ರಾಜ್ಯ ಸರ್ಕಾರದ ಪ್ರಶಸ್ತಿ ದೊರೆಯಿತು. ಚಲನಚಿತ್ರ ನಿರ್ದೇಶಕ ಕ್ಷೇತ್ರಕ್ಕೆ ವೈ.ಆರ್.ಸ್ವಾಮಿ ಅವರು ನೀಡಿರುವ ವಿಶಿಷ್ಟ ಕೊಡುಗೆಯನ್ನು ಪರಿಗಣಿಸಿ ರಾಜ್ಯ ಸರ್ಕಾರ 1990–91ನೆ ಸಾಲಿನಲ್ಲಿ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ವೈ.ಆರ್.ಸ್ವಾಮಿ. ಅಕ್ಟೋಬರ್ 2002ರಲ್ಲಿ ಪುಣೆಯಲ್ಲಿ ನಿಧನರಾದರು.

## ನಿಮ್ಮ ಮಾತು

### ಪತ್ರಿಕೆ ವಿಶಿಷ್ಟವಾಗಿ ಮೂಡಿ ಬರುತ್ತಿದೆ

ಕೆಂಧೂಳಿ ವಾರ ಪತ್ರಿಕೆ ಪ್ರತಿ ವಾರವೂ ರಾಜಕೀಯ ಸುದ್ದಿಗಳ ವಿಶ್ಲೇಷಣೆಗಳು ತುಂಬಾ ಚನ್ನಾಗಿ ಬರುತ್ತಿವೆ, ಈ ವಾರ ಆರ್‌ಎಸ್‌ಎಸ್,ಬಿಎಸ್‌ವೈ ನಡುವೆ ಬೊಮ್ಮಾಯಿ ಆಟ ಎನ್ನುವ ವಿಶಿಷ್ಟ ಮತ್ತು ಬೊಮ್ಮಾಯಿ ಅವರ ನಿಜವಾದ ಆಟದ ಕುರಿತ ವಿಶ್ಲೇಷಣೆ ತುಂಬಾ ಚನ್ನಾಗಿ ಮೂಡಿ ಬಂದಿದೆ ಹಾಗೆಯೇ ಉಮಾಪತಿ ಅವರ ಅಂಕಣ ಕೂಡ ಮನಮುಟ್ಟುವಂತಿದೆ ಸಮಾಜಿಕ ಕಳಕಳಿಯ ಕುರಿತು ಬರೆಯುವ ಅವರ ಬರಹ ಶೈಲಿಯೇ ಅಚ್ಚು ಮೆಚ್ಚು, ಇನ್ನೂ ಹಿರಿಯ ಪತ್ರಕರ್ತ ಬಾಸ್ಕರ್ ರಾವ್ ಅವರ ರಾಜ ಸೂತ್ರ ಅಂಕಣವೂ ಕೂಡ ರಾಜಕೀಯ ನೋಟದ ಎಳೆ ಎಳೆಯನ್ನು ಬಿಚ್ಚಿಡುತ್ತಾರೆ ಒಟ್ಟಾರೆಯಾಗಿ ಪತ್ರಿಕೆ ವಿಶಿಷ್ಟವಾಗಿ ಪತ್ರಿಕೆಗೆ ಭವಿಷ್ಯವಿದೆ ಹೀಗೆ ಮುಂದುವರೆಯಲಿ ಎಂದು ಆಶಿಸುತ್ತೇನೆ.

✹ ವಿಶಾಲಾಕ್ಷಿ ಮೂಲೆಮನೆ ಹುಬ್ಬಳ್ಳಿ.

### ಓದುವ ಪತ್ರಿಕೆ ಕೆಂಧೂಳಿ

ಅವರಿವರ ಪರವಾಗಿ ಬರೆಯುವ ಮೂಲಕ ಪತ್ರಿಕೆಗಳು ಪಾತಾಳಕ್ಕೆ ಕುಸಿದಿವೆ; ಯಾವುದೇ ಒಂದು ಚಿಂತನೆ ವಿಶ್ಲೇಷಣೆ ಇಲ್ಲದೆ ಇನ್ನೊಬ್ಬರ ಬಗ್ಗೆ ತೆಗಳಿ ಬರೆಯುವುದು,ಒಬ್ಬರಪರ ಬರೆದು ಜಾಹೀರಾತುಗಳನ್ನು ತುಂಬಿಸಿಕೊಳ್ಳುವ ಈ ಸಮಯದಲ್ಲಿ 'ಕೆಂಧೂಳಿ' ಅತ್ಯುತ್ತಮವಾಗಿ ಹೊರಬರುತ್ತಿದೆ. ಪ್ರತಿವಾರವೂ ಒಂದು ವಿಶಿಷ್ಟತೆಯಿಂದ ಕೂಡಿ ಬರುತ್ತಿದೆ. ನಿಜಕ್ಕೂ ಖುಷಿಯಾಗುತ್ತಿದೆ. ಯಾಕೆಂದರೆ ಓದುವ ಪತ್ರಿಕೆಗಳನ್ನು ರಾಜ್ಯದಲ್ಲಿ ಕಳೆದುಕೊಂಡ ಈ ಹೊತ್ತಿನಲ್ಲಿ ನಿಮ್ಮ ಪತ್ರಿಕೆ ಬಹುತೇಕ ವಿವಿಧ ಕ್ಷೇತ್ರಗಳ ಸುದ್ದಿಗಳನ್ನು ವಿಶ್ಲೇಷಿಸುವುದರ ಮೂಲಕ ಓದುಗರಿಗೆ ಒಂದು ರೀತಿ ಔತಣ ನೀಡಿದಂತೆ. ಅದರಲ್ಲೂ ಒಂದು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಮೂಡಿ ಬರುತ್ತಿರುವುದರಿಂದ ರಾಜ್ಯದಲ್ಲಿ ಇದೊಂದೆ ಪತ್ರಿಕೆ ಎಂದು ನಾನು ಧಾರಾಳವಾಗಿ ಹೇಳಬಯಸುತ್ತೇನೆ .ಕಳೆದ ಎರಡು ವರ್ಷಗಳಿಂದಲೂ ಓದುವ ವಾರ ಪತ್ರಿಕೆಗಳೇ ಇರಲಿಲ್ಲ ಆ ಸ್ಥಾನವನ್ನು ತುಂಬುವ ಮೂಲಕ ಲಂಕೇಶ್ ಪತ್ರಿಕೆ ಮತ್ತು ಹಾಯ್ ಬೆಂಗಳೂರು ನಂತರದಲ್ಲಿ ಕೆಂಧೂಳಿ ರಾಜ್ಯದ ಮನೆ ಮಾತಾಗಲಿದೆ ಎನ್ನುವುದು ನನ್ನ ನಿರೀಕ್ಷೆ ಯಾಕೆಂದರೆ ಕಳೆದ ಹತ್ತು ಹನ್ನೆರಡು ವಾರದಿಂದಿಲೂ ನಿಮ್ಮ ಪತ್ರಿಕೆಯನ್ನು ಗಮನಿಸುತ್ತಿದ್ದೇನೆ ಹೀಗಾಗಿ ಈ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ . ನಿಮ್ಮ ಪತ್ರಿಕೆಗೆ ಭವಿಷ್ಯ ಖಂಡಿತಾ ಇದೆ ಕೆಂಧೂಳಿ ಧೂಳೆಬ್ಬಿಸುತ್ತದೆ .

✹ ಯಶವಂತ್ ಕೆ.ಎಂ. ದಾವಣಗೆರೆ

### ಬಿಗ್‌ಬಾಸ್ ಕುರಿತು ಬರೆದಿದ್ದು ಚನ್ನಾಗಿದೆ

ಪ್ರತಿ ವಾರವೂ ನಿಮ್ಮ ಪತ್ರಿಕೆಯಲ್ಲಿ ನ ಹಿಡ್ ಅಂಡ್ ರನ್ ಮೊದಲಿಗೆ ಓದುವುದು ಪ್ರತಿವಾರವೂ ಸುದ್ದಿವಾಹಿನಿಗಳ ಬಗ್ಗೆ ಬರೆಯುತ್ತಿದ್ದೀರಿ ಈ ವಾರ ಬಿಗ್‌ಬಾಸ್‌ನಲ್ಲಿನ ಅಶ್ಲೀಲತೆಗಳು ಅದರ ಅವ್ಯವಸ್ಥೆಗಳ ಕುರಿತು ಬರೆದಿರುವುದು ನಿಜಕ್ಕೂ ತುಂಬಾ ಚನ್ನಾಗಿದೆ ಅದರಿಂದ ಯಾವುದೆ ಸಂದೇಶವೂ ಇದಲ್ಲ ಇಂತ ರಿಯಾಲಿಟಿ ಶೋ ಅಗತ್ಯವಿಲ್ಲ ಮನೆಯಲ್ಲಿ ಎಲ್ಲರೂ ಕೂತು ನೋಡುವ ಆ ಸಮಯದಲ್ಲಿ ಒಬ್ಬರಿಗೊಬ್ಬರು ತಬ್ಬಿಕೊಳ್ಳುವುದು,ಅಶ್ಲೀಲ ಪದಗಳ ಬಳಕೆ ಮಾಡುವುದು ಹೊಡೆದಾಟ ಇವೆಲ್ಲವೂ ಅಗತ್ಯವಿದೆಯೇ? ಇನ್ನೂ ಉಗುದು ಬರೆಯಬೇಕಿತ್ತು .

✹ ಸುರೇಶ್ ಕುಮಾರ್ ಟಿ.ಎಸ್ ಭದ್ರಾವತಿ

### ಓದುಗರಿಗೆ ಕೊಡುಗೆ

'ಕೆಂಧೂಳಿ' ತುಂಬಾ ಚನ್ನಾಗಿ ಮೂಡಿ ಬರುತ್ತಿದೆ, ಪುಟ ವಿನ್ಯಾಸ, ಸುದ್ದಿಗಳ ಆಯ್ಕೆ ಮತ್ತು ಮನಮಿಡಿತದಂತ ವಿಚಾರಗಳು ಸೇರಿದಂತೆ ರಾಜಕೀಯ ವಿಶ್ಲೇಷಣೆಗಳು ಮನಸೆಳೆಯುತ್ತವೆ. ರಾಜ್ಯದಲ್ಲಿ ಸದ್ಯ ಯಾವ ವಾರ ಪತ್ರಿಕೆ ಇಲ್ಲದ ಈ ಸಂದರ್ಭದಲ್ಲಿ ಬರುತ್ತಿರುವ ನಿಮ್ಮ ಪತ್ರಿಕೆ ಓದುಗರಿಗೆ ಒಂದು ಕೊಡುಗೆಯಂತಿದೆ.

✹ ಭರತೇಶ್.ಬಿ.ವಿ,ಶಿವಮೊಗ್ಗ

### ರಾಜಸೂತ್ರದ ವಿಶ್ಲೇಷಣೆ ಚನ್ನಾಗಿದೆ

ಪತ್ರಿಕೆ ಉತ್ತಮವಾಗಿದೆ.ಪ್ರತಿವಾರವೂ ನೀವು ನೀಡುವ ಸುದ್ದಿಗಳು ಮತ್ತು ವಿಶ್ಲೇಷಣೆಗಳು ಚನ್ನಾಗಿರುತ್ತವೆ. ರಾಜಸೂತ್ರದಲ್ಲಿ ರಾಜಕೀಯ ವಿಶ್ಲೇಣೆ ಚನ್ನಾಗಿದೆ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆ ಕುರಿತು ಸಿದ್ದು ಡಿಕೆಶಿ ನಡುವಿನ ಶೀಥಲ ಸಮರದ ಲೇಖನ ನಿಜಕ್ಕೂ ತುಂಬಾ ಚನ್ನಾಗಿದೆ. ಜೊತೆಗೆ ಹಿಟ್ ಅಂಡ್ ರನ್ ಟಿವಿಗಳ ಬಗ್ಗೆ ಅದರ ಅವ್ಯವಸ್ಥೆಯ ಬಗ್ಗೆ ಸಾಂದರ್ಭಿಕವಾಗಿ ಬರೆಯುತ್ತಿರುವುದು ಚನ್ನಾಗಿದೆ.

✹ ಮಹಂತೇಶ್ ಕೆ. ಕೋಲಾರ

**KENDHOOLI** *Kannada Weekly* kendhooli.com/e-paper/
Volume-01 | Issue-39 PAGE-16 | Rs.16/- AUGUST 12 TO AUGUST 18 , 2021 MAG(2)Npp/49/2020-21



# ಹೊಸ ಯುದ್ಧಕ್ಕೆ ಪ್ರೇಮ್ ರೆಡಿ

ನಿರ್ದೇಶಕ ಪ್ರೇಮ್ ಇತ್ತೀಚೆಗೆ ಸಿನಿಮಾ ಅಲ್ಲದ ಕಾರಣಕ್ಕೆ ಸುದ್ದಿಗೆ ಬಂದಿದ್ದರು ಅದೆಲ್ಲಾಮುಗಿದ ಬಳಿಕ ಇದೀಗ ಮತ್ತೆ ಸುದ್ದಿಯಲ್ಲಿದ್ದಾರೆ ಈ ಬಾರಿ ಸಿನಿಮ ಕಾರಣಕ್ಕೆ ಪ್ರೇಮ್ ಸುದ್ದಿಯಾಗಿದ್ದಾರೆ. ಹೌದು ನಟ ಪ್ರೇಮ್ ತಮ್ಮ ಹೊಸ ಸಿನಿಮಾದ ಚಿತ್ರಕತೆಯನ್ನು ಪೂರ್ಣಗೊಳಿಸಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಹಂಚಿಕೊಂಡಿರುವ ಪ್ರೇಮ್, ತಮ್ಮ 9ನೇ ಸಿನಿಮಾದ ಚಿತ್ರಕತೆಗೆ ವಿಶೇಷ ಪೂಜೆ ನಡೆಸಿ ಶಾಸ್ತ್ರೋಕ್ತವಾಗಿ ಬೂದಕುಂಬಳಕಾಯಿಯನ್ನು ಸಹ ಒಡೆದಿದ್ದಾರೆ. ಪ್ರೇಮ್ ಹಾಕಿರುವ ವಿಡಿಯೋ ಹಾಗೂ ಅದಕ್ಕೆ ನೀಡಿರುವ ಒಕ್ಕಣೆ ನೋಡಿದರೆ ಪ್ರೇಮ್ ಪಕ್ಕಾ ಆಕ್ಷನ್ ಸಿನಿಮಾ ನಿರ್ದೇಶಿಸುತ್ತಿದ್ದಾರೆಯೇ ಎಂಬ ಅನುಮಾನ ಸಹಜ. "ಯಾರಾದರೂ ಯುದ್ಧದಲ್ಲಿ ಹುತಾತ್ಮರಾದರೆ ಅವರ ಸ್ವಾಗತಕ್ಕಾಗಿ ಸ್ವರ್ಗ ಕಾಯುತ್ತಿರುತ್ತದೆ. ಒಂದೊಮ್ಮೆ ಯುದ್ಧದಲ್ಲಿ ಗೆದ್ದರೆ ಅವರಿಗಾಗಿ ಅಧಿಕಾರದ ಕಿರೀಟ ಕಾಯುತ್ತಿರುತ್ತದೆ. ಒಟ್ಟಿನಲ್ಲಿ ಯುದ್ಧ ಒಳ್ಳೆಯದೆ. ಯುದ್ಧ ಈಗ ಶುರುವಾಗುತ್ತಿದೆ" ಎಂದಿದ್ದಾರೆ ನಿರ್ದೇಶಕ ಪ್ರೇಮ್. ಚಿತ್ರಕತೆ ಕಾರ್ಯವನ್ನು ಮುಗಿಸಿದ್ದೇನೆ ಸಿನಿಮಾದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಗಸ್ಟ್ 2021ರಲ್ಲಿಯೇ ಬಿಡುಗಡೆ ಮಾಡಲಿದ್ದೇನೆ" ಎಂದಿದ್ದಾರೆ ಪ್ರೇಮ್.

# ಬೈರಾಗಿ ಪೋಸ್ಟರ್ ಸಖತ್ ಹಿಟ್!





ವಿಜಯ್ ಮಿಲ್ಟನ್ ಕನ್ನಡದಲ್ಲಿ ಮೊಟ್ಟ ಮೊದಲ ಬಾರಿಗೆ ನಿರ್ದೇಶನ ಮಾಡಿರುವ ಶಿವರಾಜ್ ಕುಮಾರ್ ನಟನೆಯ ಬೈರಾಗಿ ಸಿನಿಮಾ ಶೂಟಿಂಗ್ ಬಹುತೇಕ ಪೂರ್ಣವಾಗಿದೆ. ಸಿನಿಮಾದಲ್ಲಿ ಕೇವಲ ಎರಡು ಹಾಡುಗಳ ಶೂಟಿಂಗ್ ಬಾಕಿ ಉಳಿದಿವೆ. 'ಟಗರು' ಯಶಸ್ಸಿನ ಬಳಿಕ ಶಿವರಾಜ್ ಕುಮಾರ್ ಹಾಗೂ 'ಡಾಲಿ' ಧನಂಜಯ್ ಒಟ್ಟಿಗೆ ಕಾಣಿಸಿಕೊಳ್ಳುತ್ತಿರುವ ಸಿನಿಮಾ ಇದಾಗಿರುವುದರಿಂದ ಪ್ರಾರಂಭದಿಂದಲೇ ನಿರೀಕ್ಷೆ ಗರಿಗೆದರಿದೆ. ಇಬ್ಬರೂ ಬೇರೆ ಬೇರೆ ಗೆಟಪ್ ಮೂಲಕ ಮೋಡಿ ಮಾಡಲಿದ್ದಾರೆ ಎಂಬುದು ವಿಶೇಷ. ಈಗಾಗಲೇ ಅಧಿಕೃತವಾಗಿ ಬಿಡುಗಡೆಯಾಗಿರುವ ಶಿವಣ್ಣನ ಹುಲಿ ವೇಷದ ಗೆಟಪ್ ಎಲ್ಲೆಡೆ ವೈರಲ್ ಆಗಿದ್ದು, ಆಟೋ ಹಾಗೂ ಕಾರುಗಳ ಮೇಲೆ ಶಿವಣ್ಣನ ಪೋಸ್ಟರ್ ರಾರಾಜಿಸುತ್ತಿವೆ. ಕೃಷ್ಣ ಸಾರ್ಥಕ್ ನಿರ್ಮಾಣದ ಬೈರಾಗಿ ಸಿನಿಮಾ ಸಾಮಾಜಿಕ ಮಾಧ್ಯಮದಲ್ಲಿ ಸದ್ದು ಮಾಡುತ್ತಿದೆ. ಚಿತ್ರದ ಉಳಿದ ಎರಡು ಹಾಡುಗಳ ಚಿತ್ರೀಕರಣ ಬಾಕಿಯಿದ್ದು. ತಯಾರಕರು ಒಂದು ಬೃಹತ್ ಸೆಟ್ ಅನ್ನು ನಿರ್ಮಿಸಲು ಯೋಜಿಸಿದ್ದಾರೆ. "ನಾಯಕನ ಪರಿಚಯ ಮಾಡುವ ಹಾಡನ್ನು ಅದ್ದೂರಿಯಾಗಿ ಚಿತ್ರೀಕರಿಸಲಾಗುವುದು, ಮತ್ತು ಅದಕ್ಕಾಗಿ ಒಂದು ಸೆಟ್ ಅನ್ನು ನಿರ್ಮಿಸಲು ನಾವು ಯೋಜಿಸುತ್ತಿದ್ದೇವೆ. ಹಾಡಿನ ಚಿತ್ರೀಕರಣಕ್ಕಾಗಿ ನಾವು ಹೆಚ್ಚಿನ ಸಂಖ್ಯೆಯಲ್ಲಿ ಕಲಾವಿದರು ಮತ್ತು ತಂತ್ರಜ್ಞರನ್ನು ಸೇರಿಸಲು ಯೋಜಿಸುತ್ತಿದ್ದೇವೆ. ಇದು ಎಲ್ಲಾ ಹವಾಮಾನ ಮತ್ತು ಕೋವಿಡ್ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಎಲ್ಲವೂ ಯೋಜನೆಯಂತೆ ನಡೆದರೆ, ನಾವು ಆಗಸ್ಟ್ ಅಂತ್ಯದ ವೇಳೆಗೆ ಅಥವಾ ಸೆಪ್ಟೆಂಬರ್ ವೇಳೆಗೆ ಚಿತ್ರೀಕರಣವನ್ನು ಮುಗಿಸುತ್ತೇವೆ ಎಂದು ನಿರ್ಮಾಪಕರು ತಿಳಿಸಿದ್ದಾರೆ. ಶಿವರಾಜಕುಮಾರ್ ಭಜರಂಗಿ 2. ಬಿಡುಗಡೆಗಾಗಿ ಕಾಯುತ್ತಿದೆ. ಈ ಸಿನಿಮಾ ಬಿಡುಗಡೆಯ ನಂತರ ಶಿವಣ್ಣ ತನ್ನ 124 ನೇ ಚಿತ್ರದ ಸೆಟ್ ಗೆ ಸೇರಲಿದ್ದಾರೆ. ರಾಮ್ ಧೂಳಿಪುಡಿ ನಿರ್ದೇಶಿಸಲಿದ್ದಾರೆ.




# ಹಳ್ಳಿಹುಡುಗನ ಕನಸಿಗೊಂದು ಸಿಂಗಾರದ ಬದುಕು..!

ಒಬ್ಬ ಹಳ್ಳಿ ಹುಡುಗ ಕನಸು ಕಟ್ಟಿಕೊಂಡು ಬೆಂಗಳೂರಿನಂತ ಮಹಾನಗರಕ್ಕೆ ಬಂದು ಹಾದಿ–ಬೀದಿಯಲ್ಲಿ ಮಲಗಿ ಅಲ್ಲಿ ಇಲ್ಲಿ ಕೆಲಸ ಮಾಡಿ ಕೊನೆಗೆ ಕನಸಿಗೊಂದು ರೆಕ್ಕೆ ಕಟ್ಟಿಕೊಂಡು ಶ್ರಮವಹಿಸಿದ ಅ ಕನಿಸಿಗೆ ಸಿಂಗಾರದ ಬದುಕು ಕಟ್ಟಿಕೊಳ್ಳುವ ಸಮಯ ಬಂದೊದಗಿದೆ ಆ ಕನಸಿನ ಹುಡುಗನೇ ಬಿಗ್ ಬಾಸ್ ಸೀಸನ್ 8 ರ ವಿನ್ನರ್ ಪಾವಗಡ ಮಂಜು.

ಕಲರ್ಸ್ ಕನ್ನಡದಲ್ಲಿ ಪ್ರಸಾರವಾದ ಆಗಸ್ಟ್ 8 ರಂದು ನಡೆದ ಫಿನಾಲೆಯಲ್ಲಿ ಮಜಾಭಾರತ ಖ್ಯಾತಿಯ ಹಾಸ್ಯ ನಟ ಮಂಜು ಪಾವಗಡ ಕಿಚ್ಚ ಸುದೀಪ್ ನಡೆಸಿಕೊಟ್ಟ ಜನಪ್ರಿಯ ರಿಯಾಲಿಟಿ ಟಿವಿ ಶೋನಲ್ಲಿ 20 ಇತರ ಸ್ಪರ್ಧಿಗಳನ್ನು ಹಿಂದಿಕ್ಕಿ ಗೆದ್ದರು. ಟ್ರೋಫಿ ಮತ್ತು 53 ಲಕ್ಷ ರೂಪಾಯಿಗಳ ನಗದು ಬಹುಮಾನವನ್ನು ಮನೆಗೆ ಕೊಂಡೊಯ್ದರು. ಈ ಬಗ್ಗೆ ಮಾತನಾಡಿದ ಮಂಜು ಪಾವಗಡ, ಈ ಹಣವನ್ನು ಏನು ಮಾಡಬೇಕೆಂದು ಇನ್ನೂ ಲೆಕ್ಕಾಚಾರ ಹಾಕಿಲ್ಲ. ನಾನು ನನ್ನ ಜೀವನದಲ್ಲಿ ಅಷ್ಟೊಂದು ಹಣವನ್ನು ನೋಡಿಲ್ಲ. ಹಾಗಾಗಿ, ಇದನ್ನು ಏನು ಮಾಡಬೇಕೆಂದು ನನಗೆ ಗೊತ್ತಿಲ್ಲ. ನಾನು ಯಾವಾಗಲೂ ನನ್ನ ಹೆತ್ತವರನ್ನು ಚೆನ್ನಾಗಿ ನೋಡಿಕೊಳ್ಳಲು ಬಯಸುತ್ತೇನೆ, ಈ ಹಣದಿಂದ ನಾನು ಅದನ್ನು ಪೂರೈಸುವುದು ಖಚಿತ ಎಂದು ಹೇಳಿದ್ದಾರೆ. ಮಜಾ ಭಾರತ ಕಾಮಿಡಿ ಕಾರ್ಯಕ್ರಮವು ನನ್ನ ಜೀವನದ ಮಹತ್ವದ ತಿರುವು. ಬ್ಯಾಚುಲರ್ ಸ್ಕಿಟ್ ಖ್ಯಾತಿ ತಂದುಕೊಟ್ಟಿತು. ಈ ಸ್ಕಿಟ್ ಮೂಲಕ ಜನರು ನನ್ನನ್ನು ಲ್ಯಾಗ್ ಮಂಜ ಎಂದು ಕರೆಯಲಾರಂಭಿಸಿದರು. ಅಂದಿನಿಂದ ನಾನು ಹಿಂತಿರುಗಿ ನೋಡಲಿಲ್ಲ. ಸುಮಾರು ನಾಲ್ಕು ವರ್ಷಗಳ ಕಾಲ ಮಜಾ ಭಾರತದ ಭಾಗವಾದ ನಂತರ ಬಿಗ್ ಬಾಸ್ ಪ್ರವೇಶದ ಕುರಿತು ಮಾತನಾಡಿರುವ ಮಂಜು. 'ಮನೆಯೊಳಗೆ ಗುರುತಿಸಿಕೊಂಡ ಮುಖಗಳಲ್ಲಿ ನಾನು ಒಬ್ಬನಾಗಿದ್ದು, ಶುಭಾ ಪೂಂಜಾ, ನಿಧಿ ಸುಬಯ್ಯ ಮತ್ತು ಧಾರಾವಾಹಿ ನಟಿ ವೈಷ್ಣವಿ, ನನ್ನ ಕಾಮಿಕ್ ಸೆನ್ಸ್ ಬಹಳಷ್ಟು ಎದ್ದು ಕಾಣುವಂತೆ ಮಾಡಿದರು. ಇದು ಅನೇಕ ಹೃದಯಗಳನ್ನು ಗೆಲ್ಲಲು ನನಗೆ ಸಹಾಯ ಮಾಡಿದೆ. ಅಲ್ಲದೆ, ಈ ಬಿಗ್ ಬಾಸ್ ಸೀಸನ್ ಅನ್ನು ಕೋವಿಡ್ ಕಾರಣದಿಂದಾಗಿ ಎರಡು ಸೀಸನ್‌ಗಳಾಗಿ ವಿಭಜಿಸಲಾಗಿತ್ತು. ಇದೂ ಕೂಡ ನನಗೆ ಸಹಾಯ ಮಾಡಿತು. ನನ್ನ ಹಾಸ್ಯ ಸಮಯವನ್ನು ವೀಕ್ಷಕರು ಎಷ್ಟು ಇಷ್ಟಪಡುತ್ತಾರೆ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಾನು ಎರಡನೇ ಇನ್ನಿಂಗ್ಸ್‌ಗಾಗಿ ಮನೆಗೆ ಪ್ರವೇಶಿಸಿದಾಗ ಉತ್ತಮ ಪ್ರದರ್ಶನ ನೀಡಲು ಇದು ನನ್ನನ್ನು ಉತ್ತೇಜಿಸಿತು ಎಂದು ಹೇಳಿದ್ದಾರೆ.



# ಕ್ರೈಂ ಥ್ರಿಲ್ಲರ್ ಮಾರಿಗೋಲ್ಡ್..!

ಆರಂಭದಿಂದಲೂ ತನ್ನ ಶೀರ್ಷಿಕೆಯ ಮೂಲಕವೇ ನಿರೀಕ್ಷೆ ಹುಟ್ಟಿಸಿರುವ, ತೀರ್ಥಳ್ಳಿ ಹುಡುಗ ದಿಗಂತ್ ಅಭಿನಯದ ಚಿತ್ರ ಮಾರಿಗೋಲ್ಡ್. ಈಗಾಗಲೇ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಗತಿಯಲ್ಲಿದ್ದು, ಚಿತ್ರದ ಡಬ್ಬಿಂಗ್ ಕಾರ್ಯ ಮುಗಿದು, ಹಿನ್ನೆಲೆ ಸಂಗೀತ ಅಳವಡಿಕೆ ಕೊನೇ ಹಂತದಲ್ಲಿದೆ. ಇಷ್ಟರಲ್ಲೇ ಸೆನ್ಸಾರ್ ಅಂಗಳಕ್ಕೆ ಹೋಗಲು ಸಿದ್ದವಾಗಿರುವ 'ಮಾರಿಗೋಲ್ಡ್' ಚಿತ್ರ. ಸದ್ಯದಲ್ಲೇ ಪ್ರೇಕ್ಷಕರ ಮುಂದೆ ಬರಲಿದೆ. ಪಕ್ಕಾ ಕ್ರೈಮ್ ಥ್ರಿಲ್ಲರ್ ಕಥಾನಕ ಹೊಂದಿರುವ ಈ ಚಿತ್ರವನ್ನು ರಾಘವೇಂದ್ರ ಎಂ.ನಾಯಕ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಇದು ರಾಘವೇಂದ್ರ ನಾಯಕ್ ಅವರಿಗೆ ಮೊದಲ ನಿರ್ದೇಶನದ ಚಿತ್ರ. ಈಗಾಗಲೇ ವಿಭಿನ್ನ ಗೆಟಪ್ನ ದಿಗಂತ್ ಅವರ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆಯಾಗಿದ್ದು, ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ಅಲ್ಲದೆ ಇದೇ ಮೊದಲ ಬಾರಿಗೆ ದಿಗಂತ್ ಹೊಸ ರೀತಿಯ ಪಾತ್ರದ ಮೂಲಕ ಪ್ರೇಕ್ಷಕರಿಗೆ ಮೋಡಿ ಮಾಡಲಿದ್ದಾರೆ.

"ಮಾರಿಗೋಲ್ಡ್" ಅಂದಾಕ್ಷಣ, ಅದೊಂದು ಅಂಡರ್‌ವರ್ಲ್ಡ್ ಸಿನಿಮಾ ಇರಬಹುದಾ ಎಂಬ ಪ್ರಶ್ನೆ ಎದುರಾಗುತ್ತದೆ. ಆದರೆ, ಅದು ಅಂಡರ್‌ವರ್ಲ್ಡ್ ಸಿನಿಮಾನಾ ಅಥವಾ ರೌಡಿಸಂ ಕುರಿತಾದ ಕಥೆಯೇ ಎಂಬುದಕ್ಕೆ ಚಿತ್ರ ರಿಲೀಸಾಗೋವರೆಗೆ ಕಾಯಬೇಕು.

ಆರ್.ವಿ.ಕ್ರಿಯೇಷನ್ಸ್ ಮೂಲಕ ರಘುವರ್ಧನ್ ಫಿಲ್ಮ್ಸ್ ಬ್ಯಾನರ್ ನಲ್ಲಿ ರಘುವರ್ಧನ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ರಘುವರ್ಧನ್ ಅವರು ಮೂಲತಃ ನಿರ್ದೇಶಕರಾಗಿದ್ದರೂ, ಯುವ ನಿರ್ದೇಶಕ ರಾಘವೇಂದ್ರ ಅವರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅದಕ್ಕೆ ಕಾರಣ, ರಾಘವೇಂದ್ರ ಎಂ.ನಾಯಕ್ ಅವರು ಮಾಡಿಕೊಂಡಿದ್ದ ಕಥೆ. ಚೆನ್ನಾಗಿದ್ದರಿಂದ, ಚಿತ್ರವನ್ನು ಸಹ ಅವರೇ ನಿರ್ದೇಶಿಸಲಿ ಎಂದು ರಘುವರ್ಧನ್ ಅವಕಾಶ ನೀಡಿದ್ದಾರೆ. ಅಲ್ಲದೆ ಚಿತ್ರವನ್ನು ಅದ್ದೂರಿಯಾಗಿ ನಿರ್ಮಿಸಿದ್ದಾರೆ. ಈ ಹಿಂದೆ ತಿಮ್ಮರಾಯ, ಬದ್ರಿ, ಗುಣವಂತ, ಮಿಸ್ಟರ್ ಎಲ್.ಎಲ್.ಬಿ. ಮೊದಲಾದ ಚಿತ್ರಗಳನ್ನು ರಘುವರ್ಧನ್ ನಿರ್ದೇಶಿಸಿದ್ದರು

ಈ ಚಿತ್ರಕ್ಕೆ ವೀರ್ ಸಮರ್ಥ್ ಅವರ ಸಂಗೀತವಿದ್ದು, ಯೋಗರಾಜ್ ಭಟ್, ಕವಿರಾಜ್ ಮತ್ತು ವಿಜಯ್ ಭರಮಸಾಗರ ಅವರು ಸಾಹಿತ್ಯ ಬರೆದಿದ್ದಾರೆ. ಕೆ.ಎಸ್.ಚಂದ್ರಶೇಖರ್ ಕ್ಯಾಮೆರಾ ಹಿಡಿದರೆ, ಕೆ.ಎಂ.ಪ್ರಕಾಶ್ ಸಂಕಲನವಿದೆ. ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ. ಅರ್ಜುನ್ ರಾಜ್ ಸಾಹಸ, ಕಲೈ ಅವರ ನೃತ್ಯ. ನಿರ್ದೇಶನವಿದೆ.

ದಿಗಂತ್ ಅವರಿಗೆ ಇದೊಂದು ಹೊಸಬಗೆಯ ಚಿತ್ರವಂತೆ. ಅದರಲ್ಲೂ ದಿಗಂತ್ ಮೊದಲ ಬಾರಿಗೆ ಈ ರೀತಿಯ ಪಾತ್ರ ನಿರ್ವಹಿಸಿದ್ದಾರೆ, ಬೆಂಗಳೂರು, ಸಕಲೇಶಪುರದ ಸುತ್ತಮುತ್ತಲ ತಾಣಗಳಲ್ಲಿ ಚಿತ್ರೀಕರಣಗೊಂಡಿರುವ ಈ ಚಿತ್ರದಲ್ಲಿ ಸಂಗೀತಾ ಶೃಂಗೇರಿ ನಾಯಕಿಯಾಗಿದ್ದಾರೆ. ಉಳಿದಂತೆ ಸಂಪತ್‌ಕುಮಾರ್, ಕಾಕ್ರೋಚ್ ಸುಧಿ, ಯಶ್‌ಶೆಟ್ಟಿ, ವಜ್ರಾಂಗ್ ಶೆಟ್ಟಿ, ಬಾಲ ರಾಜ್ವಾಡಿ, ಗಣೇಶ್‌ರಾವ್, ಭಾಸ್ಕರ್ ಪಾಂಡವಪುರ, ಮನಮೋಹನ್ ರೈ, ಮಹಾಂತೇಶ್ ಹೀರೆಮಠ, ಮಿಮಿಕ್ರಿ ಗೋಪಿ ಸೇರಿದಂತೆ ಹಲವು ಕಲಾವಿದರು ನಟಿಸಿದ್ದಾರೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act